ಭಾರತ ಸರಕಾರದ ಸೇವೆಯಲ್ಲಿ

ತೆರೆದ – ಅಂಚೆ

ಇವರಿಗೆ

.....

.....

.....

.....

ರಿಂದ,

ಉಡುಪಿ ಜಿಲ್ಲಾ ಪಂಚಾಯತ್
ರಜತಾದ್ರಿ, ಮಣಿಪಾಲ
ಉಡುಪಿ ಜಿಲ್ಲೆ – 576 104

ಉಡುಪಿ ಜಿಲ್ಲಾ ಪಂಚಾಯತ್

ವಾರ್ಷಿಕ ಆಡಳಿತ ವರದಿ

2017–18

ಉಡುಪಿ ತಾಲೂಕು ಕುತ್ಯಾರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕುತ್ಯಾರು ಶಾಂತಿಗುಡ್ಡೆ
ಕಾನ್ವೆಂಟ್ ರಸ್ತೆ ಸುರಕ್ಷತಾ ಕಾಮಗಾರಿ

ಉಡುಪಿ ತಾಲೂಕು ತೆಂಕನಿಡಿಯೂರು ಗ್ರಾ. ಪಂ. ತೆಂಕನಿಡಿಯೂರು–ಸಂತೆಕಟ್ಟೆ
ತೆಂಕನಿಡಿಯೂರು ರಸ್ತೆ ಸುರಕ್ಷತಾ ಕಾಮಗಾರಿ

ಕುಂದಾಪುರ ತಾಲೂಕು ಅಮಾಸೆಬೈಲು ಗ್ರಾಮದ ಸ.ಹಿ.ಪ್ರಾ. ಶಾಲೆಗೆ
ಹೊಸ ಎರಡು ಕೊಠಡಿ ನಿರ್ಮಾಣ

ಬೋಳಾ ಗ್ರಾಮ ಪಂಚಾಯತ್ ಪೊಸರನ ಕೊಪ್ಪ ಎಂಬಲ್ಲಿ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಅತ್ಯಾಡಿ, ಬೈಂದೂರು ತರಗತಿ ಕೊಠಡಿ ನಿರ್ಮಾಣ

ಕುಂದಾಪುರ ತಾಲೂಕು ತೆಕ್ಕಟ್ಟೆ ಗ್ರಾಮ ಪಂಚಾಯತ್‌ನ ತೆಕ್ಕಟ್ಟೆ ಸರಕಾರಿ
ಪದವಿ ಪೂರ್ವ ಕಾಲೇಜಿಗೆ ನಾಲ್ಕು ತರಗತಿ ಕೋಣೆ ರಚನೆ

ವಾರ್ಷಿಕ ಆಡಳಿತ ವರದಿ

2017–18

ಉಡುಪಿ ಜಿಲ್ಲಾ ಪಂಚಾಯತ್
ಉಡುಪಿ

ಉಡುಪಿ ಜಿಲ್ಲಾ ಪಂಚಾಯತ್‌ನ 2017–18 ನೇ ಸಾಲಿನ ಆಡಳಿತ ವರದಿ

ಮುನ್ನುಡಿ

ಉಡುಪಿ ಜಿಲ್ಲಾ ಪಂಚಾಯತಿಯ 2017–18 ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ತಮ್ಮ ಮುಂದೆ ಇಡಲು ಹರ್ಷಿಸುತ್ತೇನೆ.

ಗಾಂಧೀಜಿಯವರ ಕನಸಾದ ಗ್ರಾಮ ಸ್ವರಾಜವನ್ನು ಗಮನದಲ್ಲಿಟ್ಟುಕೊಂಡು ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನಲ್ಲಿ ರಾಜ್ಯ ಮತ್ತು ಕೇಂದ್ರ ವಲಯದ ಅನುದಾನದೊಂದಿಗೆ ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಸಾಧನೆಗಳನ್ನು ಈ ವರದಿಯಲ್ಲಿ ನೀಡಲಾಗಿದೆ.

ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಗುರಿ ತಲುಪಲು ಕಾರಣರಾದ ಜಿಲ್ಲಾ ಪಂಚಾಯತ್ ಹಾಗೂ ಅಧೀನ ಇಲಾಖೆಗಳ ಅಧಿಕಾರಿಗಳ ಮತ್ತು ಸಿಬ್ಬಂದಿಯ ಶ್ರಮ ಶ್ಲಾಘನೀಯ.

ಸರ್ವರಿಗೂ ಅಭಿನಂದನೆಗಳು

ಶ್ರೀ ಶಿವಾನಂದ ಕಾಪಶಿ, ಭಾ.ಆ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಜಿಲ್ಲಾ ಪಂಚಾಯತ್, ಉಡುಪಿ

ಶ್ರೀ. ದಿನಕರ ಬಾಬು
ಅಧ್ಯಕ್ಷರು,
ಜಿಲ್ಲಾ ಪಂಚಾಯತ್, ಉಡುಪಿ

ಉಡುಪಿ ಜಿಲ್ಲಾ ಪಂಚಾಯತ್‌ನ 2017–18 ನೇ ಸಾಲಿನ ಆಡಳಿತ ವರದಿ

ಪರಿವಿಡಿ

ಕ್ರ.ಸಂ	ವಿವರ	ಪುಟಗಳು
1	ಸಾಮಾನ್ಯ ವಿವರ	1–17
2	ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು	18–35
3	ಸಾರ್ವಜನಿಕ ಶಿಕ್ಷಣ ಇಲಾಖೆ	36–43
4	ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ	44–46
5	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	47–51
6	ಸಮಾಜ ಕಲ್ಯಾಣ ಇಲಾಖೆ	52–55
7	ಐ.ಟಿ.ಡಿ.ಪಿ. ಇಲಾಖೆ	56–63
8	ಬಿ.ಸಿ.ಎಮ್.ಇಲಾಖೆ	64–80
9	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	81–84
10	ಕೃಷಿ ಇಲಾಖೆ	85–91
11	ತೋಟಗಾರಿಕೆ ಇಲಾಖೆ	92–98
12	ಪಶುಪಾಲನಾ ಇಲಾಖೆ	99–119
13	ಮೀನುಗಾರಿಕಾ ಇಲಾಖೆ	120–129
14	ಸಾಮಾಜಿಕ ಅರಣ್ಯ ಇಲಾಖೆ	130–133
15	ಗ್ರಾಮಾಂತರ ಕೈಗಾರಿಕೆ ಇಲಾಖೆ	134–139
16	ರೇಷ್ಮೆ ಇಲಾಖೆ	140–142
17	ಕೈಮಗ್ಗ ಮತ್ತು ಜವಳಿ ಇಲಾಖೆ	143
18	ಸಹಕಾರ ಇಲಾಖೆ	144–145
19	ನಮೂನೆ 1ರಿಂದ 15	146–166

ಸುತ್ತೋಲೆ ಸಂಖ್ಯೆ: ಗ್ರಾಅಪ: 73:ಗ್ರಾಸಪ: 2008 ದಿನಾಂಕ: 28-1-2009

ಅನುಬಂಧ

ಉಡುಪಿ ಜಿಲ್ಲಾ ಪಂಚಾಯತಿಯ 2017-18 ನೇ ಸಾಲಿನ ವಾರ್ಷಿಕ ಆಡಳಿತ ವರದಿ

1	ಜಿಲ್ಲಾ ಪಂಚಾಯತಿ ವ್ಯಾಪ್ತಿ (ಪ್ರಕರಣ 158)	
	1)ಪ್ರದೇಶ	ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳ ಗ್ರಾಮಾಂತರ ಪ್ರದೇಶಗಳು
	ವಿಸ್ತೀರ್ಣ	3576 ಚದರ ಕಿ.ಮೀ.
	2) ಜನಸಂಖ್ಯೆ	1177361 (2011 ರ ಜನಗಣತಿ ಪ್ರಕಾರ)
	3) ಒಟ್ಟು ಸ್ಥಾನಗಳ ಸಂಖ್ಯೆ (ಪ್ರಕರಣ 159)	
	ಅ)ಚುನಾಯಿತ ಸದಸ್ಯರ ಸಂಖ್ಯೆ	26
	ಆ)ಲೋಕಸಭಾ ಸದಸ್ಯರ ಸಂಖ್ಯೆ	2
	ಇ)ರಾಜ್ಯ ಸಭಾ ಸದಸ್ಯರ ಸಂಖ್ಯೆ	1
	ಈ) ವಿಧಾನ ಸಭಾ ಸದಸ್ಯರ ಸಂಖ್ಯೆ	5
	ಉ) ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ	2
	ಊ) ಸದಸ್ಯರಿಗೆ ಪ್ರಯಾಣ ಭತ್ಯೆ	ರೂ. 33121.00
	ಋ) ಸದಸ್ಯರಿಗೆ ದಿನ ಭತ್ಯೆ	ರೂ. 53460.00
	ಎ) ಸಭಾಭತ್ಯೆ (ಗೌರವ ಧನ)	ರೂ. 1260710.00
2	ಪ್ರಕರಣ 177, 178 ಮತ್ತು 186 ರನ್ವಯ ಮಾಹಿತಿ	
	1) ಅಧ್ಯಕ್ಷರ ಹೆಸರು	ಶ್ರೀ ದಿನಕರಬಾಬು (ದಿ: 01/04/2017 ರಿಂದ 31/03/2018 ರವರೆಗೆ)
	ಅ) ಪಾವತಿ ಮಾಡಿದ ವೇತನಗಳು ಹಾಗೂ ಭತ್ಯೆಗಳು	
	ವೇತನ	ರೂ. 490000.00

	ಮನೆ ಬಾಡಿಗೆ	ರೂ. 195000.00
	ಅತಿಥಿ ಭತ್ಯೆ	ರೂ. 225510.00
	ಪ್ರವಾಸ ಭತ್ಯೆ	ರೂ. 598000.00
	2) ಉಪಾಧ್ಯಕ್ಷರ ಹೆಸರು	ಶ್ರೀಮತಿ ಶೀಲಾ ಕೆ. ಶೆಟ್ಟಿ (ದಿ:01/04/2017 ರಿಂದ 31/03/2018ರವರೆಗೆ)
	ಆ) ಪಾವತಿ ಮಾಡಿದ ವೇತನ ಹಾಗೂ ಭತ್ಯೆಗಳು	
	ವೇತನ	ರೂ. 195000.00
	ಮನೆಬಾಡಿಗೆ	ರೂ. 120000.00
	ಅತಿಥಿ ಭತ್ಯೆ	ರೂ. 24996.00
	ಪ್ರವಾಸ ಭತ್ಯೆ	ರೂ. 71564.00
	ಇ) ಸದಸ್ಯರ ಪ್ರಯಾಣ ಭತ್ಯೆ	ರೂ. 33121.00
	ಸದಸ್ಯರ ದಿನಭತ್ಯೆ	ರೂ. 53460.00
	ಸದಸ್ಯರ ಸಭಾ ಭತ್ಯೆ	ರೂ. 103563.00
	ಸದಸ್ಯರ ಗೌರವ ಧನ	ರೂ. 1260710.00
	3) ಉಪಾಧ್ಯಕ್ಷರಿಗೆ ನಿಯೋಜಿಸಲಾದ ಯಾವುದೇ ಕರ್ತವ್ಯ	ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 194ರ ಪ್ರಕಾರ ಕಾರ್ಯನಿರ್ವಹಿಸುತ್ತಿದ್ದಾರೆ.
	4) ಅವಿಶ್ವಾಸ ನಿರ್ಣಯ ಏನಾದರೂ ಇದ್ದಲ್ಲಿ	–
	ಅ) ಅಧ್ಯಕ್ಷರ ವಿರುದ್ಧ	ನದಾರದು
	ಆ) ಉಪಾಧ್ಯಕ್ಷರ ವಿರುದ್ಧ	ನದಾರದು
	5) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಸ್ಪರ್ಧಿಸಿದ್ದರೇ ಅಥವಾ ವ್ಯಾಜ್ಯಗಳಿವೆಯೇ	ಅವಿರೋಧ ಆಯ್ಕೆಯಾಗಿರುತ್ತದೆ.

	6) ಹೆಸರು ಮತ್ತು ನೇಮಕವಾದ ದಿನಾಂಕ ಅ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಶ್ರೀ ಶಿವಾನಂದ ಕಾಪಶಿ, ಭಾ.ಆ.ಸೇ (ದಿ:01/04/2017 ರಿಂದ 31/03/2018 ರವರೆಗೆ)
	ಆ) ಉಪಕಾರ್ಯದರ್ಶಿ	ಶ್ರೀ ನಾಗೇಶ್.ಎ ರಾಯ್ಕರ್. (ದಿ:01/04/2017 ರಿಂದ 31/03/2018 ರವರೆಗೆ)
	ಇ) ಯೋಜನಾ ನಿರ್ದೇಶಕರು, ಡಿಆರ್‌ಡಿಎ	ಶ್ರೀಮತಿ. ಕೆ. ನಯನ (ದಿ:01/04/2017 ರಿಂದ 31/03/2018 ರವರೆಗೆ)
	ಈ) ಮುಖ್ಯ ಯೋಜನಾಧಿಕಾರಿ	ಶ್ರೀ ಎ. ಶ್ರೀನಿವಾಸ ರಾವ್, (ದಿ: 01/04/2017 ರಿಂದ 20.03.2018) ಶ್ರೀ ಬಿ.ರಾಧಾಕೃಷ್ಣ ಅಡಿಗ(ಪ್ರಭಾರ) (ದಿ: 20/03/2018 ರಿಂದ 31.03.2018)
	ಉ) ಮುಖ್ಯ ಲೆಕ್ಕಾಧಿಕಾರಿ	ಶ್ರೀ ಎಂ.ಪ್ರವೀಣ್ ಕುಮಾರ್.(ಪ್ರಭಾರ) (ದಿ: 01/04/2017 ರಿಂದ 31/03/2018 ರವರೆಗೆ)
	ಊ) ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾಧಿಕಾರಿ	ಶ್ರೀ ಕೆ. ಶಂಕರ ನಾಯಕ್ (ದಿ: 01–04–2017 ರಿಂದ 31–07–2017) ಶ್ರೀ ಚಂದ್ರಶೇಖರ ನಾಯಕ್, (ದಿ: 01–08–2017 ರಿಂದ 31–03–2018)
	ಸಹಾಯಕ ಯೋಜನಾಧಿಕಾರಿ – 1	ಶ್ರೀ ಕೆ. ಶಂಕರ ನಾಯಕ್ (ದಿ: 01–04–2017 ರಿಂದ 31–07–2017) ಶ್ರೀ ಚಂದ್ರಶೇಖರ ನಾಯಕ್ (ದಿ: 01–08–2017 ರಿಂದ 03–01–2018) ಶ್ರೀಮತಿ ಭಾರತಿ (ದಿ: 04–01–2018 ರಿಂದ 31–03–2018)
	ಸಹಾಯಕ ಕಾರ್ಯದರ್ಶಿ	ಶ್ರೀ ಡೆಂಜಿಲ್ ಫೆಲಿಕ್ಸ್ ಡಿಮೆಲ್ಲೋ, (ದಿ: 01–04–2017 ರಿಂದ 31–03–2018)
	ಸಹಾಯಕ ಯೋಜನಾಧಿಕಾರಿ – 2	ಶ್ರೀ ಶಂಕರನಾರಾಯಣ ಭಟ್ (ಪ್ರಭಾರ) (ದಿ: 01–04–2017 ರಿಂದ 21–2–2018) ಶ್ರೀ ಜೇಮ್ಸ್ ಡಿಸಿಲ್ವಾ (ದಿ: 21–2–2018 ರಿಂದ 31–3–2018)
3	ಚುನಾವಣೆಗಳು (ಪ್ರಕರಣ 160)	

	1) ಸಾಮಾನ್ಯ ಚುನಾವಣೆಯ ದಿನಾಂಕ	20/02/2016
	2) ಉಪಚುನಾವಣೆಗಳೇನಾದರೂ ಆಗಿದಲ್ಲಿ ದಿನಾಂಕ ಕಾರಣ ಮತ್ತು ಫಲಿತಾಂಶಗಳು	ನದಾರದು
	3) ಜಿಲ್ಲಾ ಪಂಚಾಯತಿಯ ಅವಧಿ ವಿಸ್ತರಣೆಗೊಂಡಿದಲ್ಲಿ	ನದಾರದು
	4) ಚುನಾವಣಾ ವೆಚ್ಚ	-----
	5) ಚುನಾವಣಾ ವ್ಯಾಜ್ಯಗಳು ಇದ್ದಲ್ಲಿ	ನದಾರದು
4	ಜಿಲ್ಲಾ ಪಂಚಾಯತಿ ಸಭೆಗಳು ಮತ್ತು ಹಾಜರಾತಿ (ಪ್ರಕರಣ 180)	
	1)ಸಾಮಾನ್ಯ ಸಭೆಗಳ ಸಂಖ್ಯೆ	6
	2) ವಿಶೇಷ ಸಭೆಗಳ ಸಂಖ್ಯೆ	1
	3)ಮುಂದೂಡಲಾದ ಸಭೆಗಳ ಸಂಖ್ಯೆ	ಇಲ್ಲ
	4) ಸಭೆಗಳನ್ನು ನಿಯಮಿತವಾಗಿ ನಡೆಸುವುದು	ನಡೆಸಲಾಗಿದೆ
	5)ಸಭೆಯಲ್ಲಿ ಸದಸ್ಯರ ಹಾಜರಾತಿ	90%
	6)ಕೋರಂಗಾಗಿ ಮುಂದೂಡಲಾದ ಸಭೆಗಳು	ಇಲ್ಲ
	7)ಕಾರ್ಯನಿರ್ವಹಣೆ ನಿಯಮಗಳ ಕ್ರಮ	
	ಬಿ)ನಿರ್ಣಯಗಳ ಸಂಖ್ಯೆ	
	ಮಂಡಿಸಿದ್ದು	276
	ಅಂಗೀಕರಿಸಿದ್ದು	276
	ಚರ್ಚಿಸಿದ್ದು	276
	ಹಿಂಪಡೆದಿದ್ದು	ನದಾರದು
	ಕೈಬಿಟ್ಟಿದ್ದು	ನದಾರದು
5	ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು (ಪ್ರಕರಣ 186, 187 ಮತ್ತು 188)	

	1)ರಚಿಸಲಾದ ಸ್ಥಾಯಿ ಸಮಿತಿ ಹಾಗೂ ಇತರ ಸಮಿತಿಗಳ ಸಂಖ್ಯೆ	**<u>5 ಸ್ಥಾಯಿ ಸಮಿತಿಗಳು</u>** 1. ಸಾಮಾನ್ಯ ಸ್ಥಾಯಿ ಸಮಿತಿ 2. ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ 3. ಸಾಮಾಜಿಕ ನ್ಯಾಯ ಸಮಿತಿ 4. ಶಿಕ್ಷಣ ಮತ್ತು ಆರೋಗ್ಯ ಸಮಿತಿ 5. ಕೃಷಿ ಮತ್ತು ಕೈಗಾರಿಕಾ ಸಮಿತಿ
	2) ಸಮಿತಿಗಳಿಗೆ ಚುನಾವಣೆ ನಡೆದ ದಿನಾಂಕ	08/02/2018
	3)ಸ್ಥಾಯಿ ಸಮಿತಿಗಳ ಸದಸ್ಯರುಗಳ ಸಂಖ್ಯೆ	ಪ್ರತೀ ಸ್ಥಾಯಿ ಸಮಿತಿಯಲ್ಲಿ ಸಮಿತಿ ಅಧ್ಯಕ್ಷರು ಹಾಗೂ 6 ಜನ ಜಿ.ಪಂ. ಚುನಾಯಿತ ಸದಸ್ಯರು ಸೇರಿ ಒಟ್ಟು 7 ಜನ ಸದಸ್ಯರಿರುತ್ತಾರೆ
	4) ಪ್ರತಿ ಸಮಿತಿಯಲ್ಲಿನ ಕಾರ್ಯಗಳ ಬಗ್ಗೆ ಸಂಕ್ಷಿಪ್ತ ವಿವರಣೆ	ಪಂಚಾಯತ್ ರಾಜ್ ಅಧಿನಿಯಮ ಪ್ರಕರಣ 187 ರಲ್ಲಿ ನಿಗಧಿಗೊಳಿಸಿದಂತೆ
	ಇತರೆ ಸಮಿತಿಗಳಿದ್ದಲ್ಲಿ ಅವುಗಳು ನಿರ್ವಹಿಸಿದ ಕಾರ್ಯಗಳು	ನದಾರದು
	ಪ್ರಕರಣ 196 ರನ್ವಯ ಆಡಳಿತ	
	1)ಜಿಲ್ಲಾ ಪಂಚಾಯತಿ ಸಿಬ್ಬಂದಿ ಒಟ್ಟಾರೆ ಮಂಜೂರಾದ ಹುದ್ದೆಗಳ ಸಂಖ್ಯೆ	 87
	2)ಖಾಲಿಯಿರುವ ಹುದ್ದೆಗಳು ಹಾಗೂ ಭರ್ತಿ ಮಾಡದಿರುವುದಕ್ಕೆ ಕಾರಣಗಳು	56 ಸರ್ಕಾರದಿಂದ ಭರ್ತಿಗೊಳಿಸಬೇಕಾಗಿದೆ.
	3) ಪ್ರತಿ ಶಾಖೆಯ ವಾಸ್ತವಿಕ ವೆಚ್ಚ	2515 ಲೆಕ್ಕಶೀರ್ಷಿಕೆ ರೂ. 127.82 ಲಕ್ಷ 3451 ಲೆಕ್ಕಶೀರ್ಷಿಕೆ ರೂ. 25.26 ಲಕ್ಷ
	4) ಅಧಿಕಾರಿ ಹಾಗೂ ಸಿಬ್ಬಂದಿಗಳ ತರಬೇತಿ	7 ಸಿಬ್ಬಂದಿಗಳು, 96 ಅಧಿಕಾರಿಗಳು
	5) ಸಿಬ್ಬಂದಿಯೇತರರ ತರಬೇತಿ	ನದಾರದು

	6)ನಡೆಸಲಾದ ಸಮ್ಮೇಳನ ಮತ್ತು ನೀಡಲಾದ ಕೊಡುಗೆ	ನದಾರದು
	7)ದಂಡನೆಗಳು	ನದಾರದು
	8)ಅಧಿಕಾರಿ ಹಾಗೂ ನೌಕರರ ಮನವಿಗಳು	ನದಾರದು
7	ತಾಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ, ವಸ್ತು ಪ್ರದರ್ಶನ, ಕಾರ್ಯಾಗಾರ ಮತ್ತು ಸಮ್ಮೇಳನಗಳಿಗೆ ಕೊಡುಗೆ (ಜಿಲ್ಲಾ ಪಂಚಾಯತ್‌ನಿಂದ ನೀಡಲಾದ ಅನುದಾನ)	
	1)ಅಖಿಲ ಭಾರತ ಮಟ್ಟದ ಸಂಘ ಸಂಸ್ಥೆಗಳು	ನದಾರದು
	2)ರಾಜ್ಯ ಮಟ್ಟದ ಸಂಘ ಸಂಸ್ಥೆಗಳು	ನದಾರದು
	3)ಅಂತರ ರಾಜ್ಯ ಮಟ್ಟದ ಸಂಘ ಸಂಸ್ಥೆಗಳು	ನದಾರದು
	4)ಆರ್ಥಿಕ ಸಂಘ ಸಂಸ್ಥೆಗಳು	ನದಾರದು
	5)ಇತರೆ ಸಂಘ ಸಂಸ್ಥೆಗಳು	ರೂ. 4.00 ಲಕ್ಷ
8	1)ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ನಿಗದಿಪಡಿಸಲಾದ ಒಟ್ಟು ಅನುದಾನ	ರೂ. 5533.06 ಲಕ್ಷ
	2)ವೆಚ್ಚ ಮಾಡಲಾದ ಮೊತ್ತ	ರೂ. 4513.15 ಲಕ್ಷ
9	ಜಿಲ್ಲಾ ಪಂಚಾಯತಿಯಿಂದ ತೆಗೆಯಲಾದ ಸಾಲಗಳು	ನದಾರದು
10	ಸಿಂಕಿಂಗ್ ಫಂಡ್ ರೂಪಿಸಿರುವುದು	ನದಾರದು
11	ಆಯವ್ಯಯದಲ್ಲಿ ಒಳಗೊಂಡಿರದ ಜಿಲ್ಲಾ ಪಂಚಾಯತಿಯು ಮಾಡಿರುವ ವೆಚ್ಚ ಮತ್ತು ಅದಕ್ಕೆ ಕಾರಣಗಳು	ನದಾರದು
12	ಆಯವ್ಯವನ್ನು ಸಕಾಲದಲ್ಲಿ ಮಂಡಿಸ ಲಾಗಿದೆಯೇ?	ಹೌದು
	1)ಜಿಲ್ಲಾ ಪಂಚಾಯತಿಗೆ ಆಯವ್ಯಯವನ್ನು ಮಂಡಿಸಿದ ದಿನಾಂಕ	22/12/2017

	2)ಜಿಲ್ಲಾ ಪಂಚಾಯತಿಯಲ್ಲಿ ಆಯವ್ಯಯವು ಅನುಮೋದನೆಗೊಂಡ ದಿನಾಂಕ ಮತ್ತು ಅದನ್ನು ಸರ್ಕಾರಕ್ಕೆ ರವಾನಿಸಿರುವುದು	22/12/2017 (ಘಟನೋತ್ತರ) 14/12/2017
	3)ಆಯವ್ಯಯದ ಒಟ್ಟಾರೆ ಮೊತ್ತ	ರೂ. 48068.54 ಲಕ್ಷ
13	ಲೆಕ್ಕ ವಿವರಗಳನ್ನು ಸಕಾಲದಲ್ಲಿ ವರ್ಗಾವಣೆ ಮಾಡಲಾಗಿದೆಯೇ?	ಹೌದು 2017–18 ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ದಿನಾಂಕ 30/06/2018 ರಂದು ಸರ್ಕಾರಕ್ಕೆ ಹಾಗೂ ಮಹಾಲೇಖಪಾಲರಿಗೆ ಸಲ್ಲಿಸಲಾಗಿದೆ.
14	ವಸೂಲು ಮಾಡಲಾಗದ ವಜಾ ಮಾಡಲಾಗಿರುವ ಮೊತ್ತ	ನದಾರದು
	1)ಜಿಲ್ಲಾ ಪಂಚಾಯತಿಯಿಂದ	ಇರುವುದಿಲ್ಲ
	2)ಸರ್ಕಾರದ ಪೂರ್ವಾನುಮತಿಯೊಂದಿಗೆ	ಇರುವುದಿಲ್ಲ
15	1)ಲೆಕ್ಕ ತಪಾಸಣೆಯ ದಿನಾಂಕ	2017–18 ನೇ ಸಾಲಿನ ಲೆಕ್ಕ ತಪಾಸಣೆ ಆಗಿರುವುದಿಲ್ಲ. 2016–17ನೇ ಸಾಲಿನ ಲೆಕ್ಕ ತಪಾಸಣೆಯನ್ನು ದಿನಾಂಕ 07/11/2017 ರಿಂದ 16/11/2017 ರವರೆಗೆ ಲೆಕ್ಕ ತಪಾಸಣೆ ಆಗಿರುತ್ತದೆ.
	2)ಲೆಕ್ಕ ಪರಿಶೋಧಕರು ಅನುಮತಿ ನೀಡದ ಅಂಶಗಳು (items) ಮತ್ತು ಅದರ ಮೇಲೆ ಜಿಲ್ಲಾ ಪಂಚಾಯತಿ ಆದೇಶ	ಒಟ್ಟು 16 ಅಂಶಗಳು– ಇವುಗಳಿಗೆ ಸೂಕ್ತ ಉತ್ತರವನ್ನು ಮಾಹಾಲೇಖಪಾಲರಿಗೆ ಸಲ್ಲಿಸಲಾಗಿದೆ.
16	ಲೆಕ್ಕ ಪರಿಶೋಧಕರು ಅನುಮತಿಸದ ವಸೂಲಾದ ಮೊತ್ತದ ಒಟ್ಟು ವಿವರಗಳು ಮತ್ತು ಸದರಿ ಮೊತ್ತದ ಮೇಲೆ ವಸೂಲಾದ ಬಡ್ಡಿ	ನದಾರದು
17	ಪ್ರಕರಣ ರಂತೆ ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಯು ಕೋರಿ ಪಡೆದಿರುವ ಮಾಹಿತಿ	ನದಾರದು
18	ಗ್ರಾಮ ಪಂಚಾಯತಿಗಳು ಜಾರಿಗೊಳಿಸಬೇಕಾದ ಆದೇಶಗಳನ್ನು ಪ್ರಕರಣ 237 ರಡಿಯಲ್ಲಿ ಜಿಲ್ಲಾ ಪಂಚಾಯತಿಯು ಅಮಾನತ್ತು ಗೊಳಿಸಿರುವ ಪ್ರಕರಣಗಳ ಸಂಖ್ಯೆ	1

19	ಪ್ರಕರಣ 268 ರಡಿಯಲ್ಲಿ ಜಿಲ್ಲಾ ಪಂಚಾಯತಿಯು ರದ್ದು ಮಾಡಿರುವ ತಾಲೂಕು ಪಂಚಾಯತಿಗಳ ನಿರ್ಣಯಗಳ ಸಂಖ್ಯೆ	ನದಾರದು
20	ತಾಲೂಕು ಪಂಚಾಯತಿಗಳ ಆದೇಶಗಳ ವಿರುದ್ಧ ಜಿಲ್ಲಾ ಪಂಚಾಯತಿಗೆ ಸಲ್ಲಿಸಲಾದ ಮೇಲ್ಮನವಿಗಳ ಸಂಖ್ಯೆ ಮತ್ತು ಅವುಗಳ ಮೇಲಿನ ತೀರ್ಮಾನ	ನದಾರದು
21	ಜಿಲ್ಲಾ ಪಂಚಾಯತಿಯು ಪರಿಷ್ಕರಿಸಿ ಹೊರಡಿಸಿದ ಆದೇಶಗಳ ಸಂಖ್ಯೆ	ನದಾರದು
22	ಯಾವುದೇ ಸಮಿತಿಯ ತೀರ್ಮಾನಗಳನ್ನು ಜಿಲ್ಲಾ ಪಂಚಾಯತಿಯು ಪರಿಷ್ಕರಣೆ ಮಾಡಿರುವುದರ ಸಂಖ್ಯೆ	ನದಾರದು
23	ಯಾವುದೇ ಸಮಿತಿಯ ತೀರ್ಮಾನವನ್ನು ಜಿಲ್ಲಾ ಪಂಚಾಯತಿಯು ಮಾರ್ಪಡಿಸಿರುವುದರ ಸಂಖ್ಯೆ	ನದಾರದು
24	ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಹೊರಡಿಸಿರುವ ನಿಯಮಗಳ ಸಂಖ್ಯೆ	ನದಾರದು
25	ತಾಲೂಕು ಪಂಚಾಯತಿಗಳು ವಿನಿಯಮಗಳನ್ನು ರಚಿಸಲು ಜಿಲ್ಲಾ ಪಂಚಾಯತಿಯು ಪೂರ್ವಾನುಮೋದನೆ ನೀಡಿರುವ ಸಂಖ್ಯೆ	ನದಾರದು
26	ಜಿಲ್ಲಾ ಪಂಚಾಯತಿಗೆ ಒಟ್ಟಾರೆ ಶುಲ್ಕ ಪಾವತಿಯಾಗಿರುವುದು ಮತ್ತು ಪ್ರಕರಣ 287 ಮತ್ತು 228 ರನ್ವಯ ವಸೂಲಾಗಿರುವ ಬಾಡಿಗೆ ಶುಲ್ಕ	ರೂ.4,62,675/–
27	ಪ್ರಕರಣ 293 ರಡಿಯಲ್ಲಿ ವೆಚ್ಚಗಳಿಗೆ ಸಂಬಂಧಿಸಿದಂತೆ ವಸೂಲು ಮಾಡಲಾದ ಮೊತ್ತ	ನದಾರದು

ಜಿಲ್ಲಾ ಪಂಚಾಯತ್ ಸದಸ್ಯರ ಹೆಸರು ವಿಳಾಸ ಮತ್ತು ದೂರವಾಣಿ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತ್ ಸದಸ್ಯರ ಹೆಸರು	ದೂರವಾಣಿ ಸಂಖ್ಯೆ ಮೊಬೈಲ್
1	ದಿನಕರ ಬಾಬು, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಉಡುಪಿ "ಚಿನ್ನು" ಮನೆ ನಂ 11-182, ಎಸ್.ಡಿ.ಎಂ. ಆಸ್ಪತ್ರೆ ಬಳಿ, ಕಟ್ಟೆಗುಡ್ಡೆ, ಕುತ್ಪಾಡಿ, 574118, ಉಡುಪಿ ತಾಲೂಕು ಮತ್ತು ಜಿಲ್ಲೆ	9916004910
2	ಶೀಲಾ.ಕೆ.ಶೆಟ್ಟಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ಉಡುಪಿ "ಕುಶಿ" ಎರ್ಮಾಳು-574119, ಉಡುಪಿ ತಾಲೂಕು ಮತ್ತು ಜಿಲ್ಲೆ	9632551713
3	ಸುರೇಶ ಬಟ್ಪಾಡಿ, ಜಿಲ್ಲಾ ಪಂಚಾಯತ್ ಸದಸ್ಯರು, ಶಿರೂರು ಕ್ಷೇತ್ರ, ಕಸ್ಟಂ ರಸ್ತೆ, ಅಂಚೆ:ಪಡುವರಿ, ಕುಂದಾಪುರ ತಾಲೂಕು	9448625641
4	ಕೆ.ಬಾಬು ಶೆಟ್ಟಿ, ಜಿಲ್ಲಾ ಪಂಚಾಯತ್ ಸದಸ್ಯರು, ವಂಡ್ಸೆ ಕ್ಷೇತ್ರ, "ಅದಿತಿ" ಅಂಚೆ:ತಗ್ಗರ್ಸೆ-576214, ಕುಂದಾಪುರ ತಾಲೂಕು	9448216999
5	ಹಾಲಾಡಿ ತಾರಾನಾಥ ಶೆಟ್ಟಿ, ಜಿಲ್ಲಾ ಪಂಚಾಯತ್ ಸದಸ್ಯರು, ಸಿದ್ದಾಪುರ ಕ್ಷೇತ್ರ, ಅಂಚೆ: 28 ಹಾಲಾಡಿ, ಕುಂದಾಪುರ ತಾಲೂಕು **(ಪ್ರಸ್ತುತ ಮರಣಹೊಂದಿರುತ್ತಾರೆ)**	
6	ಶಂಕರ ಪೂಜಾರಿ, ಜಿಲ್ಲಾ ಪಂಚಾಯತ್ ಸದಸ್ಯರು, ಬೈಂದೂರು ಕ್ಷೇತ್ರ, ಶ್ರೀ ಸ್ವಾಮಿ ಕೃಪಾ ನಿಲಯ, ತೆಗ್ಗರ್ಸೆ, ಬೈಂದೂರು-576214, ಕುಂದಾಪುರ ತಾಲೂಕು	9886878307 9448300344
7	ಜ್ಯೋತಿ ಎಂ. ಜಿಲ್ಲಾ ಪಂಚಾಯತ್ ಸದಸ್ಯರು, ಕಾವ್ರಾಡಿ ಕ್ಷೇತ್ರ, "ಭಾರತ ಚರಣ" ಮೂಡುಬಗೆ, ಅಂಪಾರು, ಕುಂದಾಪುರ ತಾಲೂಕು	9900928220
8	ಸುಪ್ರೀತಾ ಉದಯ ಕುಲಾಲ್, ಜಿಲ್ಲಾ ಪಂಚಾಯತ್, ಸದಸ್ಯರು, ಹಾಲಾಡಿ ಕ್ಷೇತ್ರ, ಹಾರ್ದಳ್ಳಿ-ಮಂಡಳ್ಳಿ ಗ್ರಾಮ, ಬಿದ್ಕಲ್ ಕಟ್ಟೆ ಅಂಚೆ, ಕುಂದಾಪುರ ತಾಲೂಕು.	9741346003

9	ಗೌರಿ ದೇವಾಡಿಗ, ಜಿಲ್ಲಾ ಪಂಚಾಯತ್ ಸದಸ್ಯರು, ಕಂಬದಕೋಣೆ ಕ್ಷೇತ್ರ, ಹಾಡಿಮನೆ, ಉಪ್ಪುಂದ ಗ್ರಾಮ, ಕುಂದಾಪುರ ತಾಲೂಕು.	9900772925
10	ಲಕ್ಷ್ಮೀ ಮಂಜು ಬಿಲ್ಲವ, ಜಿಲ್ಲಾ ಪಂಚಾಯತ್ ಸದಸ್ಯರು, ಕೋಟೇಶ್ವರ ಕ್ಷೇತ್ರ, "ಪ್ರಕೃತಿ" ಕೋಡಿ ರಸ್ತೆ, ಹಂಗಳೂರು ಗ್ರಾಮ, ಚರ್ಚ್ ಹತ್ತಿರ, ಕುಂದಾಪುರ ತಾಲೂಕು.	7353426895
11	ಶೋಭಾ ಜಿ.ಪುತ್ರನ್, ಜಿಲ್ಲಾ ಪಂಚಾಯತ್ ಸದಸ್ಯರು, ತ್ರಾಸಿ ಕ್ಷೇತ್ರ, "ಶ್ರೀ ಸ್ಕಂದ ಕೃಪಾ" ಕಟ್ ಬೆಲ್ತೂರು, ಕುಂದಾಪುರ ತಾಲೂಕು.	9845563825
12	ಶ್ರೀಲತಾ ಶೆಟ್ಟಿ, ಜಿಲ್ಲಾ ಪಂಚಾಯತ್ ಸದಸ್ಯರು, ಬೀಜಾಡಿ ಕ್ಷೇತ್ರ, "ಶ್ರೀ ದುರ್ಗಾ ನಿಲಯ" ಮೂಡುಗೋಪಾಡಿ, ಕೋಟೇಶ್ವರ, ಕುಂದಾಪುರ ತಾ.	9483296832
13	ರಾಘವೇಂದ್ರ ಕಾಂಚನ್, ಜಿಲ್ಲಾ ಪಂಚಾಯತ್ ಸದಸ್ಯರು, ಕೋಟ ಕ್ಷೇತ್ರ, ಬೆಟ್ಟಿನಮನೆ, ಬಾರಿಕೆರೆ, ಕೋಟತಟ್ಟು ಅಂಚೆ ಮತ್ತು ಗ್ರಾಮ, ಉಡುಪಿ ತಾಲೂಕು	9986887447
14	ಸುಧಾಕರ ಶೆಟ್ಟಿ ಮೈರ್ಮಾಡಿ, ಜಿಲ್ಲಾ ಪಂಚಾಯತ್ ಸದಸ್ಯರು, ಪೆರ್ಡೂರು ಕ್ಷೇತ್ರ, ನಿಯರ್ ಕಿಂಗ್‌ಡಮ್ ಹಾಲ್ ನಂದಿಗುಡ್ಡೆ ಚಾಂತಾರು, ಬ್ರಹ್ಮಾವರ, ಉಡುಪಿ ತಾಲೂಕು.	9880220771
15	ಜನಾರ್ಧನ ತೋನ್ಸೆ, ಜಿಲ್ಲಾ ಪಂಚಾಯತ್ ಸದಸ್ಯರು, ಕಲ್ಯಾಣಪುರ ಕ್ಷೇತ್ರ, "ಹೊಸಮನೆ" ಹೊನ್ನಪ್ಪಕುದ್ರು, ಮೂಡುತೋನ್ಸೆ ಗ್ರಾಮ, ಅಂಚೆ:ಕಪ್ಯಾಣಪುರ–576114, ಉಡುಪಿ ತಾಲೂಕು.	9880173145
16	ಪ್ರತಾಪ ಹೆಗ್ಡೆ ಮಾರಾಳಿ, ಜಿಲ್ಲಾ ಪಂಚಾಯತ್ ಸದಸ್ಯರು, ಮಂದಾರ್ತಿ ಕ್ಷೇತ್ರ, ಮಾರಾಳಿ, ನಾಲ್ಕೂರು ಅಂಚೆ ಮತ್ತು ಗ್ರಾಮ, ಉಡುಪಿ ತಾಲೂಕು	9900410484
17	ಚಂದ್ರಿಕಾ ರಂಜನ್ ಕೇಲ್ಕರ್, ಜಿಲ್ಲಾ ಪಂಚಾಯತ್ ಸದಸ್ಯರು, ಹಿರಿಯಡ್ಕ ಕ್ಷೇತ್ರ, "ಸುವರ್ಣ ಮಹಲ್" ಕಟಪಾಡಿ, ಉಡುಪಿ ತಾಲೂಕು.	7760080559

18	ಶಶಿಕಾಂತ, ಜಿಲ್ಲಾ ಪಂಚಾಯತ್ ಸದಸ್ಯರು, ಪಡುಬಿದ್ರೆ ಕ್ಷೇತ್ರ, ''ಪಾಂಚಮಹಲ್'' ಕಾಡಿಪಟ್ಣ, ಪಡುಬಿದ್ರಿ, ಉಡುಪಿ ತಾಲೂಕು.	9945383543
19	ಗೀತಾಂಜಲಿ ಎಂ.ಸುವರ್ಣ, ಜಿಲ್ಲಾ ಪಂಚಾಯತ್ ಸದಸ್ಯರು, ಕುರ್ಕಾಲು ಕ್ಷೇತ್ರ, ''ಸುವರ್ಣ ಮಹಲ್'' ಕಟಪಾಡಿ, ಉಡುಪಿ ತಾಲೂಕು.	9901035715
20	ಶಿಲ್ಪಾ ಜಿ.ಸುವರ್ಣ, ಜಿಲ್ಲಾ ಪಂಚಾಯತ್ ಸದಸ್ಯರು, ಎಲ್ಲೂರು ಕ್ಷೇತ, ''ಗೀತಾಂಜಲಿ'' ಯೆಣಗುಡ್ಡೆ ಗ್ರಾಮ, ಅಂಚೆ:ಕಟಪಾಡಿ, ಉಡುಪಿ ತಾಲೂಕು ಮತ್ತು ಜಿಲ್ಲೆ	9845538577
21	ವಿಲ್ಸನ್ ರೋಡ್ರಿಗಸ್, ಜಿಲ್ಲಾ ಪಂಚಾಯತ್ ಸದಸ್ಯರು, ಶಿರ್ವ ಕ್ಷೇತ್ರ, ದಡ್ಡಿನ ಹಿತ್ಲು, ಶಿರ್ವ ಗ್ರಾಮ ಮತ್ತು ಅಂಚೆ, ಉಡುಪಿ ತಾಲೂಕು–574116	9448409734
22	ಜ್ಯೋತಿ ಹರೀಶ್, ಜಿಲ್ಲಾ ಪಂಚಾಯತ್ ಸದಸ್ಯರು, ಹೆಬ್ರಿ ಕ್ಷೇತ್ರ, ಶ್ರೀ ಸನ್ನಿಧಿ, ಕಾಡುಹೊಳೆ, ಮುನಿಯಾಲು, ವರಂಗ ಗ್ರಾಮ, ಕಾರ್ಕಳ ತಾಲೂಕು.	9901537081
23	ಉದಯ ಎಸ್.ಕೋಟ್ಯಾನ್, ಜಿಲ್ಲಾ ಪಂಚಾಯತ್ ಸದಸ್ಯರು, ಬಜಗೋಳಿ ಕ್ಷೇತ್ರ, ''ರತ್ನ ನಿವಾಸ'' ಇರ್ವತ್ತೂರು ಅಂಚೆ, ಕಾರ್ಕಳ ತಾಲೂಕು	9845120069
24	ರೇಷ್ಮಾ ಉದಯ ಶೆಟ್ಟಿ, ಜಿಲ್ಲಾ ಪಂಚಾಯತ್ ಸದಸ್ಯರು, ಬೆಳ್ಮಣ್ಣು ಕ್ಷೇತ್ರ, ಗೋಳಿದಡಿ ಮನೆ, ಇನ್ನಾ ಗ್ರಾಮ ಮತ್ತು ಅಂಚೆ, ಕಾರ್ಕಳ ತಾಲೂಕು	9945770735 9844170735
25	ಸುಮಿತ್ ಎಸ್. ಕೌಡೂರು, ಜಿಲ್ಲಾ ಪಂಚಾಯತ್ ಸದಸ್ಯರು, ಬೈಲೂರು ಕ್ಷೇತ್ರ, ಐರೋಡಿ ಮನೆ, ಕೌಡೂರು ಗ್ರಾಮ, ಬೈಲೂರು ಅಂಚೆ, ಕಾರ್ಕಳ, ತಾಲೂಕು.	9008415831
26	ದಿವ್ಯಶ್ರೀ ಗಿರೀಶ್ ಅಮೀನ್, ಜಿಲ್ಲಾ ಪಂಚಾಯತ್ ಸದಸ್ಯರು, ಮಿಯ್ಯಾರು ಕ್ಷೇತ್ರ, ಬಲ್ಜೆ ಮನೆ, ಬೋರ್ಕಟ್ಟೆ ಅಂಚೆ, ಮಿಯ್ಯಾರು ಗ್ರಾಮ, ಕಾರ್ಕಳ ತಾಲೂಕು	9945414561

ದಿನಾಂಕ : 08/02/2018 ರಂದು ಸ್ಥಾಯಿ ಸಮಿತಿಗೆ ನಡೆದ ಚುನಾವಣೆಯಂತೆ ಉಡುಪಿ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿಗಳಿಗೆ ಆಯ್ಕೆಯಾದ ಸದಸ್ಯರುಗಳು

ಯೋಜನಾ ಹಣಕಾಸು ಮತ್ತು ಲೆಕ್ಕಪರಿಶೋಧನಾ ಸ್ಥಾಯಿ ಸಮಿತಿ

1.	ಶ್ರೀ ದಿನಕರ ಬಾಬು, (ಜಿ.ಪಂ ಅಧ್ಯಕ್ಷರು)–ಅಧ್ಯಕ್ಷರು	9916004910
2.	ಶ್ರೀಮತಿ ಜ್ಯೋತಿ ಹರೀಶ್	9901537081
3.	ಶ್ರೀ ಪ್ರತಾಪ ಹೆಗ್ಡೆ ಮಾರಾಳಿ	9900410484
4.	ಶ್ರೀಮತಿ ದಿವ್ಯಶ್ರೀ ಗಿರೀಶ್ ಅಮೀನ್	9945414561
5.	ಶ್ರೀ ಬಟವಾಡಿ ಸುರೇಶ್	9448625641
6.	ಶ್ರೀಮತಿ ಶಿಲ್ಪ ಜಿ. ಸುವರ್ಣ	9845538577
7.	ಶ್ರೀ ವಿಲ್ಸನ್ ರೋಡ್ರಿಗಸ್	9448409734

ಸಾಮಾನ್ಯ ಸ್ಥಾಯಿ ಸಮಿತಿ

1.	ಶ್ರೀಮತಿ ಶೀಲಾ ಕೆ.ಶೆಟ್ಟಿ (ಜಿ.ಪಂ ಉಪಾಧ್ಯಕ್ಷರು)–ಅಧ್ಯಕ್ಷರು	9632551713
2.	ಶ್ರೀಮತಿ ರೇಶ್ಮಾ ಉದಯ ಶೆಟ್ಟಿ	9945770735/9844170735
3.	ಶ್ರೀ ಶಂಕರ ಪೂಜಾರಿ	9886878307/9448300344
4.	ಶ್ರೀಮತಿ ಜ್ಯೋತಿ ಹರೀಶ್	9901537081
5.	ಶ್ರೀಮತಿ ಶಿಲ್ಪ ಜಿ.ಸುವರ್ಣ	9845538577
6.	ಶ್ರೀಮತಿ ಲಕ್ಷ್ಮೀ ಮಂಜು ಬಿಲ್ಲವ,	7353426895
7.	ಶ್ರೀ ಸುಧಾಕರ ಶೆಟ್ಟಿ ಮೈರ್ಮಾಡಿ	9880220771

ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ

1.	ಶ್ರೀ ಉದಯ್ ಎಸ್ ಕೋಟ್ಯಾನ್ –ಅಧ್ಯಕ್ಷರು	9845120069
2.	ಶ್ರೀ ಬಟವಾಡಿ ಸುರೇಶ್	9448625641
3.	ಶ್ರೀ ಶಂಕರ ಪೂಜಾರಿ	9886878307 / 9448300344
4.	ಶ್ರೀಮತಿ ಗೀತಾಂಜಲಿ ಎಂ ಸುವರ್ಣ	9901035715
5.	ಶ್ರೀಮತಿ ಚಂದ್ರಿಕಾ ರಂಜನ್ ಕೇಲ್ಕರ್	7760080559
6.	ಶ್ರೀ ಸುಮಿತ್ ಶೆಟ್ಟಿ	9008415831
7.	ಶ್ರೀಮತಿ ಗೌರಿ ದೇವಾಡಿಗ	9900772925

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

1.	ಶ್ರೀ ಕೆ.ಬಾಬು ಶೆಟ್ಟಿ – ಅಧ್ಯಕ್ಷರು	9448216999
2.	ಶ್ರೀಮತಿ ರೇಶ್ಮಾ ಉದಯ ಶೆಟ್ಟಿ	9945770735 / 9844170735
3.	ಶ್ರೀಮತಿ ಶೋಭಾ ಜಿ.ಪುತ್ರನ್	9916716862
4.	ಶ್ರೀಮತಿ ಲಕ್ಷ್ಮೀ ಮಂಜು ಬಿಲ್ಲವ,	7353426895
5.	ಶ್ರೀ ರಾಘವೇಂದ್ರ ಕಾಂಚನ್	9986887447
6.	ಶ್ರೀ ಜನಾರ್ಧನ ತೋನ್ಸೆ	9880173145
7.	ಶ್ರೀಮತಿ ಶ್ರೀಲತಾ ಶೆಟ್ಟಿ,	9483296832

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

1.	ಶ್ರೀ ಶಶಿಕಾಂತ ಪಡುಬಿದ್ರಿ – ಅಧ್ಯಕ್ಷರು	9945383543
2.	ಶ್ರೀ ಸುಮಿತ್ ಶೆಟ್ಟಿ	9008415831
3.	ಶ್ರೀಮತಿ ಸುಪ್ರೀತಾ ಉದಯ ಕುಲಾಲ	9741346003
4.	ಶ್ರೀಮತಿ ಜ್ಯೋತಿ ಎಂ.	9900928220
5.	ಶ್ರೀಮತಿ ಶ್ರೀಲತಾ ಶೆಟ್ಟಿ,	9483296832
6.	ಶ್ರೀ ಪ್ರತಾಪ ಹೆಗ್ಡೆ ಮಾರಾಳಿ	9900410484

ಮಾರ್ಚ್–2018 ರಲ್ಲಿದ್ದಂತೆ ಉಡುಪಿ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ - ಅಧಿಕಾರಿ / ಸಿಬ್ಬಂದಿಗಳ - ಮಂಜೂರಾದ / ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ.

ಕ್ರ. ಸಂ.	ಹುದ್ದೆ ವಿವರ	ವರ್ಗ	ಮಂಜೂರು	ಭರ್ತಿ	ಖಾಲಿ
1	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	ಎ	1	1	0
2	ಉಪ ಕಾರ್ಯದರ್ಶಿ	ಎ	1	1	0
3	ಮುಖ್ಯ ಯೋಜನಾಧಿಕಾರಿ	ಎ	1	1	0
4	ಮುಖ್ಯ ಲೆಕ್ಕಾಧಿಕಾರಿ	ಎ	1	0	1
5	ಯೋಜನಾ ನಿರ್ದೇಶಕರು, ಡಿಆರ್ ಡಿಎ	ಎ	1	1	0
6	ಸಹಾಯಕ ಯೋಜನಾಧಿಕಾರಿ-1 ಡಿಆರ್ ಡಿಎ	ಎ	1	1	0
7	ಸಹಾಯಕ ಕಾರ್ಯದರ್ಶಿ	ಎ	1	1	0
8	ಯೋಜನಾ ಅಂದಾಜು & ಮೌಲ್ಯಮಾಪನಾಧಿಕಾರಿ	ಎ	1	1	0
9	ಲೆಕ್ಕಾಧಿಕಾರಿ	ಎ	2	1	1
10	ಲೆಕ್ಕ ಅಧೀಕ್ಷಕರು	ಬಿ	4	4	0
11	ಸಹಾಯಕ ಯೋಜನಾಧಿಕಾರಿ-2 ಡಿಆರ್ ಡಿಎ	ಬಿ	1	1	0
12	ಯೋಜನಾ ಸಹಾಯಕರು (ಆರ್ಥಿಕ)	ಬಿ	1	0	1
13	ಅಧೀಕ್ಷಕರು	ಸಿ	3	3	0
14	ತಾಂತ್ರಿಕ ಸಹಾಯಕರು / ಕಿರಿಯ ಇಂಜಿನಿಯರ್	ಸಿ	4	0	4
15	ತಾಂತ್ರಿಕ ಸಹಾಯಕರು / ಎಎಓ	ಸಿ	1	0	1
16	ಶೀಘ್ರಲಿಪಿಗಾರರು	ಸಿ	7	0	7
17	ಪ್ರಥಮ ದರ್ಜೆ ಸಹಾಯಕರು	ಸಿ	18	3	15
18	ದ್ವಿತೀಯ ದರ್ಜೆ ಸಹಾಯಕರು	ಸಿ	11	6	5

19	ಬೆರಳಚ್ಚುಗಾರರು	ಸಿ	7	2	5
20	ರೆಕಾರ್ಡ್ ಕೀಪರ್	ಸಿ	1	0	1
21	ಡಾಟಾ ಎಂಟ್ರಿ ಸಿಸ್ಟಂ ಎನಲಿಸ್ಟ್	ಸಿ	1	0	1
22	ವಾಹನ ಚಾಲಕರು	ಸಿ	5	0	5
23	ಬೈಂಡರ್	ಡಿ	1	0	1
24	ಗ್ರೂಪ್-ಡಿ	ಡಿ	12	4	8
	ಒಟ್ಟು		87	31	56

ಉಡುಪಿ ಜಿಲ್ಲಾ ಪಂಚಾಯತ್

ಮಾರ್ಚ್ -2018 ರಲ್ಲಿದ್ದಂತೆ - ಉಡುಪಿ / ಕುಂದಾಪುರ / ಕಾರ್ಕಳ ತಾಲೂಕು ಪಂಚಾಯತ್ ಕಛೇರಿಗಳ - ಅಧಿಕಾರಿ / ಸಿಬ್ಬಂದಿಗಳ – ಮಂಜೂರಾದ / ಭರ್ತಿಯಾದ / ಖಾಲಿ ಇರುವ ಹುದ್ದೆಗಳ ವಿವರ

ಸಂ.	ಹುದ್ದೆಯ ಹೆಸರು	ಎ.ಬಿ.ಸಿ.ಡಿ ವೃಂದವಾರು	ಉಡುಪಿ ತಾಲೂಕು ಪಂಚಾಯತ್			ಕುಂದಾಪುರ ತಾಲೂಕು ಪಂಚಾಯತ್			ಕಾರ್ಕಳ ತಾಲೂಕು ಪಂಚಾಯತ್			ಒಟ್ಟು		
			ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಕಾರ್ಯನಿರ್ವಾಹಕ ಅಧಿಕಾರಿ	ಎ	1	0	1	1	1	0	1	0	1	3	1	2
2	ಸಹಾಯಕ ಪ.ಸಂ. ಅಧಿಕಾರಿ	ಎ	1	0	1	1	0	1	1	0	1	3	0	3
		ಒಟ್ಟು	2	0	2	2	1	1	2	0	2	6	1	5
3	ತಾಲೂಕು ಯೋಜನಾಧಿಕಾರಿ	ಬಿ	0	0	0	1	0	1	0	0	0	1	0	1
4	ಸಹಾಯಕ ಲೆಕ್ಕಾಧಿಕಾರಿ	ಬಿ	1	1	0	1	1	0	1	0	1	3	2	1
5	ಸಹಾಯಕ ನಿರ್ದೇಶಕರು (ಗ್ರಾ.ಉ)	ಬಿ	1	1	0	1	1	0	1	1	0	3	3	0
		ಒಟ್ಟು	2	2	0	3	2	1	2	1	1	7	5	2
6	ಕಛೇರಿ ವ್ಯವಸ್ಥಾಪಕರು	ಸಿ	1	1	0	2	0	2	1	0	1	4	1	3

7	ಸಹಕಾರ ವಿಸ್ತರಣಾಧಿಕಾರಿ	ಸಿ	1	0	1	1	0	1	1	0	1	3	0	3
8	ಕಿರಿಯ ಅಭಿಯಂತರರು (ತಾಂತ್ರಿಕ)	ಸಿ	2	1	1	3	2	1	2	0	2	7	3	4
9	ಪ್ರಗತಿ ಸಹಾಯಕರು	ಸಿ	1	0	1	1	1	0	1	0	1	3	1	2
10	ಪ್ರಥಮ ದರ್ಜೆ - ಲೆಕ್ಕ ಸಹಾಯಕರು	ಸಿ	2	0	2	2	1	1	2	0	2	6	1	5
11	ಪ್ರಥಮ ದರ್ಜೆ ಸಹಾಯಕರು	ಸಿ	3	0	3	3	0	3	2	1	1	8	1	7
12	ಶೀಘ್ರಲಿಪಿಗಾರರು	ಸಿ	1	0	1	1	0	1	1	0	1	3	0	3
13	ದ್ವಿತೀಯ ದರ್ಜೆ ಸಹಾಯಕರು	ಸಿ	3	1	2	3	0	3	3	0	3	9	1	8
14	ಬೆರಳಚ್ಚುಗಾರರು	ಸಿ	2	0	2	2	0	2	1	1	0	5	1	4
15	ವಾಹನ ಚಾಲಕರು	ಸಿ	2	0	2	2	0	2	2	0	2	6	0	6
16	ಪಿಡಿಓ	ಸಿ	59	59	0	65	46	19	34	21	13	158	126	32
17	ಗ್ರೇಡ್-1	ಸಿ	27	3	24	22	7	15	11	3	8	60	13	47
19	ಗ್ರೇಡ್- 2	ಸಿ	32	27	5	33	26	07	23	17	6	88	70	18
20	ದ್ವಿ.ದ.ಲೆ.ಸ.	ಸಿ	31	27	4	25	21	4	13	9	4	69	57	12
		ಒಟ್ಟು	167	119	48	165	104	61	97	52	45	429	275	154
20	ಗ್ರೂಪ್-ಡಿ	ಡಿ	4	1	3	4	0	4	4	1	3	12	2	10
		ಒಟ್ಟು	175	122	53	174	107	67	105	54	51	454	283	171

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ:

ದಿನಾಂಕ: 1–4–2008 ರಿಂದ ಜಿಲ್ಲೆಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಮಂಜೂರು ಮಾಡಲಾಗಿದೆ. ಈ ಯೋಜನೆಯಡಿ 2017–18ನೇ ಸಾಲಿನಿಂದ ಇಎಫ್‌ಎಂಎಸ್ ಖಾತೆಯ ಮುಖಾಂತರ ಕೂಲಿ ಮೊತ್ತವನ್ನು ಮತ್ತು ಸಾಮಗ್ರಿ ವೆಚ್ಚವನ್ನು ನೇರವಾಗಿ ಕೂಲಿಕಾರರ ಹಾಗೂ ಸಾಮಗ್ರಿ ಸರಬರಾಜುದಾರರ ಬ್ಯಾಂಕ್ ಖಾತೆಗೆ ಪಾವತಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ 6.60 ಲಕ್ಷ ಮಾನವ ದಿನ ಸೃಜನೆಯಾಗಿದ್ದು, ರೂ.1886.42 ಲಕ್ಷ ವೆಚ್ಚ ಭರಿಸಲಾಗಿದೆ.

ವರ್ಷ	ಪ್ರಾರಂಭಿಕ ಶಿಲ್ಕು	ಅನುದಾನ ಬಿಡುಗಡೆ			ಒಟ್ಟು ಲಭ್ಯ ಅನುದಾನ	31–3–18ಕ್ಕೆ ಖರ್ಚು	ಕೈಗೊಂಡ ಕಾಮಗಾರಿ	ಪೂರ್ಣಗೊಂಡ ಕಾಮಗಾರಿ	ಉದ್ಯೋಗ ನೀಡಲಾದ ಕುಟುಂಬಗಳ ಸಂಖ್ಯೆ	ಉತ್ಪಾದಿಸಲಾದ ಮಾನವ ದಿನ
		ಕೇಂದ್ರ	ರಾಜ್ಯ	ಇತರೆ ಸ್ವೀಕೃತಿ						
2017-18	–	–	–	–	–	1886.42	8827	2434	17269	6.60

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಒಗ್ಗೂಡಿಸುವಿಕೆ ಯೋಜನೆ:

ಕ್ರ. ಸಂ.	ಇಲಾಖೆ	ಪ್ರಸ್ತಾಪಿತ ಒಗ್ಗೂಡಿಸುವಿಕೆ ಯೋಜನೆ			ಮಂಜೂರಾದ ಕಾಮಗಾರಿಗಳ ವಿವರ			ಚಾಲನೆಯಾದ ಕಾಮಗಾರಿಗಳ ವಿವರ			ಚಾಲನೆಯಲ್ಲಿರುವ ಹಾಗೂ ಪೂರ್ಣಗೊಂಡ ಕಾಮಗಾರಿಗಳಿಗೆ ಖರ್ಚಾಗಿರುವ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)			ಪೂರ್ಣ ಗೊಂಡ ಕಾಮಗಾರಿ ಗಳ ಸಂಖ್ಯೆ	ಸೃಜಿಸಿದ ಮಾನವ ದಿವಸ ಗಳು
		ಕಾಮ ಗಾರಿ ಗಳ ಸಂಖ್ಯೆ	ಕಾಮಗಾರಿಗಳ ಮೊತ್ತ (ರೂ. ಲಕ್ಷಗಳಲ್ಲಿ)		ಕಾಮಗಾರಿ ಗಳ ಸಂಖ್ಯೆ	ಕಾಮಗಾರಿಗಳ ಮೊತ್ತ (ರೂ. ಲಕ್ಷಗಳಲ್ಲಿ)		ಕಾಮಗಾರಿ ಗಳ ಸಂಖ್ಯೆ	ಕಾಮಗಾರಿಗಳ ಮೊತ್ತ (ರೂ. ಲಕ್ಷಗಳಲ್ಲಿ)						
			ಇಲಾಖಾ ಅನುದಾನ	ಉ.ಖಾ. ಯೋ. ಅನುದಾನ		ಇಲಾಖಾ ಅನುದಾನ	ಉ.ಖಾ. ಯೋ. ಅನುದಾನ		ಇಲಾಖಾ ಅನುದಾನ	ಉ.ಖಾ. ಯೋ. ಅನುದಾನ	ಇಲಾಖಾ ಅನುದಾನ	ಉ.ಖಾ. ಯೋ. ಅನುದಾನ	ಖರ್ಚಾಗಿ ರುವ ಒಟ್ಟು ಮೊತ್ತ		
1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14(12+13)**	**15**	**16**
1	ಕೃಷಿ	397	107.47	294.52	397	107.47	294.52	63	0.00	39.54	0.00	17.06	17.06	0	6,891
2	ತೋಟಗಾರಿಕೆ	981	10.50	540.924	981	10.50	541	268	5.02	175.76	5.02	80.994	86.014	16	31,965
3	ಸಾಮಾಜಿಕ ಅರಣ್ಯ ವಿಭಾಗ, ಉಡುಪಿ	46	0	69.314	46	0	69.314	20	0	44.023	0	20.21894	20.21894	0	8350
4	ಪ್ರಾದೇಶಿಕ ಅರಣ್ಯ	20	0.00	15.11	20	0.00	15.11	5	0.00	4.39	0.00	4.39	4.39	0	2,219
5	ರೇಷ್ಮೆ ಇಲಾಖೆ	23	1.76	11.28	23	1.76	11.28	10	0.35	1.81	0.00	1.04	1.04	0	424
6	PRED	145	90.00	690.20	145	90.00	690.20	1	0.00	0.40	0.00	0.09	0.09	0	126
7	ಕುದುರೆಮುಖ ವನ್ಯಜೀವಿ ವಿಭಾಗ ಕಾರ್ಕಳ	30	0	39.360	30	0.00	39.36	3	0.00	1.40	0.00	0.85	0.85	0	481
ಒಟ್ಟು		**1,642**	**210.00**	**1,661.00**	**1,642**	**209.73**	**1,661.00**	**370**	**5.00**	**267.00**	**5.02**	**124.6429**	**129.6629**	**16**	**50,456**

ಇಲಾಖೆ ಅನುಷ್ಠಾನಗೊಳಿಸುತ್ತಿರುವ 21 ಅಂಶಗಳಡಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸಾಧಿಸಿರುವ ಪ್ರಗತಿ – ಮಾರ್ಚ್ 2018

ಕ್ರ ಸಂ	ಕಾಮಗಾರಿ ಹೆಸರು	2017-18 ನೇ ಸಾಲಿನ ಗುರಿ		ಚಾಲನೆ ಮಾಡಿದ ಕಾಮಗಾರಿ	ಪೂರ್ಣಗೊಂಡಿರುವ ಕಾಮಗಾರಿಗಳು	ಒಟ್ಟು ಆರ್ಥಿಕ ವೆಚ್ಚ (ರೂ. ಲಕ್ಷಗಳಲ್ಲಿ)
		ಭೌತಿಕ	ಆರ್ಥಿಕ (ಲಕ್ಷಗಳಲ್ಲಿ)			
1	2	3	4	5	6	7
1	**ರೈತರ ಭೂ ಅಭಿವೃದ್ಧಿ ಕಾಮಗಾರಿಗಳು**					
	(ಅ)ಭೂ ಅಭಿವೃದ್ಧಿ (ಜಲಾನಯನ ಕಾಮಗಾರಿಗಳು ಸೇರಿ)	563	287.04	105	34	29.24
	(ಆ)ತೋಟಗಾರಿಕೆ ಅಭಿವೃದ್ಧಿ	600	208.31	309	176	82.46
	(ಇ)ರೇಷ್ಮೆ ಇಲಾಖೆ	14	4.32	10	0	1.04
	(ಈ)ಅರಣ್ಯ ಗಿಡ ನೆಡುವಿಕೆ	542	282.42	70	12	40.57
2	ಕುರಿ/ ದನದ ದೊಡ್ಡಿ/ ಕೋಳಿ ಗೂಡು	921	380.26	1091	759	144.97
3	ರೈತರ ಕಣ	13	6.76	3	2	1.55
4	ಆಟದ ಮೈದಾನ	158	158.00	8	3	4.55
5	ಸ್ಮಶಾನ ಅಭಿವೃದ್ಧಿ	158	126.40	1	0	0.24
6	**ನೀರು ಸಂರಕ್ಷಣಾ ಕಾಮಗಾರಿಗಳು**					
	(i) ನಮ್ಮ ಹಳ್ಳಿ ನಮ್ಮ ನೀರು (ಇತರೆ ನೀರು ಸಂರಕ್ಷಣಾ ಕಾಮಗಾರಿಗಳು)	1000	1060.00	2139	1092	694.81
	(ii)ಕೊಳವೆ ಬಾವಿಗಳ ಮರುಪೂರಣ ಘಟಕಗಳು	200	164.00	96	36	49.85
7	ನಮ್ಮೂರ ಕೆರೆ	158	94.81	68	49	62.49
8	ನಮ್ಮ ಹೊಲ ನಮ್ಮ ದಾರಿ	20	6.00	31	12	42.31
9	ರಾಜೀವ್‌ಗಾಂಧಿ ಸೇವಾ ಕೇಂದ್ರ	10	160.00	2	0	6.53
10	ಅಂಗನವಾಡಿ ಕೇಂದ್ರಗಳು	24	192.00	28	5	35.47
11	ಗ್ರಾಮೀಣ ಗೋದಾಮುಗಳು	50	650.00	0	0	0.00
12	ಕಾಲು ಸಂಕ ನಿರ್ಮಾಣ	24	12.00	12	6	5.96
13	ಗ್ರಾಮೀಣ ಉದ್ಯಾನವನ, ಗ್ರಾಮ ಸೌಂದರ್ಯಕರಣ ಮತ್ತು ಸಸಿ ನಡುವಿಕೆ (ಸಾರ್ವಜನಿಕ ಸ್ಥಳಗಳಲ್ಲಿ)	600	120.00	95	86	8.62
	ಒಟ್ಟು	**5055**	**3912.321**	**4068**	**2272**	**1210.67**

ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ:

ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ 2017–18ನೇ ಸಾಲಿಗೆ 1705.10ಲಕ್ಷ ಬಿಡುಗಡೆಯಾಗಿದ್ದು, ಆರಂಭ ಶಿಲ್ಕು ರೂ.1014.19 ಲಕ್ಷ ಸೇರಿ ಒಟ್ಟು ರೂ.2719.29ಲಕ್ಷ ಲಭ್ಯ ಅನುದಾನದಲ್ಲಿ ಮಾರ್ಚ್ 2018ರ ಅಂತ್ಯಕ್ಕೆ ರೂ.2276.18ಲಕ್ಷ ಅನುದಾನವನ್ನು ವಿನಿಯೋಗಿಸಿ ಶೇ.83 ರಷ್ಟು ಸಾಧನೆ ಮಾಡಲಾಗಿದೆ. ಒಟ್ಟು ಮಂಜೂರಾದ 1321 ಕಾಮಗಾರಿಗಳಲ್ಲಿ 1130 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

2017-18ನೇ ಸಾಲಿನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ವ್ಯಾಪ್ತಿಯಲ್ಲಿ ವಿವಿಧ ಘಟಕದಡಿ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರದ ತ:ಖ್ತೆ

(ರೂ. ಲಕ್ಷಗಳಲ್ಲಿ)

SL NO	COMPONENT	ALLOCATION	OB	RELEASE AMOUNT 17-18			TOTAL	EXPENDITURE 2017-18	BALANCE	No of Works	No of Completed Works
				STATE	CENTRAL	TOTAL					
Coverage & Quality											
1	SCP	112.27	75.77	141.60	11.28	152.88	228.65	228.62	0.02	42	19
2	TSP	76.86	98.89	65.30	8.80	74.10	172.99	172.99	0.00	33	15
3	GENERAL	1443.8	147.36	533.56	68.50	602.06	749.42	749.42	0.00	628	577
	C&Q Total:	**1633**	**322.02**	**740.46**	**88.58**	**829.04**	**1151.06**	**1151.03**	**0.02**	**703**	**611**
	Other Component										
1	SUSTAINBILITY	89.98	55.27	0.00	-22.22	-22.22	33.05	10.90	22.15	16	2
2	WPP	288.00	9.58	144.00	0.00	144.00	153.58	43.56	110.02	24	14
		377.98	**64.85**	**144.00**	**-22.22**	**121.78**	**186.63**	**54.46**	**132.17**	**40**	**16**
1	MVS	0	0.00	416.00	0.00	416.00	416.00	400.58	15.42	26	0
2	O & M	92.97	27.73	0.00	11.03	11.03	38.76	26.34	12.42	0	0
3	MVS O & M	4.42	25.30	61.99	0.00	61.99	87.29	0.00	87.29	0	0
4	WQMSP	0.54	0.00	6.68	30.00	36.68	36.68	5.46	31.22	0	0
		97.93	**53.03**	**484.67**	**41.03**	**525.7**	**578.73**	**432.384**	**146.35**	**26**	**0**
1	SUPPORT & ACTIVITY	73.33	53.17	-20.00	-11.42	-31.42	21.75	12.86	8.89	0	0
1	TASK FORCE	781.12	521.12	260.00	0.00	260.00	781.12	613.28	167.84	460	422
	TOTAL	2963.31	1014.19	1609.13	95.97	1705.10	2719.29	2264.01	455.27	1229	1049

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ: ಬಯೋಗ್ಯಾಸ್ ಸ್ಥಾವರಗಳನ್ನು ನಿರ್ಮಿಸುವ ಫಲಾನುಭವಿಗಳಿಗೆ ಕೇಂದ್ರದ ಪಾಲಿನ ಸಹಾಯಧನ ರೂ.9000/- ಮತ್ತು ರಾಜ್ಯದ ಪಾಲಿನ ಸಹಾಯಧನ ರೂ. 6000/- ಹಾಗೂ ಟರ್ನ್‌ಕೀ ಏಜೆನ್ಸಿಯ ಮುಖಾಂತರ ನಿರ್ಮಿಸಿದಲ್ಲಿ ಟರ್ನ್‌ಕೀ ಶುಲ್ಕ ರೂ.1500/- (ಪ್ರಾರಂಭದ ವರ್ಷದಲ್ಲಿ ರೂ.1000 ಮತ್ತು ಮುಂದಿನ 4 ವರ್ಷಗಳಿಗೆ ನಿರ್ವಹಣೆಗಾಗಿ ಒಟ್ಟು ರೂ.500) ಮೊತ್ತವನ್ನು ಟರ್ನ್‌ಕೀ ಯವರಿಗೆ ಪಾವತಿಸಲಾಗುವುದು. ಪ.ಜಾತಿ ಮತ್ತು ಪ.ಪಂಗಡದ ಫಲಾನುಭವಿಗಳಿಗೆ ಕೇಂದ್ರದ ಪಾಲಿನ ಸಹಾಯಧನವಾಗಿ ರೂ.11000/- ಹಾಗೂ ರಾಜ್ಯದ ಪಾಲಿನ ಸಹಾಯಧನ ರೂ.6000/- ನೀಡಲಾಗುತ್ತದೆ.

ಮಾರ್ಚ್ 2018ರ ಪ್ರಗತಿ ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ):

ವರ್ಷ	ಗುರಿ		ಆರಂಭ ಶಿಲ್ಕು	ಬಿಡುಗಡೆಯಾದ ಅನುದಾನ			ಸಾಧನೆ	
	ಭೌತಿಕ	ಆರ್ಥಿಕ		ಕೇಂದ್ರ	ರಾಜ್ಯ	ಒಟ್ಟು	ಭೌತಿಕ	ಆರ್ಥಿಕ
2017-18	200	40.00	12.91	17.05	10.00	27.05	200	17.465

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ: (ಸಂಜೀವಿನಿ)

ಈ ಯೋಜನೆಯಡಿ ಕಾರ್ಕಳ ತಾಲೂಕನ್ನು Intensive ತಾಲೂಕು ಎಂದು ಪರಿಗಣಿಸಿ 28 ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ಪಂಚಾಯತ್ ಮಟ್ಟದ ಸ್ವಸಹಾಯ ಗುಂಪುಗಳ ಒಕ್ಕೂಟಗಳನ್ನು ರಚಿಸಲಾಗಿದೆ. 20 ಜನ ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಲಾಗಿದೆ. ಕಾರ್ಕಳ ತಾಲೂಕಿನ ಹಿರ್ಗಾನ ಮತ್ತು ಈದು ಗ್ರಾಮ ಪಂಚಾಯತ್‌ಗಳಿಗೆ ತಲಾ ರೂ.10.00 ಲಕ್ಷದಂತೆ Community Investment Fund ಹಾಗೂ ತಲಾ ರೂ.10,000/- ದಂತೆ ಪ್ರಾರಂಭಿಕ ನಿಧಿಗೆ ಮಂಜೂರಾತಿ ಪಡೆಯಲಾಗಿದೆ. ಕಿರು ಬಂಡವಾಳ ಯೋಜನೆ ತಯಾರಿಸುವ ಬಗ್ಗೆ ಸ್ವಸಹಾಯ ಸಂಘದ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ.

ರಾಜೀವ ಗಾಂಧಿ ಚೈತನ್ಯ ಯೋಜನೆ:

ಈ ಯೋಜನೆಯಡಿ 2017-18ನೇ ಸಾಲಿನಲ್ಲಿ 17 ಫಲಾನುಭವಿಗಳಿಗೆ ತರಬೇತಿ ನೀಡಿದ್ದು, ರೂ.1.70ಲಕ್ಷ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

ಸ್ವಚ್ಛ ಭಾರತ ಅಭಿಯಾನ:

ಗ್ರಾಮ ಪಂಚಾಯತ್ ಪ್ರದೇಶ ವ್ಯಾಪ್ತಿಯಲ್ಲಿ ಶೌಚಾಲಯಗಳ ನಿರ್ಮಾಣದ ಗುರಿಯನ್ನು ಪೂರ್ಣಗೊಳಿಸುವುದರೊಂದಿಗೆ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿ ಜಿಲ್ಲೆಯು ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯಾಗಿ ಅಕ್ಟೋಬರ್ 2, 2016 ರಂದು ಘೋಷಣೆಯಾಗಿರುತ್ತದೆ. ಸ್ವಚ್ಛತೆಯಲ್ಲಿ ದೇಶದಲ್ಲಿಯೇ Quality Council of India ಸಮೀಕ್ಷೆಯಲ್ಲಿ 7ನೇ ಸ್ವಚ್ಛ ಜಿಲ್ಲೆ ಎಂಬ ಹೆಗ್ಗಳಿಕೆಯನ್ನು ಪಡೆದಿದೆ. ಕೇಂದ್ರ ಸರ್ಕಾರದ ಸ್ವಚ್ಛ ದರ್ಪಣ್ ranking ನಲ್ಲಿ ದೇಶದಲ್ಲಿಯೇ 1ನೇ ಸ್ಥಾನವನ್ನು ಪಡೆದಿರುತ್ತದೆ. ಜಿಲ್ಲೆಯು ಸ್ವಚ್ಛತೆಗಾಗಿ ಇಂಡಿಯಾ ಟುಡೇ ಜರ್ನಲ್ ನವರು ನೀಡಿರುವ States of State ಪ್ರಶಸ್ತಿಗೆ ಪಾತ್ರವಾಗಿರುತ್ತದೆ. ತ್ಯಾಜ್ಯ ನಿರ್ವಹಣೆಯಲ್ಲಿ ಜಿಲ್ಲೆಯು ದೇಶದಲ್ಲಿಯೇ ವಿನೂತನ ಮಾದರಿಯಾದ SLRM ಕಾರ್ಯಕ್ರಮವನ್ನು ಅನುಷ್ಠಾನಿಸುತ್ತಿದೆ. SLRM ಕಾರ್ಯಕ್ರಮದಡಿ ವ್ಯರ್ಥವಾಗಿ ಹೋಗುವಂತಹ ತ್ಯಾಜ್ಯ ವಸ್ತುಗಳನ್ನು ಸಂಪನ್ಮೂಲವನ್ನಾಗಿ ವೈಜ್ಞಾನಿಕ ರೀತಿಯಲ್ಲಿ ಪರಿವರ್ತಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈಗಾಗಲೇ 8 ಗ್ರಾಮ ಪಂಚಾಯತ್ ಗಳಲ್ಲಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿರುತ್ತದೆ. ಉಳಿದ ಗ್ರಾಮ ಪಂಚಾಯತ್ ಗಳಲ್ಲಿ ಅನುಷ್ಠಾನಿಸುವ ಬಗ್ಗೆ ವಿವಿಧ ಹಂತದಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ಸುವರ್ಣ ಗ್ರಾಮೋದಯ ಯೋಜನೆ: ಸುವರ್ಣ ಗ್ರಾಮೋದಯ ಯೋಜನೆಯಡಿ 2016-17ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ರೂ.10.00 ಕೋಟಿ ವಿಶೇಷ ಅನುದಾನ ಹಂಚಿಕೆಯಾಗಿದ್ದು, 2017-18ನೇ ಸಾಲಿಗೆ ರೂ.10.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಅದರಲ್ಲಿ 145 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಮಾರ್ಚ್ 2018ರ ಅಂತ್ಯಕ್ಕೆ ರೂ.830.25 ಲಕ್ಷ ವೆಚ್ಚ ಮಾಡಲಾಗಿದೆ.

ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಮಾರ್ಚ್ 2018 ರ ಅಂತ್ಯದವರೆಗಿನ ಪ್ರಗತಿ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ವಿಧಾನಸಭಾ ಕ್ಷೇತ್ರ	ಅಂದಾಜು ಮೊತ್ತ	ಬಿಡುಗಡೆಯಾದ ಅನುದಾನ	ಒಟ್ಟು ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಒಟ್ಟು ಖರ್ಚು
1	ಉಡುಪಿ	200.00	200.00	29	27	2	188.00
2	ಕಾಪು	200.00	200.00	35	27	8	158.00
3	ಬೈಂದೂರು	200.00	200.00	41	24	17	135.25
4	ಕಾರ್ಕಳ	200.00	200.00	28	26	2	180.00
5	ಕುಂದಾಪುರ	200.00	200.00	12	10	2	169.00
		1000.00	1000.00	145	114	31	830.25

ಗ್ರಾಮ ವಿಕಾಸ ಯೋಜನೆ:

ಈ ಯೋಜನೆಯು 2015-16ನೇ ಸಾಲಿನಲ್ಲಿ ಜಾರಿಗೆ ಬಂದಿದ್ದು, ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ 5 ರಂತೆ ಒಟ್ಟು 25 ಗ್ರಾಮಗಳು ಸರ್ಕಾರದಿಂದ ಆಯ್ಕೆಯಾಗಿರುತ್ತವೆ. ಆಯ್ಕೆಯಾದ ಗ್ರಾಮ ವ್ಯಾಪ್ತಿಯಲ್ಲಿ ಒಟ್ಟು ರೂ.75.00 ಲಕ್ಷ ಅನುದಾನಕ್ಕೆ ಕ್ರಿಯಾಯೋಜನೆಯನ್ನು ತಯಾರಿಸಿ ಗ್ರಾಮ ಪಂಚಾಯತ್ ಮಂಜೂರಾತಿಯೊಂದಿಗೆ ಕಾರ್ಯಕ್ರಮ ಅನುಷ್ಠಾನಿಸಬೇಕಾಗಿರುತ್ತದೆ. ಪ್ರತೀ ಗ್ರಾಮ ಪಂಚಾಯತ್‌ಗೆ ಹಂಚಿಕೆಯಾದ ರೂ.75.00 ಲಕ್ಷ ಅನುದಾನದಲ್ಲಿ ರಸ್ತೆ ಮತ್ತು ಚರಂಡಿ ವಲಯಕ್ಕೆ ಶೇ.50, ಸಾಹಿತಿ/ಕಲಾವಿದರ ಸ್ಮಾರಕ ಭವನ/ಗ್ರಂಥಾಲಯ ಕಟ್ಟಡ /ಸಭಾಭವನ/ಬಯಲು ರಂಗಮಂದಿರ ಕಾಮಗಾರಿಗಳಿಗೆ ಶೇ.12, ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಶೇ.12, ಬೀದಿದೀಪಗಳ ಅಳವಡಿಕೆಗೆ ಶೇ.3, ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕೆ ಶೇ.10, ಗ್ರಾಮ ಪಂಚಾಯತ್ ನಡವಳಿಯ ಟೆಲಿವಿಷನ್ ಪ್ರಚಾರ ಮತ್ತು ಮೂಲಕ ಸೌಕರ್ಯಕ್ಕೆ ಶೇ.2, ಗುಡಿ/ಮಸೀದಿ/ಚರ್ಚ್‌ಗಳ ಜೀರ್ಣೋದ್ಧಾರಕ್ಕಾಗಿ ಶೇ.6 ಹಾಗೂ ಫ್ಲೆಕ್ಸಿ ಫಂಡ್ ರೂಪದಲ್ಲಿ ಶೇ.5 ಅನುದಾನವನ್ನು ನಿಗದಿಪಡಿಸಿಕೊಳ್ಳಬೇಕಾಗಿದ್ದು ಸರ್ಕಾರದ ಮಾರ್ಗಸೂಚಿಯಂತೆ ಕ್ರಿಯಾಯೋಜನೆಯನ್ನು ತಯಾರಿಸಿ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಗಳ ಅನುಮೋದನೆಯನ್ನು ಪಡೆದು ಅಂದಾಜುಪಟ್ಟಿಗಳಿಗೆ ಆಡಳಿತ ಮಂಜೂರಾತಿ ನೀಡಲಾಗಿದೆ. ಪ್ರಸ್ತುತ ಈವರೆಗೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ರೂ.1875.00 ಲಕ್ಷ ಬಿಡುಗಡೆಯಾಗಿದ್ದು ಸದ್ರಿ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ನ ಬ್ಯಾಂಕ್ ಖಾತೆಗೆ ಆರ್‌ಟಿಜಿಎಸ್ ಮುಖಾಂತರ ರವಾನಿಸಲಾಗಿದೆ. ಆಯ್ಕೆಯಾದ ಒಟ್ಟು 25 ಗ್ರಾಮಗಳಲ್ಲಿ 13 ಗ್ರಾಮಗಳ ಸಿವಿಲ್ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಮುಖಾಂತರವು ಹಾಗೂ 12 ಗ್ರಾಮಗಳ ಸಿವಿಲ್ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗಳ ಮುಖಾಂತರ ಅನುಷ್ಠಾನಿಸಲಾಗುತ್ತಿದ್ದು, ಮಾರ್ಚ್ 2018ರ ಅಂತ್ಯದವರೆಗೆ ರೂ.1365.49ಲಕ್ಷ ಖರ್ಚು ಭರಿಸಲಾಗಿದೆ. ಆಯ್ಕೆಯಾದ 25 ಗ್ರಾಮಗಳ ವಿವರ ಈ ಕೆಳಗಿನಂತಿದೆ.

ಕ್ರ. ಸ	ಗ್ರಾಮ ಪಂಚಾಯತ್	ಆಯ್ಕೆಯಾದ ಗ್ರಾಮಗಳು	ಕ್ರ. ಸ	ಗ್ರಾಮ ಪಂಚಾಯತ್	ಆಯ್ಕೆಯಾದ ಗ್ರಾಮಗಳು
1	ಮಜೂರು	92 ಹೇರೂರು	13	ಯಡ್ತಾಡಿ	ಯಡ್ತಾಡಿ
2	ಮುದರಂಗಡಿ	ಪಿಲಾರು	14	ಐರೋಡಿ	ಬಾಳ್ಕುದ್ರು
3	ಮಣಿಪುರ	ಮರ್ಣೆ	15	ತಲ್ಲೂರು	ತಲ್ಲೂರು
4	ಕೊಡಿಬೆಟ್ಟು	ಅಂಜಾರು	16	ಕಟ್‌ಬೆಲ್ತೂರು	ಕಟ್‌ಬೆಲ್ತೂರು
5	ಕುಕ್ಕೆಹಳ್ಳಿ	ಕುಕ್ಕೆಹಳ್ಳಿ	17	ವಂಡ್ಸೆ	ವಂಡ್ಸೆ
6	ಹಾರಾಡಿ	ಹಾರಾಡಿ ಮತ್ತು ಬೈಕಾಡಿ	18	ಎಡಮೊಗೆ	ಎಡಮೊಗೆ
7	ತೆಂಕನಿಡಿಯೂರು	ಕೆಳಾರ್ಕಳಬೆಟ್ಟು	19	ಕೆರ್ಗಾಲ್	ಕೆರ್ಗಾಲ್
8	ಕೊಕ್ಕರ್ಣೆ	ಪೆಜಮಂಗೂರು	20	ಕಡ್ತಲ	ಎಳ್ಳಾರೆ
9	ಕಡೆಕಾರು	ಕಡೆಕಾರು	21	ಎರ್ಲಪಾಡಿ	ಎರ್ಲಪಾಡಿ
10	ಕೆದೂರು	ಉಳ್ತೂರು	22	ಈದು	ಈದು
11	ಗೋಪಾಡಿ	ಗೋಪಾಡಿ	23	ವರಂಗ	ಅಂಡಾರು
12	ಕಾಳಾವರ	ವಕ್ವಾಡಿ	24	ಕಲ್ಯಾ	ಕಲ್ಯಾ

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆ:

ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ತಲಾ 4 ಗ್ರಾಮಗಳಂತೆ 5 ವಿಧಾನಸಭಾ ಕ್ಷೇತ್ರಗಳಿಗೆ ಒಟ್ಟು 20 ಗ್ರಾಮಗಳು ಹಾಗೂ ವಿಧಾನ ಪರಿಷತ್ ಸದಸ್ಯರಿಂದ ತಲಾ 1 ರಂತೆ ಒಟ್ಟು 3 ಗ್ರಾಮಗಳು ಸೇರಿ 23 ಗ್ರಾಮಗಳು ಆಯ್ಕೆಯಾಗಿರುತ್ತದೆ. ಆಯ್ಕೆಯಾದ ಗ್ರಾಮಗಳಿಗೆ ತಲಾ ರೂ.100 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಮಾರ್ಚ್ 2018ರ ಅಂತ್ಯದವರೆಗೆ ರೂ.804.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಆಯ್ಕೆಯಾದ ಗ್ರಾಮಗಳ ಸಿವಿಲ್ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಅನುಷ್ಠಾನಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿರುತ್ತದೆ. ಕ್ರಿಯಾಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಅನುಷ್ಠಾನಾಧಿಕಾರಿಗಳಿಂದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಆಯ್ಕೆಯಾದ ಗ್ರಾಮಗಳ ವಿವರ ಈ ಕೆಳಗಿನಂತಿದೆ.

ಕ್ರ. ಸ.	ಗ್ರಾಮ ಪಂಚಾಯತ್	ಆಯ್ಕೆಯಾದ ಗ್ರಾಮಗಳು	ಕ್ರ. ಸ.	ಗ್ರಾಮ ಪಂಚಾಯತ್	ಆಯ್ಕೆಯಾದ ಗ್ರಾಮಗಳು
1	ಕರ್ಪೆ	ಹಲುವಳ್ಳಿ	13	ಹನೆಹಳ್ಳಿ	ಹನೆಹಳ್ಳಿ
2	ಕೆಮ್ಮಣ್ಣು	ಪಡುತೋನ್ಸೆ	14	ಮುದರಂಗಡಿ	ಸಾಂತೂರು
3	ನೀಲಾವರ	ನೀಲಾವರ	15	ಕಂದಾವರ	ಕಂದಾವರ
4	ವಾರಂಬಳ್ಳಿ	ವಾರಂಬಳ್ಳಿ	16	ಉಪ್ಪುಂದ	ಉಪ್ಪುಂದ
5	ಕಟಪಾಡಿ	ಮೂಡಬೆಟ್ಟು	17	ಹೊಸಾಡು	ಹೊಸಾಡು
6	ಪಡುಬಿದ್ರಿ	ಪಾದೆಬೆಟ್ಟು	18	ಹಟ್ಟಿಯಂಗಡಿ	ಕನ್ಯಾನ
7	ಪೆರ್ಡೂರು	ಪೆರ್ಡೂರು	19	ಬಿಜೂರು	ಬಿಜೂರು
8	ಶಿರ್ವ	ಶಿರ್ವ	20	ಮುಂಡ್ಕೂರು	ಮುಂಡ್ಕೂರು
9	ಬೊಮ್ಮರಬೆಟ್ಟು	ಬೊಮ್ಮರಬೆಟ್ಟು	21	ಕುಚ್ಚೂರು	ಕುಚ್ಚೂರು
10	ಕೋಡಿ	ಕೋಡಿ	22	ಕುಕ್ಕುಂದೂರು	ಕುಕ್ಕುಂದೂರು
11	ವಡ್ಡರ್ಸೆ	ಕಾವಡಿ	23	ನಿಟ್ಟೆ	ನಿಟ್ಟೆ
12	ಪಾಂಡೇಶ್ವರ	ಪಾಂಡೇಶ್ವರ			

ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ:

ಈ ಯೋಜನೆಯಡಿ 2017–18ನೇ ಸಾಲಿಗೆ ಸರ್ಕಾರದಿಂದ ಯೋಜನಾ ವಲಯದಡಿ ರೂ.673.00ಲಕ್ಷ, Taskforce grant ಆಗಿ ರೂ.508.39ಲಕ್ಷ ವಿಶೇಷ ಅನುದಾನವಾಗಿ ರೂ.795.00ಲಕ್ಷ ಅನುದಾನದ ಗುರಿಯನ್ನು ನೀಡಲಾಗಿದ್ದು, ಪ್ರಗತಿ ವಿವರ ಈ ಕೆಳಗಿನಂತಿದೆ.

3054 ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ರೂ.673.00 ಲಕ್ಷ

ರೂ. ಲಕ್ಷಗಳಲ್ಲಿ

ಕ್ರ. ಸಂ.	ತಾಲೂಕು	ಮಂಜೂರಾದ ಮೊತ್ತ	ಬಿಡುಗಡೆಯಾದ ಅನುದಾನ	ವೆಚ್ಚ	ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	KM Target/Ach.
1	ಉಡುಪಿ	248.00	750.00	217.49	105	105	30.86/30.86
2	ಕುಂದಾಪುರ	310.00		291.66	123	123	61.437/61.437
3	ಕಾರ್ಕಳ	192.00		164.91	48	48	28.125/28.125
	ಒಟ್ಟು	**750.00**	**750.00**	**674.06**	**276**	**276**	**120.422/120.422**

3054 ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ SCP/TSP ವರದಿ

ರೂ. ಲಕ್ಷಗಳಲ್ಲಿ

ಕ್ರ. ಸಂ.	ತಾಲೂಕು	ವಿಶೇಷ ಘಟಕ ಂ ಯೋಜನೆ			ಗಿರಿಜನ ಉಪಯೋಜನೆ		
		ಒಟ್ಟು ಗುರಿ/ವೆಚ್ಚ	ಕಾಮಗಾರಿಗಳ ಗುರಿ/ಸಾಧನೆ	KM Target/ Ach.	ಒಟ್ಟು ಗುರಿ/ವೆಚ್ಚ	ಕಾಮಗಾರಿಗಳ ಗುರಿ/ಸಾಧನೆ	KM Target/ Ach.
1	ಉಡುಪಿ	39.85 / 39.18	19 / 19	3.84 / 3.84	17.77/ 16.28	12/12	4.00 / 4.00
2	ಕುಂದಾಪುರ	53.66 / 50.08	22 / 22	8.10 / 8.10	25.87 / 25.27	12/12	5.99 / 5.99
3	ಕಾರ್ಕಳ	28.94 / 28.36	8 / 8	6.27 / 6.27	20.10 / 19.14	6/6	1.88 / 1.88
	ಒಟ್ಟು	**122.45 / 117.62**	**49 / 49**	**18.21 / 18.21**	**63.74 / 60.69**	**30 / 30**	**11.87 / 11.87**

3054 ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (Taskforce ಯೋಜನೇತರ)

ರೂ. ಲಕ್ಷಗಳಲ್ಲಿ

ಕ್ರ. ಸಂ.	ತಾಲೂಕು	ವಿಧಾನಸಭಾ ಕ್ಷೇತ್ರ	ಮಂಜೂರಾದ ಮೊತ್ತ	ಬಿಡುಗಡೆಯಾದ ಅನುದಾನ	ವೆಚ್ಚ	ಕಾಮಗಾರಿಗಳ ಗುರಿ/ಸಾಧನೆ	KM Target/ Ach.
1	ಉಡುಪಿ	ಉಡುಪಿ	47.47	313.50	25.14	13/ 13	4.8/ 4.80
2		ಕಾಪು	94.45		60.57	41 / 41	21.26 / 21.26
3		ಕುಂದಾಪುರ	101.85		69.95	30 / 30	6.1/ 6.1
4	ಕುಂದಾಪುರ						
4		ಬೈಂದೂರು	137.02		61.22	49 / 49	24.16/24.16
5	ಕಾರ್ಕಳ	ಕಾರ್ಕಳ	127.60		96.40	31 / 31	31.95/31.95
	ಒಟ್ಟು		**508.39**	**313.50**	**313.28**	**164 / 164**	**88.27 / 88.27**

3054 ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ SCP/TSP ವರದಿ (Taskforce)

ರೂ. ಲಕ್ಷಗಳಲ್ಲಿ

ಕ್ರ. ಸಂ.	ವಿಧಾನಸಭಾ ಕ್ಷೇತ್ರ	ವಿಶೇಷ ಘಟಕ ಯೋಜನೆ			ಗಿರಿಜನ ಉಪಯೋಜನೆ		
		ಒಟ್ಟು ಗುರಿ/ವೆಚ್ಚ	ಕಾಮಗಾರಿಗಳ ಗುರಿ/ಸಾಧನೆ	KM Target/ Ach.	ಒಟ್ಟು ಗುರಿ/ವೆಚ್ಚ	ಕಾಮಗಾರಿಗಳ ಗುರಿ/ಸಾಧನೆ	KM Target/ Ach.
1	ಉಡುಪಿ	8.98 / 8.82	2 / 2	0.44 / 0.28	4.40/ 2.38	2 / 2	0.83 / 0.83
2	ಕಾಪು	21.08 / 11.45	8 / 8	1.28 / 1.28	3.17 / 0	1 / 0	0.06 / 0
3	ಕುಂದಾಪುರ	22.36 / 14.13	7 /7	3.45 / 0.56	6.40 / 6.18	2 / 2	0.40 /0.40
4	ಬೈಂದೂರು	23.50 / 8.32	10 / 10	8.11 / 3.47	10.00/ 5.92	6 / 6	6.195 / 6.195
5	ಕಾರ್ಕಳ	21.40 / 17.08	5 / 5	9.65 / 0.72	8.40 / 4.31	2/2	2.30 / 2.30
	ಒಟ್ಟು	**97.32 / 59.80**	**32 / 32**	**22.93 / 6.31**	**32.37/ 18.79**	**13 / 12**	9.785 / 9.325

3054 ಹಳ್ಳಿಪರಿಮಿತಿ ರಸ್ತೆ ಡಾಮರೀಕರಣ (ತಾ.ಪಂ.) ರೂ. ಲಕ್ಷಗಳಲ್ಲಿ

ಕ್ರ. ಸಂ.	ತಾಲೂಕು	ಮಂಜೂರಾದ ಮೊತ್ತ	ಬಿಡುಗಡೆಯಾದ ಅನುದಾನ	ವೆಚ್ಚ	ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ
1	ಉಡುಪಿ	10.00	9.99	9.98	6	6
2	ಕುಂದಾಪುರ	10.00	9.99	9.96	9	9
3	ಕಾರ್ಕಳ	10.00	9.99	9.93	6	6
	ಒಟ್ಟು	**30.00**	**29.97**	**29.87**	**21**	**21**

<u>ಜಿಲ್ಲಾ ಪಂಚಾಯತ್/ತಾಲೂಕು ಪಂಚಾಯತ್ ಸಂಯುಕ್ತ ಅನುದಾನ :</u>

ತಾಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರ್ಕಾರದಿಂದ ತಾಲೂಕು ಪಂಚಾಯತ್‌ಗೆ ತಲಾ ರೂ. 100.00 ಲಕ್ಷ ಹಾಗೂ ಜಿಲ್ಲಾ ಪಂಚಾಯತ್‌ಗೆ ರೂ. 400.00 ಲಕ್ಷ ವಿಶೇಷ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿದ್ದು, ಸದ್ರಿ ಅನುದಾನಕ್ಕೆ ಕ್ರಿಯಾಯೋಜನೆಯನ್ನು ತಯಾರಿಸಿ ವಿವಿದ ಕಾರ್ಯಕ್ರಮಗಳನ್ನು ಅನುಷ್ಠಾನಿಸಲಾಗಿದೆ. ಮಾರ್ಚ್ 2018ರ ಪ್ರಗತಿ ವಿವರ ಈ ಕೆಳಗಿನಂತಿದೆ.

ಜಿಲ್ಲಾ ಪಂಚಾಯತ್ ಸಂಯುಕ್ತ ಅನುದಾನ – ರೂ.400.00 ಲಕ್ಷ
ಮಾರ್ಚ್ 2018

ಕ್ರ. ಸಂ.	ತಾಲೂಕು	ಅಂದಾಜು ಮೊತ್ತ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ	ಬಿಡುಗಡೆಯಾದ ಅನುದಾನ	2017–18ನೇ ಸಾಲಿನ ಖರ್ಚು	ಶೇ. 3ರ ಗುರಿ/ ವೆಚ್ಚ
1	ಉಡುಪಿ	186.60	106	105	184.42	179.42	4.14/3.98
2	ಕುಂದಾಪುರ	142.10	131	131	142.298	142.30	5.84/5.61
3	ಕಾರ್ಕಳ	71.30	45	42	69.71	64.72	2.30/1.94
	ಒಟ್ಟು	**400.00**	**282**	**278**	**396.43**	**386.43**	**12.28/11.53**

ಜಿಲ್ಲಾ ಪಂಚಾಯತ್ ಸಂಯುಕ್ತ ಅನುದಾನ SCP/TSP

ಕ್ರ. ಸಂ.	ತಾಲೂಕು	ವಿಶೇಷ ಘಟಕ ಯೋಜನೆ			ಗಿರಿಜನ ಉಪಯೋಜನೆ		
		ಅನುದಾನದ ಗುರಿ	ವೆಚ್ಚ	ಭೌತಿಕ ಗುರಿ/ಸಾಧನೆ	ಅನುದಾನದ ಗುರಿ	ವೆಚ್ಚ	ಭೌತಿಕ ಗುರಿ/ಸಾಧನೆ
1	ಉಡುಪಿ	33.75	32.12	20/20	9.64	9.46	10/10
2	ಕುಂದಾಪುರ	23.79	23.43	21/21	10.30	10.13	9/9
3	ಕಾರ್ಕಳ	12.00	11.76	5/5	5.30	3.72	3/3
	ಒಟ್ಟು	**69.54**	**67.31**	**46/46**	**25.24**	**23.31**	**22/22**

ತಾಲೂಕು ಪಂಚಾಯತ್ ಸಂಯುಕ್ತ ಅನುದಾನ: ರೂ.300.00 ಲಕ್ಷ

ಕ್ರ. ಸಂ.	ತಾಲೂಕು	ಅಂದಾಜು ಮೊತ್ತ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ	ಬಿಡುಗಡೆಯಾದ ಅನುದಾನ	2017–18ನೇ ಸಾಲಿನ ಖರ್ಚು
1	ಉಡುಪಿ	100.00	122	122	99.99	98.39
2	ಕುಂದಾಪುರ	100.00	194	184	99.99	95.96
3	ಕಾರ್ಕಳ	100.00	119	114	99.99	91.34
	ಒಟ್ಟು	**300.00**	435	420	299.97	285.69

ತಾಲೂಕು ಪಂಚಾಯತ್ ಸಂಯುಕ್ತ ಅನುದಾನ SCP/TSP

ಕ್ರ. ಸಂ.	ತಾಲೂಕು	ವಿಶೇಷ ಘಟಕ ಯೋಜನೆ			ಗಿರಿಜನ ಉಪಯೋಜನೆ		
		ಅನುದಾನದ ಗುರಿ	ವೆಚ್ಚ	ಭೌತಿಕ ಗುರಿ/ಸಾಧನೆ	ಅನುದಾನದ ಗುರಿ	ವೆಚ್ಚ	ಭೌತಿಕ ಗುರಿ/ಸಾಧನೆ
1	ಉಡುಪಿ	21.62	20.78	24/24	3.60	3.51	5/5
2	ಕುಂದಾಪುರ	7.88	7.47	21/20	10.07	9.50	16/15
3	ಕಾರ್ಕಳ	17.50	15.20	21/20	7.50	6.49	11/11
	ಒಟ್ಟು	**47.00**	**43.45**	**66/64**	**21.17**	**19.50**	32/31

<u>ಅಭಿವೃದ್ಧಿ ಅನುದಾನ ಕಾರ್ಯಕ್ರಮ:</u>

ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ವ್ಯಾಪ್ತಿಯ ಆಯ್ದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಿಸುವ ಸಲುವಾಗಿ ಸರ್ಕಾರದಿಂದ ಜಿಲ್ಲಾ ಪಂಚಾಯತ್‌ಗೆ ರೂ.15.00 ಲಕ್ಷ ಹಾಗೂ ತಾಲೂಕು ಪಂಚಾಯತ್‌ಗಳಿಗೆ ತಲಾ ರೂ.6.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಪ್ರಗತಿ ವಿವರ ಈ ಕೆಳಗಿನಂತಿದೆ.

ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನ 2017-18 (ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆ	ಮಂಜೂರಾದ ಮೊತ್ತ	ಬಿಡುಗಡೆಯಾದ ಅನುದಾನ	ವೆಚ್ಚ	ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಷರಾ
1	ಉಡುಪಿ	15.00	15.00	14.31	9	9	

ತಾಲೂಕು ಪಂಚಾಯತ್ ಅಭಿವೃದ್ಧಿ ಅನುದಾನ – ರೂ.18.00 ಲಕ್ಷ **ಲೆಕ್ಕ ಶೀರ್ಷಿಕೆ: 2515-00-102-0-66**

ಕ್ರ. ಸಂ.	ತಾಲೂಕು	ಅಂದಾಜು ಮೊತ್ತ	ಮಂಜೂರಾದ ಕಾಮಗಾರಿಗಳ ಸಂಖ್ಯೆ	ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ	ಬಿಡುಗಡೆಯಾದ ಅನುದಾನ	2017-18ನೇ ಸಾಲಿನ ಖರ್ಚು	ಷರಾ
1	ಉಡುಪಿ	6.00	4	4	5.99	5.93	
2	ಕುಂದಾಪುರ	6.00	3	3	5.99	5.98	
3	ಕಾರ್ಕಳ	6.00	3	3	5.99	5.96	
	ಒಟ್ಟು	18.00	10	10	17.97	17.87	

ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ 2017-18

ಲೆಕ್ಕ ಶೀರ್ಷಿಕೆ: 2515-00-101-0-29 ರೂ. ಲಕ್ಷಗಳಲ್ಲಿ

ಕ್ರ. ಸಂ.	ಜಿಲ್ಲೆ	ಮಂಜೂರಾದ ಮೊತ್ತ	ಬಿಡುಗಡೆಯಾದ ಅನುದಾನ	ವೆಚ್ಚ	ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಷರಾ
1	ಉಡುಪಿ	100.00	100.00	99.83	6	6	

ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾ):

2017–18ನೇ ಸಾಲಿಗೆ PMAY (G) ಯೋಜನೆಯಡಿ ಹೊಸ ಮನೆಗಳ ನಿರ್ಮಾಣಕ್ಕಾಗಿ 30 ಫಲಾನುಭವಿಗಳ ಗುರಿ ಇದ್ದು 21 ಫಲಾನುಭವಿಗಳ ಮಂಜೂರಾತಿಯಾಗಿರುತ್ತದೆ. ಈ ಯೋಜನೆಯಡಿ ಇತರ ವರ್ಗದವರಿಗೆ ಹೊಸಮನೆ ನಿರ್ಮಾಣಕ್ಕಾಗಿ ಸರ್ಕಾರದ ರೂ.1,31,800.00 ಹಾಗೂ ಪ.ಜಾತಿ ಮತ್ತು ಪ.ಪಂಗಡಗಳ ಫಲಾನುಭವಿಗಳಿಗೆ ರೂ.1,64,800 ಘಟಕ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸುವ ಬಗ್ಗೆ ಮಂಜೂರಾತಿ ಇರುತ್ತದೆ. ಪ್ರತೀ ಮನೆಯ ಹಂತವಾರು ಪ್ರಗತಿಯನ್ನು ಜಿಪಿಎಸ್ ಮೂಲಕ ದಾಖಲಿಸಿ ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ಅದರಂತೆ ಹಂತವಾರು ಸಹಾಯಧನವನ್ನು ನಿಗಮದಿಂದ ಬಿಡುಗಡೆ ಮಾಡಲಾಗುವುದು. ಅಲ್ಲದೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ 90 ಮಾನವ ದಿನಗಳ ಸೃಜನೆಗೆ ಅವಕಾಶವಿದೆ. ಮಾರ್ಚ್ 2018 ರವರೆಗಿನ ಪ್ರಗತಿ ವಿವರ ಕೆಳಕಂಡಂತಿದೆ.

ವರ್ಷ	ಕ್ರ.ಸಂ.	ತಾಲೂಕು	ಗುರಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಪೂರ್ಣ	ಪ್ರಗತಿ	ಪ್ರಾರಂಭಿಸಲು ಬಾಕಿ
2017–18	1	ಉಡುಪಿ	2	1	0	0	1
	2	ಕುಂದಾಪುರ	19	19	3	15	1
	3	ಕಾರ್ಕಳ	9	1	0	0	1
		ಒಟ್ಟು	30	21	3	15	3

ಬಸವ ವಸತಿ ಯೋಜನೆ:

ಬಸವ ವಸತಿ ಯೋಜನೆಯಡಿ ಗ್ರಾಮೀಣ ಪ್ರದೇಶದ ವಸತಿ ರಹಿತ/ಗುಡಿಸಲು ವಾಸಿ ಫಲಾನುಭವಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯಡಿ 2017–18ನೇ ಸಾಲಿನಲ್ಲಿ 9335 ಮನೆಗಳ ಗುರಿ ನೀಡಿದ್ದು, 4429 ಫಲಾನುಭವಿಗಳ ಮಂಜೂರಾತಿ ದೊರಕಿರುತ್ತದೆ. ಈ ಯೋಜನೆಯಡಿ ಇತರ ವರ್ಗದವರಿಗೆ ಹೊಸಮನೆ ನಿರ್ಮಾಣಕ್ಕಾಗಿ ಸರ್ಕಾರದಿಂದ ರೂ.1,31,800.00 ಹಾಗೂ ಪ.ಜಾತಿ ಮತ್ತು ಪ.ಪಂಗಡಗಳ ಫಲಾನುಭವಿಗಳಿಗೆ ರೂ.1,64,800 ಘಟಕ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸುವ ಬಗ್ಗೆ ಮಂಜೂರಾತಿ ಇರುತ್ತದೆ. ಪ್ರತೀ ಮನೆಯ ಹಂತವಾರು ಪ್ರಗತಿಯನ್ನು ಜಿಪಿಎಸ್ ಮೂಲಕ ದಾಖಲಿಸಿ ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ಅದರಂತೆ ಹಂತವಾರು ಸಹಾಯಧನವನ್ನು ನಿಗಮದಿಂದ ಬಿಡುಗಡೆ ಮಾಡಲಾಗುವುದು. ಅಲ್ಲದೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ 90 ಮಾನವ ದಿನಗಳ ಸೃಜನೆಗೆ ಅವಕಾಶವಿದೆ. ಮಾರ್ಚ್ 2018 ರವರೆಗಿನ ಪ್ರಗತಿ ವಿವರ ಕೆಳಕಂಡಂತಿದೆ.

2017–18:

ವರ್ಷ	ಕ್ರ.ಸಂ.	ತಾಲೂಕು	ಗುರಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಪೂರ್ಣ	ಪ್ರಗತಿ	ಪ್ರಾರಂಭಿಸಲು ಬಾಕಿ
2017–18	1	ಉಡುಪಿ	3240	1125	66	585	472
	2	ಕುಂದಾಪುರ	3437	2351	193	1431	725
	3	ಕಾರ್ಕಳ	2658	953	89	517	346
		ಒಟ್ಟು	9335	4429	348	2533	1543

ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್: ಈ ಯೋಜನೆಯಡಿ ಪ.ಜಾತಿ/ಪ.ಪಂಗಡದ ಫಲಾನುಭವಿಗಳಿಗೆ ರೂ.1.64,800/– ಘಟಕ ವೆಚ್ಚದಲ್ಲಿ ಮನೆ ನಿರ್ಮಿಸಲು ಮಂಜೂರಾತಿ ಇರುತ್ತದೆ. ಹಾಗೂ ಮಹಾತ್ಮ ಗಾಂಧಿ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿಯಲ್ಲಿ 90 ಮಾನವ ದಿನಗಳ ಸೃಜನೆಗೆ ಅವಕಾಶವಿದೆ. ಪ್ರತೀ ಮನೆಯ ಹಂತವಾರು ಪ್ರಗತಿಯನ್ನು ಜಿಪಿಎಸ್ ಮೂಲಕ ದಾಖಲಿಸಿ ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ಅದರಂತೆ ಹಂತವಾರು ಸಹಾಯಧನವನ್ನು ನಿಗಮದಿಂದ ಬಿಡುಗಡೆ ಮಾಡಲಾಗುವುದು. ಮಾರ್ಚ್ 2018ರ ವರೆಗಿನ ವರ್ಷವಾರು ಪ್ರಗತಿ ವಿವರ ಈ ಕೆಳಗಿನಂತಿದೆ.

ವರ್ಷ	ಕ್ರ.ಸಂ.	ತಾಲೂಕು	ಗುರಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಪೂರ್ಣ	ಪ್ರಗತಿ	ಪ್ರಾರಂಭಿಸಲು ಬಾಕಿ
2017–18	1	ಉಡುಪಿ	630	137	5	45	85
	2	ಕುಂದಾಪುರ	650	133	4	44	81
	3	ಕಾರ್ಕಳ	340	147	6	65	74
		ಒಟ್ಟು	1620	417	15	154	240

ದೇವರಾಜ್ ಅರಸು ವಸತಿ ಯೋಜನೆ: 2014–15ನೇ ಸಾಲಿನಿಂದ ವಿಶೇಷ ವರ್ಗದವರಿಗಾಗಿ ಅಂದರೆ ವಿಕಲಚೇತನರು, ಕುಷ್ಠರೋಗದಿಂದ ಗುಣಮುಖರಾದವರು, ಹೆಚ್ ಐವಿ ಸೋಂಕಿತರು, ದೇವದಾಸಿಯರು, ದೌರ್ಜನ್ಯಕ್ಕೊಳಗಾದವರು ಲೈಂಗಿಕ ಕಾರ್ಯಕರ್ತೆಯರು, ಸಫಾಯಿ ಕರ್ಮಚಾರಿಗಳು, ಮತೀಯ ಗಲಭೆ ಹಾಗೂ ಚಳುವಳಿಗಳಿಂದ ಹಾನಿಗೊಳಡಾದವರು, ಜೀತದಿಂದ ಮುಕ್ತರಾದವರು, ರಸ್ತೆ ಬದಿ/ಅಂಗಡಿಗಳ ಜಗಲಿಯಲ್ಲಿ ರಾತ್ರಿ ವೇಳೆ ಮಲಗುವ ನಿರ್ಗತಿಕರು, ಅಲೆಮಾರಿ ಜನಾಂಗದವರು, ಮಂಗಳಮುಖಿಯರು, ವಿಧವೆಯರು, ವಿಶೇಷ ವೃತ್ತಿಪರ ಗುಂಪುಗಳಾದ ನೇಕಾರರು, ಕುಶಲಕರ್ಮಿಗಳು, ಬೀಡಿ ಕಾರ್ಮಿಕರಿಗೆ ವಸತಿ ಸೌಕರ್ಯ

ಕಲ್ಪಿಸಲಾಗುತ್ತಿದ್ದು, ಅರ್ಹ ಫಲಾನುಭವಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಸಮಿತಿಯಲ್ಲಿ ಆಯ್ಕೆ ಮಾಡಲಾಗುತ್ತಿದೆ. ಈ ಯೋಜನೆಯಡಿ ಪ.ಜಾತಿ/ಪ.ಪಂಗಡದ ಫಲಾನುಭವಿಗಳಿಗೆ ರೂ.1.64,800/- ಹಾಗೂ ಇತರೆ ವರ್ಗದವರಿಗೆ ರೂ.1,31,800/- ಘಟಕ ವೆಚ್ಚದಲ್ಲಿ ಮನೆ ನಿರ್ಮಿಸಲು ಮಂಜೂರಾತಿ ಇರುತ್ತದೆ. ಹಾಗೂ ಮಹಾತ್ಮ ಗಾಂಧಿ ನರೇಗಾ ಒಗ್ಗೂಡಿಸುವಿಕೆ ಯೋಜನೆಯಡಿಯಲ್ಲಿ 90 ಮಾನವ ದಿನಗಳ ಸೃಜನೆಗೆ ಅವಕಾಶವಿದೆ. ಪ್ರತೀ ಮನೆಯ ಹಂತವಾರು ಪ್ರಗತಿಯನ್ನು ಜಿಪಿಎಸ್ ಮೂಲಕ ದಾಖಲಿಸಿ ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿ ಅದರಂತೆ ಹಂತವಾರು ಸಹಾಯಧನವನ್ನು ನಿಗಮದಿಂದ ಬಿಡುಗಡೆ ಮಾಡಲಾಗುವುದು. ಮಾರ್ಚ್ 2018ರ ವರೆಗಿನ ವರ್ಷವಾರು ಪ್ರಗತಿ ವಿವರ ಈ ಕೆಳಗಿನಂತಿದೆ.

ವರ್ಷ	ವರ್ಗ	ಕ್ರ.ಸಂ.	ತಾಲೂಕು	ಗುರಿ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	ಪೂರ್ಣ	ಪ್ರಗತಿ	ಪ್ರಾರಂಭಿಸಲು ಬಾಕಿ
2017-18	ಬೀಡಿ ಕಾರ್ಮಿಕರು	1	ಉಡುಪಿ	0	0	0	0	0
		2	ಕುಂದಾಪುರ	44	34	1	19	14
		3	ಕಾರ್ಕಳ	13	13	0	5	8
			ಒಟ್ಟು	57	47	1	24	22
	ಹೆಚ್‌ಐವಿ ಸೋಂಕಿತರು	1	ಉಡುಪಿ	4	1	0	0	1
		2	ಕುಂದಾಪುರ	25	11	0	5	6
		3	ಕಾರ್ಕಳ	5	0	0	0	0
			ಒಟ್ಟು	34	12	0	5	7
	ಅಂಗವಿಕಲರು	1	ಉಡುಪಿ	0	0	0	0	0
		2	ಕುಂದಾಪುರ	83	61	2	26	33
		3	ಕಾರ್ಕಳ	4	3	0	2	1
			ಒಟ್ಟು	87	64	2	28	34
	ಕುಷ್ಠರೋಗದಿಂದ ಗುಣಮುಖರಾದವರು	1	ಉಡುಪಿ	1	0	0	0	0
		2	ಕುಂದಾಪುರ	12	4	0	3	1
		3	ಕಾರ್ಕಳ	0	0	0	0	0
			ಒಟ್ಟು	13	4	0	3	1
	ಮಂಗಳಮುಖಿಯರು	1	ಉಡುಪಿ	0	0	0	0	0
		2	ಕುಂದಾಪುರ	1	0	0	0	0
		3	ಕಾರ್ಕಳ	0	0	0	0	0
			ಒಟ್ಟು	1	0	0	0	0

	ವಿಧವೆಯರು	1	ಉಡುಪಿ	8	8	0	3	5
		2	ಕುಂದಾಪುರ	205	156	6	82	66
		3	ಕಾರ್ಕಳ	12	9	0	4	5
			ಒಟ್ಟು	225	173	6	89	76

ವಸತಿ ನಿವೇಶನ ಯೋಜನೆ: ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವಸತಿ ರಹಿತರಿಗೆ ನಿವೇಶನ ಸೌಕರ್ಯವನ್ನು ಒದಗಿಸುವುದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಇಂದಿರಾ ಗ್ರಾಮೀಣ ನಿವೇಶನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ 30*40 ಅಳತೆಯುಳ್ಳ ಸರ್ಕಾರಿ ನಿವೇಶನವನ್ನು ಉಚಿತವಾಗಿ ಹಂಚಿಕೆ ಮಾಡಲಾಗುತ್ತಿದೆ. ಫಲಾನುಭವಿಗಳ ಆಯ್ಕೆಯನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ.

2017–18ನೇ ಸಾಲಿನಲ್ಲಿ ನಿಗಮದಿಂದ ಮಂಜೂರಾತಿಯಾಗಿ ಬಂದಿರುವ ಹಕ್ಕುಪತ್ರಗಳ ವಿವರ:

ತಾಲೂಕು	ಎಕ್ರೆ	ಮಂಜೂರಾತಿಯಾಗಿರುವ ಹಕ್ಕುಪತ್ರಗಳ ಸಂಖ್ಯೆ
ಉಡುಪಿ	0.84	10
ಕುಂದಾಪುರ	1.75	50
ಕಾರ್ಕಳ	7.34	159
ಒಟ್ಟು	9.93	219

					FOUNDATION		LINTEL		ROOF				
Sl No	**District**	**Taluk**	**MPIC Target**	**No. Of Houses completed since 01-04-2017**	**OK**	**NOT OK**	**OK**	**NOT OK**	**OK**	**NOT OK**	**Total OK**	**Unstarted Houses**	**% of Achievement**
1	Udupi	Karkala	1156	995	588	9	479	6	293	6	1360	497	86.07
2	Udupi	Kundapura	1953	1585	1258	18	1262	7	597	16	3117	1203	81.16
3	Udupi	Udupi	1491	1150	746	27	614	13	395	14	1755	649	77.13
		Total	**4600**	**3730**	**2592**	**54**	**2355**	**26**	**1285**	**36**	**6232**	**2349**	

ಸಾರ್ವಜನಿಕ ಶಿಕ್ಷಣ ಇಲಾಖೆ:

ಉಡುಪಿ ಜಿಲ್ಲೆಯಲ್ಲಿರುವ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆ:

2017–18ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ವಿವಿಧ ಆಡಳಿತಕ್ಕೆ ಒಳಪಟ್ಟ ಶಾಲೆಗಳ ವಿವರ:–

ಕ್ರ.ಸಂ	ಶಾಲೆಗಳ ಹೆಸರು	ಕಿರಿಯ ಪ್ರಾಥಮಿಕ ಶಾಲೆ	ಹಿರಿಯ ಪ್ರಾಥಮಿಕ ಶಾಲೆ	ಪ್ರೌಢ ಶಾಲೆಗಳು
1	ಸರ್ಕಾರಿ	235	364	106
2	ಅನುದಾನಿತ	11	184	74
3	ಅನುದಾನ ರಹಿತ	27	137	111

ಜಿಲ್ಲೆಯಲ್ಲಿನ ವಿದ್ಯಾರ್ಥಿಗಳ ದಾಖಲಾತಿ ವಿವರ ಈ ಮುಂದಿನಂತಿವೆ:–

ವಿಭಾಗ	ಎಲ್ಲಾ ಸಮುದಾಯ ಒಟ್ಟು			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ ಶಾಲಾ ವಿಭಾಗ	57039	52970	110009	4180	3994	8174	3017	2773	5790
ಪ್ರೌಢ ಶಾಲಾ ವಿಭಾಗ	25120	22988	48108	1907	1730	3637	1343	1151	2494

2017-18ನೇ ಸಾಲಿನಲ್ಲಿ ಜಿಲ್ಲೆಯ ಎಸ್.ಎಸ್.ಎಲ್.ಸಿ ಪರೀಕ್ಷಾ ಮಾಹಿತಿ:-

ವಿದ್ಯಾರ್ಥಿಗಳು	ಹಾಜರಾದ ವಿದ್ಯಾರ್ಥಿಗಳು	ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು	ಫಲಿತಾಂಶ ಶೇಕಡಾ
ರೆಗ್ಯೂಲರ್	13185	11642	88.30

2017ನೇ ಸಾಲಿನಲ್ಲಿ ಶೇ.88.30% ಪಡೆದು ಉಡುಪಿ ಜಿಲ್ಲೆ ಪ್ರಥಮ ಸ್ಥಾನ ಪಡೆದಿರುತ್ತದೆ. ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ವಲಯವಾರು ಈ ಮುಂದಿನಂತಿದೆ. ಕಾರ್ಕಳ 89.57%, ಬ್ರಹ್ಮಾವರ 88.47%, ಉಡುಪಿ 87.53%, ಕುಂದಾಪುರ 90.37%, ಬೈಂದೂರು 85.25% ಇರುತ್ತದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 14 ಸರ್ಕಾರಿ ಪ್ರೌಢಶಾಲೆಗಳಲ್ಲಿ 05 ಅನುದಾನಿತ ಪ್ರೌಢಶಾಲೆಗಳಲ್ಲಿ ಮತ್ತು 30 ಅನುದಾನ ರಹಿತ ಪ್ರೌಢಶಾಲೆಗಳಲ್ಲಿ (ಒಟ್ಟು 49 ಪ್ರೌಢಶಾಲೆಗಳಲ್ಲಿ) ಶೇಕಡಾ 100 ಫಲಿತಾಂಶ ದಾಖಲಾಗಿದೆ.

ಸಮುದಾಯದತ್ತ ಕಾರ್ಯಕ್ರಮ:-

ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಸ್ತುತ ವರ್ಷದಲ್ಲಿಯೂ ಸಹ ಎರಡು ಬಾರಿ ಆಯೋಜಿಸಲಾಗಿದೆ. ಶಾಲಾಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರು ಭಾಗಿಗಳಾಗುವ ಮೂಲಕ ಶಾಲೆಯ ಭೌತಿಕ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಅನುಕೂಲವಾಗಿರುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಉತ್ತೇಜಿಸುವಲ್ಲಿಯೂ ಈ ಕಾರ್ಯಕ್ರಮ ಸಹಕಾರಿಯಾಗಿದೆ.

ಸಮನ್ವಯ ಶಿಕ್ಷಣ:-

2017-18ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮೂಲಕ ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸಲಾಗಿದ್ದು, ವೈದ್ಯಕೀಯ ತಪಾಸಣಾ ಶಿಬಿರವನ್ನು ಜಿಲ್ಲೆಯ 5 ವಲಯಗಳಲ್ಲಿ ನಡೆಸಲಾಗಿದೆ. ಪ್ರತಿ ವಲಯಕ್ಕೆ ರೂ. 0.15 ಲಕ್ಷದಂತೆ ಒಟ್ಟು ರೂ. 0.75ಸಾವಿರ ವೆಚ್ಚವಾಗಿದೆ. ಹಾಗೂ ಜಿಲ್ಲಾ ಹಂತದಲ್ಲಿ ವೈದ್ಯಕೀಯ ಶಿಬಿರಕ್ಕೆ ಬಿಡುಗಡೆಯಾದ ರೂ.0.75ಸಾವಿರದಲ್ಲಿ ರೂ0.75ಸಾವಿರ ವೆಚ್ಚವಾಗಿತ್ತದೆ. 249 ಅಂಗವಿಕಲ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ರೂ 10.30 ಖರ್ಚಾಗಿದೆ. ಲಕ್ಷ ವೆಚ್ಚದಲ್ಲಿ ಪೂರೈಸಲಾಗಿದೆ. ಸಿಡ್ಲ್ಯೂಎಸ್ಎನ್ ಮಕ್ಕಳ ಸಾರಿಗೆ ಭತ್ಯೆಗಾಗಿ ರೂ. 6.76 ಲಕ್ಷ ವೆಚ್ಚವಾಗಿದೆ. ವಿಶ್ವ ಅಂಗವಿಕಲ ದಿನಾಚರಣೆಗೆ ರೂ 1.00 ವೆಚ್ಚವಾಗಿದೆ. ಎಸ್ಕಾರ್ಟ್ ಸೌಲಭ್ಯಕ್ಕೆ ರೂ 5.21 ಖರ್ಚಾಗಿದೆ. ಹಾಗೂ ಫಿಜಿಯೋಥೆರಪಿಸ್ಟ್ ಗೌರವ ಸಂಭಾವನೆಗಾಗಿ ರೂ.2.54 ಲಕ್ಷ ಅನುದಾನ ವೆಚ್ಚವಾಗಿರುತ್ತದೆ, ಹಾಗೂ ಪ್ರಕೃತಿ ಅಧ್ಯಯನ ಶಿಬಿರಕ್ಕೆ ಒಟ್ಟು 1.50 ಲಕ್ಷ ವೆಚ್ಚವಾಗಿರುತ್ತದೆ.

ಸರ್ವ ಶಿಕ್ಷಣ ಅಭಿಯಾನ:-

2017-18ನೇ ಸಾಲಿನ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಜಿಲ್ಲೆಗೆ ರೂ.1803.115 ಲಕ್ಷಗಳ ಅನುಮೊದನೆ ದೊರೆತಿದ್ದು, ಇದರಲ್ಲಿ ರೂ.1275.976 ಲಕ್ಷ ವೆಚ್ಚವಾಗಿರುತ್ತದೆ. ಉಚಿತ ಪಠ್ಯಪುಸ್ತಕಕ್ಕೆ (ಅನುದಾನಿತ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ) ರೂ.43.8685 ವೆಚ್ಚವಾಗಿರುತ್ತದೆ. 1 ರಿಂದ 8ನೇ ತರಗತಿವರೆಗಿನ ಎಲ್ಲಾ

ಹೆಣ್ಣು ಮಕ್ಕಳು ಮತ್ತು ಎಸ್.ಸಿ, ಎಸ್.ಟಿ ಹಾಗೂ ಬಿ.ಪಿ.ಎಲ್ ಬಾಲಕರಿಗೆ 2ನೇ ಜೊತೆ ಸಮವಸ್ತ್ರಕ್ಕಾಗಿ ರೂ.90.648 ಲಕ್ಷ, ಎಸ್.ಎಸ್.ಎ ಯೋಜನೆಯಡಿ ನೇಮಕಗೊಂಡ ಶಿಕ್ಷಕರ ವೇತನಕ್ಕಾಗಿ 602.90ಲಕ್ಷ, ಸೇವಾ ನಿರತ ಶಿಕ್ಷಕರ ತರಬೇತಿಗಾಗಿ 5.719ಲಕ್ಷ ಬಿ.ಆರ್.ಸಿ ವೇತನ ಟಿ.ಎ ಮತ್ತು ಸಾದಿಲ್ವಾರು ವೆಚ್ಚ ರೂ. 100.61 ಲಕ್ಷ, ಸಿ.ಆರ್.ಪಿ ವೇತನ ಮತ್ತು ಸಾದಿಲ್ವಾರು 226.71 ಲಕ್ಷ, ಶಾಲಾ ಅನುದಾನಕ್ಕೆ 79.23ಲಕ್ಷ, ನಿರ್ವಹಣಾ ಅನುದಾನಕ್ಕೆ 33.543ಲಕ್ಷ, ಸಮನ್ವಯ ಶಿಕ್ಷಣಕ್ಕೆ 28.81ಲಕ್ಷ, ಜಿಲ್ಲಾ ಆಡಳಿತಾತ್ಮಕ ವೆಚ್ಚಗಳಿಗೆ 27.735ಲಕ್ಷ ಹಾಗೂ ಸಮುದಾಯ ಜಾಗೃತಿ ಕಾರ್ಯಕ್ರಮಕ್ಕೆ ರೂ.0.00 ಲಕ್ಷ ಅನುದಾನ ವೆಚ್ಚವಾಗಿರುತ್ತದೆ, ರಾಷ್ಟ್ರೀಯ ಆವಿಷ್ಕಾರ ಅಭಿಯಾನಕ್ಕೆ 5.20 ಲಕ್ಷ ವೆಚ್ಚ ಹಾಗು ಸಾರಿಗೆ ಅನುದಾನ 63.69 ಲಕ್ಷ ವೆಚ್ಚವಾಗಿರುತ್ತದೆ.

ಶಿಕ್ಷಕರ ಮಾಹಿತಿ:-

ಪ್ರಸ್ತುತ ವರ್ಷದಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವಿವರಗಳು ಮುಂದಿನಂತಿವೆ.

ಶಾಲೆ	ಸರ್ಕಾರಿ	ಅನುದಾನಿತ	ಅನುದಾನರಹಿತ	ಒಟ್ಟು
ಪ್ರಾಥಮಿಕ	2236	510	1608	4354
ಪ್ರೌಢ	960	510	882	2352

ಅಕ್ಷರ ದಾಸೋಹ ಕಾರ್ಯಕ್ರಮ ಮತ್ತು ಕ್ಷೀರ ಭಾಗ್ಯ ಯೋಜನೆ:

ಕ್ರೇಂದ್ರ ಸರ್ಕಾರ ಪ್ರಾಯೋಜಿತ ರಾಜ್ಯ ಸರ್ಕಾರ ಪ್ರತಿಷ್ಠಿತ ಅಕ್ಷರ ದಾಸೋಹ ಕಾರ್ಯಕ್ರಮದನ್ವಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿ ಊಟ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಕ್ರಮದಡಿ 85132 ಮಕ್ಕಳು ಬಿಸಿಯೂಟ ಸ್ವೀಕರಿಸುತ್ತಿದ್ದಾರೆ. ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಒಟ್ಟು ರೂ. 2107.93ಖರ್ಚಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಜಂತು ನಿವಾರಕ ಮಾತ್ರೆ, ವಿಟಮಿನ್ ಎ ಅನ್ನಾಂಗದ ಮಾತ್ರೆಗಳನ್ನು ನೀಡಲಾಗಿದೆ.

ಕ್ಷೀರ ಭಾಗ್ಯ ಯೋಜನೆಯಂತೆ 968 ಶಾಲೆಗಳ 86198 ವಿದ್ಯಾರ್ಥಿಗಳಿಗೆ ವಾರದ 3 ದಿನ ಕೆನೆಭರಿತ ಹಾಲು ನೀಡಲಾಗುತ್ತಿದೆ. ಕ್ಷೀರ ಭಾಗ್ಯ ಯೋಜನೆಗಾಗಿ ರೂ. 586.78ಲಕ್ಷ ಬಳಕೆ ಮಾಡಲಾಗಿದೆ.

ಉಚಿತ ಬೈಸಿಕಲ್ ವಿತರಣೆ:

2017-18 ನೇ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರೌಢ ಶಾಲೆಗಳ 8ನೇ ತರಗತಿ ಸೇರಿದ ಮಕ್ಕಳಿಗೆ ವ್ಯಾಸಂಗ ಮಾಡುತ್ತಿರುವ 89.96 ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸಲಾಗಿದೆ.

ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ:

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಆರೋಗ್ಯ ತಪಾಸಣೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಕಾರದೊಂದಿಗೆ ನಡೆಸಲಾಗಿದೆ. ಆರೋಗ್ಯ ನ್ಯೂನತೆ ಕಂಡು ಬಂದ ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ಕ್ರಮ ವಹಿಸಲಾಗಿರುತ್ತದೆ. ಹೊಸದಾಗಿ 1ನೇ ತರಗತಿ ಸೇರಿದ ಮಕ್ಕಳಿಗೆ ಆರೋಗ್ಯ ತಪಾಸಣೆ ದಾಖಲೆ ವಿವರಗಳುಳ್ಳ ಹೆಲ್ತ್ ಕಾರ್ಡ್‌ಗಳನ್ನು ನೀಡಲಾಗಿದೆ.

ಹದಿಹರೆಯದವರಿಗೆ ಕಬ್ಬಿಣಾಂದ ಮಾತ್ರೆ ನೀಡುವ ಕಾರ್ಯಕ್ರಮದನ್ವಯ ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಯಲ್ಲಿನ 6 ರಿಂದ 10ನೇ ತರಗತಿಯಲ್ಲಿನ ಮಕ್ಕಳಿಗೆ ವಾರಕ್ಕೊಂದಂತೆ 52 ವಾರ ಕಾಲ ಕಬ್ಬಿಣಾಂಶದ ಮಾತ್ರೆ ಹಾಗೂ ವರ್ಷಕ್ಕೆ ಎರಡು ಸಲ ಅಲ್ಬೆಂಡಜೋಲ್ ಮಾತ್ರೆ ನೀಡಲಾಗಿದೆ.

ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ-2009(ಆರ್.ಟಿ.ಇ) ರಡಿಯಲ್ಲಿ ಪ್ರಸ್ತುತ ವರ್ಷ 1003 ಮಕ್ಕಳು ದಾಖಲಾಗಿರುತ್ತಾರೆ. ಆರ್.ಟಿ.ಇ ದಾಖಲಾದ ಮಕ್ಕಳಿಗೆ ಶುಲ್ಕ ಮರುಪಾವತಿಗಾಗಿ ರೂ. 345.81 ಲಕ್ಷ ಬಳಕೆ ಮಾಡಲಾಗಿದೆ.

ವಿದ್ಯಾವಿಕಾಸ ಶೈಕ್ಷಣಿಕ ಉತ್ತೇಜನ ಇತರೆ ಯೋಜನೆಗಳು:-

2017-18 ನೇ ಸಾಲಿನಲ್ಲಿ ಈ ಯೋಜನೆಯಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಗಳಲ್ಲಿನ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ವಿತರಣೆ ಮಾಡಲಾಗಿದೆ. ಒಟ್ಟು ಫಲಾನುಭವಿಗಳು 86198 ವಿಕಾಸ ಯೋಜನೆಯನ್ವಯ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1 ರಿಂದ 10ನೇ ತರಗತಿಗಳಲ್ಲಿನ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಿಸಲಾಗಿದೆ. ಒಟ್ಟು ಫಲಾನುಭವಿಗಳು 55976 ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಹೆಣ್ಣು ಮಕ್ಕಳಿಗೆ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳಿಗೆ ರೂ. 32.26 ಲಕ್ಷ ಸರ್ಕಾರೇತರ ಶುಲ್ಕ ಮತ್ತು ಎಸ್.ಎಸ್.ಎಲ್.ಸಿ ಶುಲ್ಕ ಮರುಪಾವತಿ ಮಾಡಲಾಗಿದೆ.

ಕರ್ನಾಟಕ ಪ್ರವಾಸ ದರ್ಶನ ಕಾರ್ಯಕ್ರಮ:

ಜಿಲ್ಲೆಯ 739 ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 4 ದಿನಗಳ ಕರ್ನಾಟಕ ಪ್ರವಾಸ ದರ್ಶನ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಬಗ್ಗೆ ರೂ.25,86,500 ಲಕ್ಷ ಬಳಕೆ ಮಾಡಲಾಗಿದೆ.

ಕ್ರೀಡಾ ಚಟುವಟಿಕೆಗಳು:

2017-18ನೇ ಸಾಲಿನಲ್ಲಿ 14/17 ವರ್ಷ ವಯೋಮಿತಿಯ ಶಾಲಾ ಬಾಲಕ/ಬಾಲಕಿಯರಿಗೆ ರಾಜ್ಯ ಮಟ್ಟದ ತ್ರೋಬಾಲ್ ಕ್ರೀಡಾಕೂಟವು ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಬೆಳ್ವೆ ಕುಂದಾಪುರ ತಾಲೂಕು ಉಡುಪಿ ಜಿಲ್ಲೆ ಇಲ್ಲಿ ಹಾಗೂ ವಿಭಾಗಮಟ್ಟದ ತ್ರೋಬಾಲ್ ಪಂದ್ಯಾಟವು ವಿದ್ಯಾಮಂದಿರ ಹಿ.ಪ್ರಾ.ಶಾಲೆ ಹಾರಾಡಿ ಬ್ರಹ್ಮಾವರ ಇಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಮಟ್ಟದ ಕ್ರೀಡಕೂಟವು ಸೈಂಟ್ ಲಾರೆನ್ಸ್ ಕನ್ನಡ ಮಧ್ಯಮ ಪ್ರೌಢ ಶಾಲೆ ಮೂಡುಬೆಳ್ಳೆ ಉಡುಪಿ ಇಲ್ಲಿ ನಡೆಸಲಾಗಿತ್ತು.

ಕರಾಟೆ, ಅಥ್ಲೆಟಿಕ್ಸ್, ಸ್ಪರ್ಧೆಗಳಲ್ಲಿ 14/17 ಬಾಲಕ/ಬಾಲಕಿಯರು ರಾಷ್ಟ್ರಮಟ್ಟದಲ್ಲಿ ಸ್ಥಾನ ಪಡೆದಿರುತ್ತಾರೆ. ಜಿಲ್ಲೆಯಿಂದ ರಾಜ್ಯಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳಿಗೆ ಒಟ್ಟು ರೂ 93,000/- ಮೊತ್ತದ ಟ್ರಾಕ್ ಸೂಟ್ ನೀಡಿ ಪ್ರೋತ್ಸಾಹಿಸಲಾಗಿದೆ.

2017-18 ನೇ ಸಾಲಿನ ವಿಕಲಚೇತನರ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮಸ್ಥಾನ-08 ದ್ವೀತಿಯ-03 ತೃತೀಯ-03 ಸ್ಥಾನವನ್ನು ಪಡೆದಿರುತ್ತಾರೆ.

ಸಾಂಸ್ಕೃತಿಕ ಚಟುವಟಿಕೆಗಳು:

ಪ್ರತಿಭಾ ಕಾರಂಜಿ ಶಿರೋನಾಮೆಯಡಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ವಿವಿಧ ರೀತಿಯ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಾಲಾ ಹಂತ, ವಲಯ ಹಂತ, ಹಾಗೂ ಜಿಲ್ಲಾ ಹಂತದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳನ್ನು ಸಂಯೋಜಿಸಿ ಮಕ್ಕಳಲ್ಲಿ ಸುಪ್ತವಾಗಿರುವ ಸಾಂಸ್ಕೃತಿಕ ಪ್ರತಿಭೆಗಳನ್ನು ಪ್ರೋತ್ಸಾಹಿಸಲಾಗಿದೆ. ದಿನಾಂಕ:15-09-17 ಮತ್ತು ದಿ: 16-09-2017 ರಂದು ಜಿಲ್ಲಾ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂತಮೇರಿ ಪ್ರೌಢ ಶಾಲೆ ಕುಂದಾಪುರ ವಲಯ ಇಲ್ಲಿ ನಡೆಸಲಾಗಿದೆ. ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ರೂ. 5,61,000 ಅನುದಾನ ಒದಗಿಸಲಾಗಿದೆ. ವಲಯಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಕ್ಕಾಗಿ ಪ್ರತಿ ವಲಯಕ್ಕೆ ರೂ. 3,06,500 ರಂತೆ 5 ವಲಯಗಳಿಗೆ ಒಟ್ಟು ರೂ. 15,32,500/- ಅನುದಾನ ಒದಗಿಸಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ ಜರುಗಿರುತ್ತದೆ. ಸ್ಪರ್ಧೇಯನ್ನು ದಿನಾಂಕ: 23-11-2017 ರಂದು ಶಿಕ್ಷಕರ ಸಹಪಠ್ಯ ಚಟುವಟಿಕೆಯನ್ನು ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಉಡುಪಿ ಇಲ್ಲಿ ನಡೆಸಲಾಯಿತು.

ಐ.ಟಿ ಕ್ವಿಜ್:-

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನದಲ್ಲಿ ಹೆಚ್ಚಿನ ಅರಿವು ಮೂಡಿಸುವ ಬಗ್ಗೆ ಮಾಹಿತಿ ತಂತ್ರಜ್ಞಾನ ಇಲಾಖೆಯ ನಿರ್ದೇಶನದ ಅನುಸಾರ ಜಿಲ್ಲಾ ಮಟ್ಟದ ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ ಕಾರ್ಯಕ್ರಮವನ್ನು ಸ.ಪ್ರೌ.ಶಾಲೆ ವಳಕಾಡು, ಉಡುಪಿ ಇಲ್ಲಿ ದಿನಾಂಕ: 24-09-2016 ರಂದು ಏರ್ಪಡಿಸಲಾಗಿದೆ. ಈ ಮೇಲಕಿನ ಕಾರ್ಯಕ್ರಮಗಳಿಗೆ ರೂ. 90,750/- ಅನುದಾನ ಒದಗಿಸಲಾಗಿದ್ದು, ಪೂರ್ಣ ಬಳಕೆ ಆಗಿರುತ್ತದೆ.

ಇಕೋ ಕ್ಲಬ್‌ಗಳ ರಚನೆ:

ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುವ ದಿಸೆಯಲ್ಲಿ ಜಿಲ್ಲೆಯ 250 ಶಾಲೆಗಳಲ್ಲಿ ಇಕೋಕ್ಲಬ್ ಗಳನ್ನು ಸ್ಥಾಪಿಸಿ ಒಟ್ಟು ರೂ 12.75 ಲಕ್ಷ ಅನುದಾನ ಒದಗಿಸಲಾಗಿದೆ. ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿಯಲ್ಲಿ ಶಾಲೆಗಳಲ್ಲಿ ಪರಿಸರ ಜಾಗೃತಿ ಮತ್ತು ಸಂರಕ್ಷಣೆಯ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತದೆ, ಒಟ್ಟು ರೂ 12.75 ಲಕ್ಷ ಖರ್ಚಾಗಿರುತ್ತದೆ.

ಗ್ರಾಹಕ ಕ್ಲಬ್ ರಚನೆ:-

ಉಡುಪಿ ಜಿಲ್ಲೆಯಲ್ಲಿ ಪರಿಸರ ಆಯ್ದ 40 ಶಾಲೆಗಳಲ್ಲಿ ಗ್ರಾಹಕ ಕ್ಲಬ್‌ಗಳು ಕಾರ್ಯನಿರ್ವಹಿಸುತ್ತಿವೆ. ಈಲ್ಲಾ ಬಳಕೆದಾರರ ವೇದಿಕೆಯು ನೋಡೆಲ್ ಸಂಸ್ಥೆ ಆಗಿರುತ್ತದೆ. ವಿದ್ಯಾರ್ಥೋಗಳ ಮೂಲಕ ಸಾರ್ವಜನಿಕರಲ್ಲಿ ಗ್ರಾಹಕ ಜಾಗೃತಿ ಅರಿವನ್ನು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ(ಆರ್.ಎಂ.ಎಸ್.ಎ)

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ(ಆರ್.ಎಂ.ಎಸ್.ಎ.) ಕಾರ್ಯಕ್ರಮದನ್ವಯ ಪ್ರೌಢ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲಾಗುತ್ತಿದೆ. ಪ್ರಸ್ತುತ 106 ಸರ್ಕಾರಿ ಪ್ರೌಢಶಾಲೆಗಳಿಗೆ ರೂ. 53.00 ಲಕ್ಷ ಶಾಲಾನುದಾನ ಬಿಡುಗಡೆ ಆಗಿದ್ದು ,5 ಮೊರಾರ್ಜಿದೇಶಾಯಿ ಶಾಲೆಗೆಳಿಗೆ 2.50 ಲಕ್ಷ ಶಾಲಾನುದಾನ ಬಿಡುಗಡೆ ಆಗಿದೆ. 14.82 ಸೇವಾ ನಿರತ ಶಿಕ್ಷಕರ ತರಬೇತಿಗೆ ರೂ.25.53 ಲಕ್ಷ ಖರ್ಚಾಗಿರುತ್ತದೆ. 106 ಸರಕಾರಿ ಪ್ರೌಢ ಶಾಲಾ ಹೆಣ್ಣು ಮಕ್ಕಳಿಗೆ ಕರಾಟೆ ತರಬೇತಿಗಾಗಿ ರೂ. 9.54 ಅನುದಾನ ಬಿಡುಗಡೆಯಾಗಿದ್ದು ರೂ. 9.54 ಲಕ್ಷ ಖರ್ಚಾಗಿರುತ್ತದೆ. ಎಸ್.ಡಿ.ಎಂ.ಸಿ ತರಬೇತಿಗಾಗಿ ರೂ 2.977 ಖರ್ಚಾಗಿರುತ್ತದೆ. ಸಮನ್ವಯ ಶಿಕ್ಷಣಕ್ಕಾಗಿ 10.71 ಲಕ್ಷ ಬಿಡುಗಡೆಯಾಗಿದ್ದು ರೂ. 9.015 ಲಕ್ಷ ಖರ್ಚಾಗಿರುತ್ತದೆ. ಉಡುಪಿ ಜಿಲ್ಲೆಯ ಆರ್.ಎಂ.ಎಸ್.ಎ. ಅಡಿಯಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜು ಬೈಲೂರು, ಸರಕಾರಿ ಪದವಿ ಪೂರ್ವ ಕಾಲೇಜು ಕುಂದಾಪುರ, ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಉಡುಪಿ ಈ ಮೂರು ಶಾಲೆಗಳಿಗೆ ವೃತ್ತಿ ಶಿಕ್ಷವು ಪ್ರಾರಂಭಗೊಂಡಿರುತ್ತದೆ.

ಜಿಲ್ಲಾ ವಲಯ ಕಾರ್ಯಕ್ರಮ:

ಜಿಲ್ಲಾ ವಲಯ ಯೋಜನಾ ಕಾರ್ಯಕ್ರಮದಲ್ಲಿ ಒಟ್ಟು ರೂ. 25636.72 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 23122.45 ಲಕ್ಷ ಅನುದಾನ ಖರ್ಚಾಗಿದೆ. ಈ ಅನುದಾನದಲ್ಲಿ 78 ಪ್ರಾಥಮಿಕ ಮತ್ತು 43 ಪ್ರೌಢಶಾಲಾ ಕಟ್ಟಡಗಳ ದುರಸ್ತಿ ಕಾರ್ಯ ನಡೆಸಿದ್ದು, ಅವುಗಳಿಗೆ ಕ್ರಮವಾಗಿ ರೂ. 50.00 ಲಕ್ಷ ಹಾಗೂ ರೂ.50.00 ಲಕ್ಷ ಖರ್ಚು ಮಾಡಲಾಗಿದೆ, ಇದರಲ್ಲಿ ಶಿಕ್ಷಕರ/ಸಿಬ್ಬಂದಿಗಳ ಶಿಕ್ಷಕ/ಸಿಬ್ಬಂದಿಯವರ ವೇತನ ಪಾವತಿಗೆ ರೂ.20853.80 ವೆಚ್ಚವಾಗಿದೆ. ಸರ್ಕಾರಿ ಪ್ರೌಢ ಶಾಲೆಗಳಲ್ಲಿರುವ ಎಸ್.ಸಿ ಮತ್ತು ಎಸ್.ಟಿ ಮಕ್ಕಳ ಮತ್ತು ಹೆಣ್ಣುಮಕ್ಕಳ ಸರ್ಕಾರೇತರ ಶುಲ್ಕ ಪಾವತಿಗಾಗಿ ಮತ್ತು ಎಸ್ಎಸ್.ಎಲ್.ಸಿ ಪರೀಕ್ಷಾ ಶುಲ್ಕ ಪಾವತಿಗೆ ರೂ. 32.26 ಲಕ್ಷ ವೆಚ್ಚವಾಗಿದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಯ 1 ರಿಂದ 10ನೇ ತರಗತಿಯವರೆಗಿನ ಮಕ್ಕಳಿಗೆ ಬಿಸಿಯೂಟ, ಕ್ಷೀರ ಭಾಗ್ಯ ಮತ್ತು ಅಡುಗೆಕೋಣೆ ನಿರ್ಮಾಣಕ್ಕಾಗಿ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ರೂ. 2107.93 ಲಕ್ಷ ವೆಚ್ಚವಾಗಿದೆ. ಒಟ್ಟು 74 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಪೀಠೋಪಕರಣ ಸೌಲಭ್ಯ ಮತ್ತು ನಮೂನೆವಹಿ ಸರಬರಾಜಿಗಾಗಿ ರೂ. 26.00 ಲಕ್ಷ ಖರ್ಚಾಗಿರುತ್ತದೆ. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರು ದೀರ್ಘಕಾಲ ರಜೆಯ ಮೇಲೆ ತೆರಳಿದಾಗ ಬದಲಿಯಾಗಿ ನಿವೃತ್ತ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಈ ಬಾಬ್ತು ರೂ.4.11 ಲಕ್ಷ ವೆಚ್ಚವಾಗಿದೆ.

ರಾಜ್ಯ ವಲಯ ಕಾರ್ಯಕ್ರಮ:

ರಾಜ್ಯ ವಲಯ ಕಾರ್ಯಕ್ರಮದಲ್ಲಿ ರೂ.422.09 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಆ ಪೈಕಿ ರೂ. 416.80 ಲಕ್ಷ ಅನುದಾನವನ್ನು ಬಳಸಿಕೊಳ್ಳಲಾಗಿದೆ. ಈ ಅನುದಾನವನ್ನು ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ರೂ.20.93 ಲಕ್ಷ ಖರ್ಚಾಗಿದೆ. ವಿದ್ಯಾವಿಕಾಸ ಯೋಜನೆಯಡಿ 5 ವಲಯಗಳಿಗೆ ಸಮವಸ್ತ್ರ ಸಾಗಾಟಕ್ಕೆ ರೂ.1.00 ಲಕ್ಷ, ಕ್ರೀಡಾಚಟುವಟಿಕೆಗಳಿಗೆ, ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಹೊಸ ಕೊಠಡಿ, ಶೌಚಾಲಯ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೆರಿ ನಿರ್ಮಾಣ ಮೊದಲಾದ ಸಿವಿಲ್ ಕಾಮಗಾರಿಗಳಿಗೆ ರೂ 384.12 ಲಕ್ಷ ವದಗಿಸಲಾಗಿದೆ.ಆರ್.ಟಿ.ಇ ದಾಖಲಾದ ಮಕ್ಕಳಿಗೆ ಶುಲ್ಕ ಮುಪಾವತಿಗೆ ರೂ.346.00 ಲಕ್ಷ ಮತ್ತು ಪ್ರವಾಸೋದ್ಯಮ ಇಲಾಖೆಯ

ಸಹಯೋಗದಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ನಡೆಸಿದ್ದು ಈ ಬಗ್ಗೆ ರೂ.25.86 ಲಕ್ಷ ಬಳಸಲಾಗಿದೆ. ಸಾಸಕರ ಪ್ರದೇಶಾಭಿವೃದ್ಧಿ ಒಂದು ಬಾರಿ ವೆಚ್ಚ ಯೋಜನೆಯಡಿ 93 ಶಾಲಾ ಕೊಠಡಿಗಳ ರಚನೆಗಾಗಿ ರೂ 808.24 ಲಕ್ಷ ಬಿಡುಗಡೆಯಾಗಿರುತ್ತದೆ.

ಶಿಕ್ಷಕರ ತರಬೇತಿ & ಪೂರಕ ಸೌಲಭ್ಯಗಳು:

2017–18 ನೇ ಸಾಲಿನಲ್ಲಿ **SSA** ಯೋಜನೆಯ **TPD** ಗುರುಚೇತನಾ ತರಬೇತಿಗಾಗಿ 1360 ಗುರಿ ನಿಗದಿ ಪಡಿಸಿ ಈ ಬಗ್ಗೆ ರೂ. 15,30,000/– ರಷ್ಟು ಅನುದಾನ ಬಿಡುಗಡೆಯಾಗಿತ್ತು. ಎಲ್ಲಾ ಬಿ.ಆರ್.ಸಿ ಕೇಂದ್ರ ಹಾಗೂ ಡಯಟ್ ವತಿಯಿಂದ 1264 ಶಿಕ್ಷಕರಿಗಾಗಿ ಹಮ್ಮಿಕೊಳ್ಳಲಾದ ತರಬೇತಿಗಳಿಗಾಗಿ ಒಟ್ಟು ರೂ. 14,22,000/– ಖರ್ಚಾಗಿದೆ. 6320 ಮಾನವ ದಿನಗಳೊಂದಿಗೆ ಶೇ. 93 ಪ್ರಗತಿ ಸಾಧಿಸಲಾಗಿದೆ. **SSA** ಯೋಜನೆಯ **Nali Kali** ತರಬೇತಿಗಾಗಿ 601 ಗುರಿ ನಿಗದಿ ಪಡಿಸಿ ಈ ಬಗ್ಗೆ ರೂ. 8,00,000/– ರಷ್ಟು ಅನುದಾನ ಬಿಡುಗಡೆಯಾಗಿತ್ತು. 596 ಶಿಕ್ಷಕರಿಗಾಗಿ ಹಮ್ಮಿಕೊಳ್ಳಲಾದ ತರಬೇತಿಗಳಿಗಾಗಿ ಒಟ್ಟು ರೂ. 6,00,700/– ಖರ್ಚಾಗಿದೆ. 2980 ಮಾನವ ದಿನಗಳೊಂದಿಗೆ ಶೇ. 99.15 ಪ್ರಗತಿ ಸಾಧಿಸಲಾಗಿದೆ. **SSA** ಯೋಜನೆಯಡಿ **SDMC** ತರಬೇತಿಗಾಗಿ 2977 ಗುರಿ ನಿಗದಿ ಪಡಿಸಿ ಈ ಬಗ್ಗೆ ರೂ. 2,97,700/– ರಷ್ಟು ಅನುದಾನ ಬಿಡುಗಡೆಯಾಗಿತ್ತು. 2977 **SDMC** ಸದಸ್ಯರಿಗಾಗಿ ತರಬೇತಿ ಹಮ್ಮಿಕೊಂಡು ಶೇ. 99.15 ಪ್ರಗತಿ ಸಾಧಿಸಲಾಗಿದೆ.

RMSA ಯೋಜನೆಯಡಿ 9 ನೇ ತರಗತಿ 249 ಗಣಿತ ಮತ್ತು 168 ವಿಜ್ಞಾನ ಸಹ ಶಿಕ್ಷಕರಿಗಾಗಿ 5 ದಿನಗಳ ತರಬೇತಿ ಕುರಿತು ಒಟ್ಟು ರೂ. 5,00,400/– ಅನುದಾನ ಬಿಡುಗಡೆಯಾಗಿದ್ದು, 227 ಗಣಿತ ಮತ್ತು 165 ವಿಜ್ಞಾನ ಸಹ ಶಿಕ್ಷಕರ ತರಬೇತಿಗಾಗಿ ರೂ. 3,87,586/– ಖರ್ಚಾಗಿರುತ್ತದೆ. 1960 ಮಾನವ ದಿನಗಳೊಂದಿಗೆ ಶೇ. 94 ಪ್ರಗತಿ ಸಾಧಿಸಲಾಗಿದೆ.

RMSA ಯೋಜನೆಯಡಿ ಸಾಮಾನ್ಯ ವಿಷಯದ 302 ಸಹ ಶಿಕ್ಷಕರ 5 ದಿನಗಳ ತರಬೇತಿ ಕುರಿತು ಬಿಡುಗಡೆಯಾದ ರೂ. 4,37,900/– ಅನುದಾನದಲ್ಲಿ ರೂ. 4,08,870/– ಖರ್ಚು ಭರಿಸಿ 1620 ಮಾನವ ದಿನಗಳೊಂದಿಗೆ ಶೇ. 107 ಪ್ರಗತಿ ಸಾಧಿಸಲಾಗಿದೆ.

ಆಯ್ದ 96 ಸರ್ಕಾರಿ ಪ್ರಾಥಮಿಕ ಶಾಲೆಯ 96 ಶಿಕ್ಷಕರಿಗೆ ತಲಾ 30 ದಿನಗಳ ಅಗತ್ಯಾಧಾರಿತ ಇಂಗ್ಲೀಷ್ ಭಾಷಾ ಸಬಲೀಕರಣ ತರಬೇತಿಗಾಗಿ ಬಿಡುಗಡೆಯಾದ ರೂ. 16,00,000/– ಅನುದಾನದಲ್ಲಿ ರೂ. 11,53,447/– ಖರ್ಚು ಭರಿಸಿ 2700 ಮಾನವ ದಿನಗಳ ಪ್ರಗತಿ ಸಾಧಿಸಲಾಗಿದೆ.

2017.18 ನೇ ಸಾಲಿನಲ್ಲಿ **TALP** ಯೋಜನೆಯಡಿ ಆಯ್ಕೆಯಾದ 42 ಸರ್ಕಾರಿ ಪ್ರೌಢ ಶಾಲೆಗಳ ಗಣಿತ, ಸಮಾಜ ವಿಜ್ಞಾನ, ಇಂಗ್ಲೀಷ್ ಮತ್ತು ವಿಜ್ಞಾನ ಸಹ ಶಿಕ್ಷರಿಗಾಗಿ ತಲಾ ಹತ್ತು ದಿನಗಳ ಮತ್ತು ಅದೇ ಶಾಲೆಯ ಮುಖ್ಯ ಶಿಕ್ಷಕರಿಗಾಗಿ ತಲಾ ಐದು ದಿನಗಳ **Computer** ಆಧಾರಿತ **It@school** ಸನಿವಾಸ ತರಬೇತಿ ನಡೆಸಲಾಗಿದ್ದು ಒಟ್ಟು ರೂ. 17,83,670/– ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ರೂ. 13,85,564/– ಖರ್ಚಾಗಿದೆ. 1950 ರಷ್ಟು ಮಾನವ ದಿನಗಳೊಂದಿಗೆ ಶೇ. 77.68 ಪ್ರಗತಿ ಸಾಧಿಸಲಾಗಿದೆ.

ಪ್ರಾಥಮಿಕ/ಪ್ರೌಢಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ(ಕೆ.ಡಿ.ಪಿ ವರದಿ ಆಧಾರಿತ) ವರ್ಷ 2017–18

ವರ್ಷ	ಶಾಲೆಗಳು	ಶಾಲೆಗಳ ಸಂಖ್ಯೆ		ಜಿಲ್ಲಾ ಪಂಚಾಯತ್ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ		ಇತರೆ ಶಾಲೆಗಳಲ್ಲಿನ ಮಕ್ಕಳ ಶಾಲೆಗಳ ಸಂಖ್ಯೆ		ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ	
		ಸರ್ಕಾರಿ	ಇತರೆ	ಹುಡುಗರು	ಹುಡುಗಿಯರು	ಹುಡುಗರು	ಹುಡುಗಿಯರು	ಹುಡುಗರು	ಹುಡುಗಿಯರು
1	2	3	4	5	6	7	8	9	10
2017–18	ಪ್ರಾ. ಶಾಲೆಗಳು	803	164	29920	29039	29222	25603	59142	54642
	ಪ್ರೌ. ಶಾಲೆಗಳು	188	110	10197	9663	6362	5679	16559	15342
	ಒಟ್ಟು	991	274	40117	38702	35584	31282	75701	69984
2016–17	ಪ್ರಾ. ಶಾಲೆಗಳು	817	151	29742	29046	26571	23264	56313	52310
	ಪ್ರೌ. ಶಾಲೆಗಳು	186	106	16060	15180	9448	8412	25508	23592
	ಒಟ್ಟು	1003	257	45802	44226	36019	31676	81821	75902

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

1. ಸಂಘಗಳಿಗೆ ಅನುದಾನ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೊಂದಾವಣೆಗೊಂಡ 2017-18ನೇ ಸಾಲಿನಲ್ಲಿ ಸಕ್ರಿಯ ಕಾರ್ಯ ಚಟುವಟಿಕೆಯಲ್ಲಿರುವ ಸಂಘಕ್ಕೆ ಕ್ರೀಡೋಪಕರಣ ಖರೀದಿಗಾಗಿ ಜಿಲ್ಲೆಯ ಒಟ್ಟು 10 ಸಂಘಗಳಿಗೆ ರೂ.10,000/-ದಂತೆ ಒಟ್ಟು ರೂ.1,00,000/- ಅನುದಾನವನ್ನು ನೀಡಲಾಗಿದೆ.

2. ಯುವ ಸಪ್ತಾಹ

ಸ್ವಾಮೀ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಯುವ ಸಪ್ತಾಹ ಕಾರ್ಯಕ್ರಮವನ್ನು ಮೂರು ತಾಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದ್ದು ಈ ಕಾರ್ಯಕ್ರಮದಲ್ಲಿ ಯುವಕ/ಯುವತಿಯರಿಗಾಗಿ ರಸ್ತೆ ಸುರಕ್ಷತೆ, ಮತದಾನ ಜಾಗೃತಿ ಹಾಗೂ ವಿವಿಧ ಸ್ಪರ್ಧೆಗಳನ್ನು ಸಂಘಟಿಸಲಾಗಿದ್ದು ಈ ಕಾರ್ಯಕ್ರಮಕ್ಕೆ ರೂ.40,000/- ವನ್ನು ವೆಚ್ಚಭರಿಸಲಾಗಿದೆ.

3. ದಸರಾ ಕ್ರೀಡಾಕೂಟ

ಇಲಾಖೆಯಡಿ ಪ್ರತಿ ವರ್ಷದಂತೆ ಯುವಕ/ಯುವತಿ ಹಾಗೂ ಶಾಲಾ ಕಾಲೇಜಿನ ಕ್ರೀಡಾಪಟುಗಳಿಗೆ ತಾಲೂಕುಮಟ್ಟ ಹಾಗೂ ಜಿಲ್ಲಾಮಟ್ಟದಲ್ಲಿ ದಸರಾ ಕ್ರೀಡಾಕೂಟವನ್ನು ಏರ್ಪಡಿಸಿದ್ದು ಜಿಲ್ಲಾಮಟ್ಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ದಿನಭತ್ಯೆ ನೀಡಲಾಗಿದೆ. ಈ ಕ್ರೀಡಾಕೂಟಗಳಿಗೆ ಒಟ್ಟು ರೂ.3.90ಲಕ್ಷ ಅನುದಾನ ವೆಚ್ಚ ಭರಿಸಲಾಗಿದೆ.

5. ಯುವಜನಮೇಳ

ಸರಕಾರವು ಯುವಕ/ಯುವತಿ ಸಂಘಗಳ ಕಾರ್ಯಚಟುವಟಿಕೆ ಹಾಗೂ ಯುವಕ/ಯುವತಿಯರ ಸಾಂಸ್ಕೃತಿಕ ಪ್ರತಿಭೆಯನ್ನು ಗುರುತಿಸಲು ಹಾಗೂ ಜಾನಪದ ಕಲೆಗಳ ಉಳಿವಿಗಾಗಿ ವಿವಿಧ ಪ್ರಕಾರಗಳಲ್ಲಿ ಸ್ಪರ್ಧೆಯನ್ನು ನಡೆಸಲು ಯುವಜನಮೇಳ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತಿದ್ದು ಪ್ರಸ್ತುತ ವರ್ಷದಿಂದ ಕೇಂದ್ರ ಕಚೇರಿ ನಿರ್ದೇಶನದಂತೆ ತಾಲೂಕು ಮಟ್ಟದಲ್ಲಿ ನಡೆಸದೇ ನೇರವಾಗಿ ಜಿಲ್ಲಾ ಮಟ್ಟದಲ್ಲಿ ಸಂಘಟಿಸಲಾಗಿದೆ. 2017-18ನೇ ಸಾಲಿನ ಜಿಲ್ಲಾಮಟ್ಟದ ಯುವಜನ ಮೇಳವನ್ನು ಕಾರ್ಯಕ್ರಮವನ್ನು ಸ್ಥಳೀಯ ಯುವಕ ಸಂಘದ ಜಂಟಿ ಆಶ್ರಯದೊಂದಿಗೆ ಸಂಘಟಿಸಲಾಗಿದೆ. ಸದರಿ ಕಯ್ಕ್ರಮಕ್ಕೆ ರೂ.3.90ಲಕ್ಷ ಅನುದಾನ ವೆಚ್ಚ ಭರಿಸಲಾಗಿದ್ದು ಜಿಲ್ಲಾಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧಿಗಳಿಗೆ ಪ್ರಯಾಣಭತ್ಯೆ, ದಿನಭತ್ಯೆ ನೀಡಲಾಗಿದೆ.

6. ಯುವಜನೋತ್ಸವ

ಸರಕಾರವು ಇಲಾಖೆ ಮೂಲಕ ಯುವಜನರ ಸಾಂಸ್ಕೃತಿಕ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಯುವಜನೋತ್ಸವ ಕಾರ್ಯಕ್ರಮವನ್ನು ರೂ.1.25 ಲಕ್ಷ ವೆಚ್ಚದಲ್ಲಿ ಜಿಲ್ಲಾಮಟ್ಟದಲ್ಲಿ ಸಂಘಟಿಸಲಾಗಿದೆ. ಜಿಲ್ಲಾಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ಹಾಗೂ ರಾಜ್ಯಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ಇಲಾಖಾ ವತಿಯಿಂದ ಪ್ರಯಾಣಭತ್ಯೆ, ದಿನಭತ್ಯೆ ನೀಡಲಾಗಿದೆ.

ಪ್ರಸ್ತುತ ವರ್ಷದಲ್ಲಿ 2017-18ನೇ ಸಾಲಿನ ರಾಜ್ಯ ಮಟ್ಟದ ಯುವಜನೋತ್ಸವವನ್ನು ಉಡುಪಿಯಲ್ಲಿ ದಿನಾಂಕ:-30-11-2017 ರಿಂದ 02-12-2017ರವರೆಗೆ ಸಂಘಟಿಸಲಾಗಿದ್ದು ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 1000 ಸ್ಪರ್ಧಿಗಳು ತಮ್ಮ ಸಾಂಸ್ಕೃತಿಕ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಸಂಘಟನೆಗಾಗಿ ಒಟ್ಟು ರೂ.25 ಲಕ್ಷ ಅನುದಾನವನ್ನು ವೆಚ್ಚ ಭರಿಸಲಾಗಿದೆ.

7. ಕ್ರೀಡಾಶಾಲೆ

2017-18ನೇ ಸಾಲಿನಲ್ಲಿ ಕ್ರೀಡಾ ವಸತಿ ನಿಲಯವನ್ನು ಮೇಲ್ದರ್ಜೆಗೇರಿಸಲಾಗಿದ್ದು ಕ್ರೀಡಾಪಟುಗಳ ಸಂಖ್ಯೆಯನ್ನು 70 ರಿಂದ 75ಕ್ಕೆ ಏರಿಸಲಾಗಿದೆ. ಆದ್ದರಿಂದ ಪ್ರಸ್ತುತ ವರ್ಷ 8ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿವರೆಗಿನ 46 ಬಾಲಕರು ಹಾಗೂ 26 ಬಾಲಕಿಯರು ಕ್ರೀಡಾನಿಲಯದಲ್ಲಿ ವಿದ್ಯಾಭ್ಯಾಸದೊಂದಿಗೆ ವಾಲಿಬಾಲ್ ಹಾಗೂ ಅಥ್ಲೆಟಿಕ್ಸ್ ಕ್ರೀಡಾ ತರಬೇತಿ ಪಡೆಯುತ್ತಿದ್ದಾರೆ.

8. ಬೇಸಿಗೆ ತರಬೇತಿ ಶಿಬಿರ

ಪ್ರತಿಭಾವಂತ ಗ್ರಾಮೀಣ ಪ್ರದೇಶದ ಕ್ರೀಡಾ ಆಸಕ್ತರಿಗಾಗಿ ಇಲಾಖಾ ವತಿಯಿಂದ 21 ದಿನಗಳ ಬೇಸಿಗೆ ಕ್ರೀಡಾ ತರಬೇತಿ ಶಿಬಿರವನ್ನು ಜಿಲ್ಲೆಯ ವಿವಿಧ ಕ್ರೀಡಾ ಸಂಸ್ಥೆಗಳಲ್ಲಿ ನಡೆಸಲಾಗಿದೆ. ಮುಖ್ಯವಾಗಿ ಅಥ್ಲೆಟಿಕ್ಸ್, ವಾಲಿಬಾಲ್ ಹಾಗೂ ಬಾಸ್ಕೆಟ್‌ಬಾಲ್ ಮತ್ತು ಶಟಲ್ ಬ್ಯಾಡ್ಮಿಂಟನ್ ತರಬೇತಿಯನ್ನು ನೀಡಲಾಗಿದೆ. ಈ ಶಿಬಿರಕ್ಕಾಗಿ ರೂ.1.09ಲಕ್ಷವನ್ನು ವೆಚ್ಚ ಭರಿಸಲಾಗಿದೆ.

9. ಶಾಲೆಗಳಿಗೆ ಕ್ರೀಡೋಪಕರಣ ಅನುದಾನ

2017-18ನೇ ಸಾಲಿನಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕ್ರೀಡೋಪಕರಣ ಖರೀದಿಗಾಗಿ 30 ಶಾಲೆಗಳಿಗೆ ತಲಾ ರೂ.10,000/-ದಂತೆ ಒಟ್ಟು ರೂ.3.00 ಲಕ್ಷ ಅನುದಾನ ನೀಡಲಾಗಿದೆ.

10. ಕ್ರೀಡಾ ವಿದ್ಯಾರ್ಥಿಗಳಿಗೆ ಕ್ರೀಡಾ ಪ್ರೋತ್ಸಾಹಧನ

ರಾಷ್ಟ್ರಮಟ್ಟದಲ್ಲಿ ಭಾಗವಹಿಸಿ ಪದಕ ಪಡೆದ ಪ್ರತಿಭಾವಂತ 40 ಕ್ರೀಡಾಪಟುಗಳಿಗೆ ಕ್ರೀಡಾ ಪ್ರೋತ್ಸಾಹಧನ ನೀಡಲಾಗಿದ್ದು ರಾಷ್ಟ್ರ ಮಟ್ಟದಲ್ಲಿ ದಾಖಲೆಯೊಂದಿಗೆ ಪ್ರಥಮ ಸ್ಥಾನ ಪಡೆದ ಓರ್ವ ಕ್ರೀಡಾಪಟುವಿಗೆ ರೂ.10,000/-, ವೈಯಕ್ತಿಕ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುವಿಗೆ ರೂ.5000/-ದಂತೆ ಒಟ್ಟು ಮೂರು(03), ಗುಂಪು ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಹದಿನೈದು(15) ಕ್ರೀಡಾಪಟುಗಳಿಗೆ ರೂ.4000/- ಹಾಗೂ ತೃತಿಯ ಸ್ಥಾನ ಗಳಿಸಿದ ಇಬ್ಬರು(02) ಕ್ರೀಡಾಪಟುಗಳಿಗೆ ತಲಾ ರೂ.3000/- ಹಾಗೂ ರಾಜ್ಯ ಮಟ್ಟದಲ್ಲಿ ಸ್ಥಾನ ಪಡೆದ ಹತ್ತೊಂಭತ್ತು(19) ಕ್ರೀಡಾಪಟುಗಳಿಗೆ ತಲಾ ರೂ.2000/-ದಂತೆ ಒಟ್ಟು ರೂ.1.29ಲಕ್ಷ/-ವನ್ನು ಕ್ರೀಡಾಪ್ರೋತ್ಸಾಹಧನ ನೀಡಲಾಗಿದೆ.

11. ಜಿಲ್ಲೆಯಲ್ಲಿರುವ ಕ್ರೀಡಾಂಗಣ

ಕುಂದಾಪುರಲ್ಲಿ 5.62 ಎಕ್ರೆ ಜಮೀನಿನಲ್ಲಿ ತಾಲೂಕು ಕ್ರಿಡಾಂಗಣ ಹಾಗೂ ಕಾರ್ಕಳದಲ್ಲಿ 10.38 ಎಕ್ರೆ ಜಮೀನು ಒಳಗೊಂಡು ತಾಲೂಕು ಕ್ರೀಡಾಂಗಣ ನಿರ್ಮಾಣವಾಗಿದ್ದು ಉಡುಪಿಯಲ್ಲಿ 8 ಎಕ್ರೆ ಜಮೀನಿನಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣವಾಗಿದೆ. ಹೆಜಮಾಡಿ ಕ್ರೀಡಾಂಗಣದ ನಿವೇಶನವು ಇಲಾಖೆಯ ಹೆಸರಿಗೆ ಹಸ್ತಾಂತರಗೊಂಡಿದ್ದು ಕ್ರೀಡಂಗಣ ಅಭಿವೃದ್ಧಿಗಾಗಿ ರೂ.1ಕೋಟಿ ಅನುದನ ಬಿಡುಗಡೆ ಆಗಿದೆ. ಪ್ರಸ್ತುತ ವರ್ಷ ಬ್ರಹ್ಮಾವರದ ಗಾಂಧಿ ಮೈದಾನ ನಿವೇಶನವು ಇಲಾಖೆಗೆ ಹಸ್ತಾಂತರಗೊಂಡಿದ್ದು ಸದರಿ ಜಾಗದಲ್ಲಿ ಕ್ರಿಕೆಟ್ ಕ್ರೀಡಾಂಗಣ ಅಬಿವೃದ್ಧಿಗಾಗಿ ಕೇಂದ್ರ ಕಚೇರಿಯಿಂದ ರೂ.75ಲಕ್ಷ ಅನುದಾನ ಬಿಡುಗಡೆಯಾಗಿ ಕಾಮಗಾರಿ ಪ್ರಗತಿಯಲ್ಲಿದೆ.

12. ಒಳಾಂಗಣ ಕ್ರೀಡಾಂಗಣ

ಜಿಲ್ಲಾ ಕ್ರೀಡಾಂಗಣದ ಎದುರುಗಡೆ ಜಿಲ್ಲಾ ಆಸ್ಪತ್ರೆ ಪಕ್ಕದಲ್ಲಿ ಸುಮಾರು 1.32 ಎಕ್ರೆ ಜಮೀನಿನಲ್ಲಿ ರೂ.2.15 ಕೋಟಿ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಗೊಂಡಿದೆ. ಒಳಾಂಗಣ ಕ್ರೀಡಾಂಗಣದಲ್ಲಿ ನವೀಕೃತ ಟಿ.ಟಿ. ಅಂಕಣ,ಶಟಲ್ ಅಂಕಣ ಹಾಗೂ ಸುಸಜ್ಜಿತ ಜಿಮ್ ವ್ಯವಸ್ಥೆ ಒಳಗೊಂಡಿರುತ್ತದೆ.

13. ಈಜುಕೊಳ

ಒಳಾಂಗಣ ಕ್ರೀಡಾಂಗಣದ ಪಕ್ಕದಲ್ಲಿ ರೂ.2 ಕೋಟಿ ಅಂದಾಜು ವೆಚ್ಚದಲ್ಲಿ ಸುಸಜ್ಜಿತ ಈಜುಕೊಳ ನಿರ್ಮಾಣಗೊಂಡಿದ್ದು ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿದೆ. 2016-17ನೇ ಸಾಲಿನವರೆಗೆ ಜಿಲ್ಲಾ ಈಜುಕೊಳವನ್ನು ಹೊರಗುತ್ತಿಗೆ ನೀಡಲಾಗಿದ್ದು 2017-18ನೇ ಸಾಲಿನಿಂದ ಇಲಾಖಾ ವತಿಯಿಂದಲೇ ನಿರ್ವಹಿಸಲಾಗುತ್ತಿದೆ.

14. ಸಿಂಥೆಟಿಕ್ ಟೆನ್ನಿಸ್ ಅಂಕಣ

ಈಜುಕೊಳದ ಪಕ್ಕದಲ್ಲಿ ರೂ.3.50ಕೋಟಿ ಅಂದಾಜು ವೆಚ್ಚದಲ್ಲಿ ಸಿಂಥೆಟಿಕ್ ಲಾನ್ ಟೆನ್ನಿಸ್ ಅಂಕಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ರೂ.350ಲಕ್ಷ ಅನುದಾನ ಮಂಜೂರಾಗಿದೆ. ಈ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದವರ ಮೂಲಕ ನಿರ್ವಹಿಸಲಾಗುತ್ತಿದ್ದು ಕಾಮಗಾರಿ ಮುಕ್ತಾಯ ಹಂತದಲ್ಲಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಉಡುಪಿ

ಜಿಲ್ಲೆಯಲ್ಲಿ 2017–18ನೇ ಸಾಲಿನಲ್ಲಿ 14,70,029 ಹೊರರೋಗಿಗಳಿಗೆ ಹಾಗೂ 47,931 ಒಳರೋಗಿಗಳನ್ನು ದಾಖಲಿಸಿ ವಿವಿಧ ಖಾಯಿಲೆಗಳಿಗೆ ಔಷಧೋಪಚಾರವನ್ನು ನೀಡಲಾಗಿದೆ.

ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮ: ಜಿಲ್ಲೆಯಲ್ಲಿ ಒಟ್ಟು 23 ಹೊಸ ರೋಗಿಗಳನ್ನು ಗುರುತಿಸಲಾಗಿದ್ದು, ಔಷಧೋಪಚಾರ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ. ಒಟ್ಟು 23 ಹೊಸ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಎಲ್ಲರಿಗೂ ಪರಿಣಾಮಕಾರಿಯಾದ ಎಂ.ಡಿ.ಟಿ ಚಿಕಿತ್ಸೆಯನ್ನು ನೀಡಲಾಗಿದೆ.

ಚುಚ್ಚುಮದ್ದಿನ ಕಾರ್ಯಕ್ರಮ: ಚುಚ್ಚುಮದ್ದಿನ ಕಾರ್ಯಕ್ರಮದಲ್ಲಿ ಈ ಕೆಳಗೆ ಕಾಣಿಸಿದಂತೆ ಪ್ರಗತಿಯನ್ನು ಸಾಧಿಸಲಾಗಿದೆ.

ಕ್ರ.ಸಂ	ಚುಚ್ಚುಮದ್ದು ಕಾರ್ಯಕ್ರಮ ವಿವರ	ಗುರಿ	ಸಾಧನೆ	ಶೇಕಡಾ
1	ಡಿ.ಪಿ.ಟಿ+ಪೆಂಟಾವಲೆಂಟ್	14434	14558	101%
2	ಪೋಲಿಯೋ	14434	14558	101%
3	ಬಿ.ಸಿ.ಜಿ	14434	14618	102%
4	ಧಡಾರ	14434	15163	105%
5	ಡಿ.ಪಿ.ಟಿ/ಪೋಲಿಯೋ ವರ್ಧಕ	14434	14566	101%
6	ಹೆಪಟೈಟೀಸ್ 'ಬಿ'	14434	13531	94%
7	ಟಿ.ಟಿ [ಗರ್ಭಿಣಿ]	16500	14848	90%

ತಾಯಿ ಮಕ್ಕಳ ಆರೋಗ್ಯ ಕಾರ್ಯಕ್ರಮ:

ಕ್ರ.ಸಂ	ವಿವರ	ಗುರಿ	ಸಾಧನೆ	ಶೇಕಡಾವಾರು
1	ಗರ್ಭಿಣಿ ನೋಂದಣಿ	16500	15272	93%
2	ಹೆರಿಗೆ ನಿರ್ವಹಿಸಿದ್ದು	14850	14714	99%
3	ದೊಡ್ಡ ಕಬ್ಬಿಣ ಸತ್ವ ಮಾತ್ರೆ ವಿತರಣೆ	16500	16644	101%
4	ದಾಯಿ ತರಬೇತಿ	–	–	–
5	ವಿಟಾಮಿನ್ 'ಎ' ಅನ್ನಾಂಗ ನೀಡಿದ್ದು [1 ರಿಂದ 5ವರ್ಷ]	66838	62392	93%

ರಾಷ್ಟ್ರೀಯ ಮಲೇರಿಯಾ ನಿಮೂಲನಾ ಕಾರ್ಯಕ್ರಮ: ರಾಷ್ಟ್ರೀಯ ಮಲೇರಿಯಾ ಕಾರ್ಯಕ್ರಮದಡಿಯಲ್ಲಿ 2017–18ನೇ ಸಾಲಿನಲ್ಲಿ 1,96,499 ರಕ್ತಲೇಪನಗಳನ್ನು ಸೂಕ್ತ ಪ್ರಯೋಗಶಾಲಾ ತಂತ್ರಜ್ಞರಿಂದ ಪರೀಕ್ಷಿಸಿ 513 ಮಲೇರಿಯಾ ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಈ ಪೈಕಿ 92 ಪಿ.ಎಫ್ ಪ್ರಕರಣಗಳೆಂದು ಗುರುತಿಸಲಾಗಿದ್ದು, ಸೂಕ್ತ ಚಿಕಿತ್ಸೆ ನೀಡಿ ರೋಗದಿಂದ ಮುಕ್ತಗೊಳಿಸಲಾಗಿದೆ.

ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ: ಈ ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತ 7795 ಗುರಿಯನ್ನು ನೀಡಲಾಗಿದ್ದು 7828 ಜನರಿಗೆ ಶೇಕಡಾ 101% ಅಂಧತ್ವ ನಿವರಣಾ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ. ಅನುದಾನದಲ್ಲಿ ರೂ. 48,66,873/–ಹಣ ಬಂದಿದ್ದು, ರೂ. 33,24,678/– 68% ಖರ್ಚಾಗಿದೆ.

ರಾಷ್ಟ್ರೀಯ ಕ್ಷಯರೋಗ ನಿವಾರಣಾ ಕಾರ್ಯಕ್ರಮ: ಈ ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತ 13,175 ರೋಗಿಗಳ ಕಫ ಪರೀಕ್ಷೆ ನಡೆಸಿ 670 ಕ್ಷಯರೋಗ ಪ್ರಕರಣಗಳನ್ನು ಪತ್ತೆ ಹಚ್ಚಿ, 88% ಸಾಧನೆ ಆಗಿದೆ. ಅವರೆಲ್ಲರಿಗೂ ಸೂಕ್ತ ಔಷಧೋಪಚಾರ ನೀಡಲಾಗಿದೆ. ಹಾಗೂ ವಿವಿಧ ಪರೀಕ್ಷೆಯಿಂದ ಪತ್ತೆ ಹಚ್ಚಲ್ಪಟ್ಟ ಕ್ಷಯರೋಗ ಪ್ರಕರಣಗಳ ಸಂಖ್ಯೆ 897 ಆಗಿರುತ್ತದೆ. ಇವರೆಲ್ಲರಿಗೂ ಸೂಕ್ತ ಚಿಕಿತ್ಸೆ ನೀಡಲಾಗಿದೆ.

ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮ: ರಾಷ್ಟ್ರದೆಲ್ಲೆಡೆಯಂತೆ ಈ ಜಿಲ್ಲೆಯಲ್ಲಿಯೂ ಜನಸಂಖ್ಯಾ ನಿಯಂತ್ರಣದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಪ್ರಗತಿಯನ್ನು ಈ ಕೆಳಗಿನಂತೆ ಸಾಧಿಸಲಾಗಿದೆ.

ಕ್ರ.ಸಂ	ವಿವರ	ಗುರಿ	ಸಾಧನೆ	ಶೇಕಡಾವಾರು
1	ಸಂತಾನಹರಣ ಶಸ್ತ್ರಚಿಕಿತ್ಸೆ (ಪುರುಷ)	144	20	14%
2	ಸಂತಾನಹರಣ ಶಸ್ತ್ರಚಿಕಿತ್ಸೆ (ಮಹಿಳೆ)	7058	5137	73%
3	ವಂಕಿಧಾರಣೆ	5456	4969	91%
4	ನಿರೋಧ್ ವಿತರಣೆ	8500	6623	78%
5	ನುಂಗುವ ಮಾತ್ರೆ	5500	4071	74%

ಶಾಲಾ ಆರೋಗ್ಯ ಕಾರ್ಯಕ್ರಮ: ಈ ಕಾರ್ಯಕ್ರಮದಲ್ಲಿ ಜಿಲ್ಲೆಯಾದ್ಯಂತ ಒಟ್ಟು 1063 ಶಾಲೆಗಳಲ್ಲಿನ 110286 ವಿದ್ಯಾರ್ಥಿಗಳ ವೈದ್ಯಕೀಯ ತಪಾಸಣೆ ಮಾಡಲಾಗಿದ್ದು, ಕೊಟ್ಟಿರುವ ಚುಚ್ಚುಮದ್ದುಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ	ವಿವರ	ಚುಚ್ಚುಮದ್ದು	ಗುರಿ	ಸಾಧನೆ	ಶೇಕಡಾವಾರು
1	5 ರಿಂದ 6 ವರ್ಷದವರೆಗೆ	ಡಿ.ಟಿ	15814	13820	87%
2	10 ವರ್ಷದ ಮಕ್ಕಳಿಗೆ	ಟಿ.ಟಿ	15248	14699	96%
3	16 ವರ್ಷದ ಮಕ್ಕಳಿಗೆ	ಟಿ.ಟಿ[2ನೇ ವರಸೆ]	15384	15533	101%

ಸರ್ವೇಲೆನ್ಸ್ ಕಾರ್ಯಕ್ರಮ: ಈ ಜಿಲ್ಲೆಯಲ್ಲಿ ಜನವರಿ 2017 ರಿಂದ ಡಿಸೆಂಬರ್ 2017 ಸಾಲಿನಲ್ಲಿ ಸಾಂಕ್ರಾಮಿಕ ರೋಗಗಳ ಸಮಗ್ರ ಸಮೀಕ್ಷೆ ರೋಗಗಳು ಹರಡದಂತೆ ತಡೆಗಟ್ಟುವ ಮುಂಜಾಗೃತಾ ಕ್ರಮ ಮಾಹಿತಿ ನೀಡುವುದೂ ಅಲ್ಲದೇ ಜಿಲ್ಲೆಯ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಯೋಗಶಾಲೆಗಳಲ್ಲಿ ನೀರಿನ ಸೂಕ್ಷ್ಮಾಣುಜೀವಿ ಪರೀಕ್ಷೆಯನ್ನೂ ನಡೆಸುವ ವ್ಯವಸ್ಥೆಯನ್ನು ಜಿಲ್ಲಾ ಸರ್ವೇಕ್ಷಣಾ ಘಟಕದ ಪ್ರಯೋಗಾಲಯದಲ್ಲೂ ಕೈಗೊಂಡು ಎಲ್ಲಾ ಹಂತಗಳಲ್ಲಿ ವಿಶ್ಲೇಷಣೆ ನಡೆಸಲಾಗುವುದು ಮತ್ತು ಪ್ರಯೋಗಾಲಯದಲ್ಲಿ ವಿಷಮಶೀತ ಜ್ವರ ಮುಂತಾದ ಸಾಂಕ್ರಾಮಿಕ ರೋಗಗಳ ಪರೀಕ್ಷೆ, ರೋಗ ಹರಡುವ ಸೂಕ್ಷ್ಮಾಣುಜೀವಿಗಳ ಕಲ್ಚರ್ ಪರೀಕ್ಷೆಯನ್ನೂ ಸಹ ನಡೆಸಿ ನಿಯಂತ್ರಣ ಕ್ರಮವನ್ನು ಕೈಗೊಳ್ಳಲಾಗುವುದು.

ವರದಿ ವರ್ಷದಲ್ಲಿ ನೀರಿನಿಂದ ಹರಡುವ ರೋಗಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ	ರೋಗದ ಹೆಸರು	ಪ್ರಕರಣ	ಮರಣ ಸಂಖ್ಯೆ
1	ಕಾಲರಾ	0	0
2	ಕರಳುಬೇನೆ	631	0
3	ಇಲಿಜ್ವರ	246	0
4	ವಿಷಮಶೀತ ಜ್ವರ	307	0
5	ಕಾಮಾಲೆ	65	0

ವರದಿ ವರ್ಷದಲ್ಲಿ ಪರೀಕ್ಷಿಸಿದ ನೀರಿನ ಮಾದರಿಯ ವಿವರ ಈ ಕೆಳಗಿನಂತಿದೆ.

ಒಟ್ಟು ಪರೀಕ್ಷಿಸಿದ ನೀರಿನ ಮಾದರಿ	ಉಪಯೊಗಿಸಲು ಯೋಗ್ಯವಲ್ಲದ ನೀರಿನ ಮಾದರಿ ಸಂಖ್ಯೆ
11,596	4,634

ಅಯೋಡಿನ್ ವರದಿ ವಿವರ: ಈ ಸಾಲಿನಲ್ಲಿ ಪ್ರಾಥಮಿಕ/ಸಮುದಾಯ ಆರೋಗ್ಯ ಕೇಂದ್ರ ಹಿರಿಯ/ಕಿರಿಯ ಆರೋಗ್ಯ ಮೇಲ್ವಿಚಾರಕರ ಸಂಗಡ ಆಶಾ ಕಾರ್ಯಕರ್ತೆಯರು ಗಳಗಂಡ ರೋಗ ತಡೆಗಟ್ಟುವ ಮುಂಜಾಗೃತಾ ಕ್ರಮವಾಗಿ ಉಪ್ಪಿನ ಮಾದರಿಯನ್ನು ಪರೀಕ್ಷಿಸಲು ಪರೀಕ್ಷಾ ಕಿಟ್‌ಗಳ ಸರಬರಾಜು ಇರುವುದಿಲ್ಲ. ಸಾರ್ವಜನಿಕರಿಗೆ ಗಳಗಂಡ ರೋಗ ತಡೆಗಟ್ಟಲು ಅಯೋಡಿನ್‌ಯುಕ್ತ ಉಪ್ಪನ್ನೇ ಬಳಸುವಂತೆ ಆರೋಗ್ಯ ಶಿಕ್ಷಣವನ್ನು ನೀಡಲಾಗಿದೆ. ಈ ವರ್ಷ ಒಟ್ಟು 42 ಹೊಸ ಗಳಗಂಡ ರೋಗಿಗಳ ದಾಖಲಾತಿಯಾಗಿರುತ್ತದೆ.

ಮಡಿಲು ಯೋಜನೆ: ಈ ಯೋಜನೆಯಡಿಯಲ್ಲಿ 2017 ಎಪ್ರಿಲ್ ನಿಂದ 2018 ಮಾರ್ಚ್ ವರೆಗೆ ಒಟ್ಟು 451 ಬಾಣಂತಿಯರಿಗೆ ಮಡಿಲು ಕಿಟ್‌ಗಳನ್ನು ನೀಡಲಾಗಿದೆ.

ಪ್ರಸೂತಿ ಆರೈಕೆ ಮತ್ತು ತಾಯಿ ಭಾಗ್ಯ ಪ್ಲಸ್: 2017–18ನೇ ಸಾಲಿನಲ್ಲಿ ಈ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಅನುದಾನ ರೂ. 40,44,000/– ಬಿಡುಗಡೆಯಾಗಿದ್ದು, ಅದರಲ್ಲಿ ರೂ. 34,41,800/– ಖರ್ಚಾಗಿದೆ.

ಜನನಿ ಸುರಕ್ಷಾ ಯೋಜನೆ: JSY ಕಾರ್ಯಕ್ರಮದಡಿಯಲ್ಲಿ ಒಟ್ಟು 5,985 ಬಾಣಂತಿಯರು ಫಲಾನುಭವಿಗಳಿಗೆ ರೂ. 52,44,500/– ಖರ್ಚಾಗಿದೆ.

ಜನನಿ ಶಿಶು ಸುರಕ್ಷಾ ಯೋಜನೆ: JSSK ಕಾರ್ಯಕ್ರಮದಡಿಯಲ್ಲಿ ಒಟ್ಟು 4,113 ಫಲಾನುಭವಿಗಳಿಗೆ ರೂ. 83,59,041/– ಎಪ್ರಿಲ್ 2016 ರಿಂದ ಮಾರ್ಚ್ 2017 ರವರೆಗೆ ವೆಚ್ಚ ಮಾಡಲಾಗಿದೆ.

ಆರೋಗ್ಯ ಕವಚ ಯೋಜನೆ: 108 ಆರೋಗ್ಯ ಕವಚ ಯೋಜನೆಯಡಿಯಲ್ಲಿ ಜಿಲ್ಲೆಗೆ 18 ಅಂಬ್ಯಲೆನ್ಸ್‌ಗಳು ಮಂಜೂರಾಗಿ ಕಾರ್ಯನಿರತವಾಗಿದೆ. ಈ ವರ್ಷದಲ್ಲಿ 2017 ಎಪ್ರಿಲ್ ನಿಂದ 2018 ಮಾರ್ಚ್‌ವರೆಗೆ ಒಟ್ಟು 17,742 ತುರ್ತು ಕರೆಗಳು ಸ್ವೀಕಾರವಾಗಿದ್ದು, 17,618 ಪ್ರಕರಣಗಳಿಗೆ ತುರ್ತು ಸೇವೆಯನ್ನು ಒದಗಿಸಲಾಗಿದೆ.

ಆಶಾ ಕಾರ್ಯಕರ್ತೆ: ಜಿಲ್ಲೆಯಲ್ಲಿ 168 ಆಶಾ ಕಾರ್ಯಕರ್ತೆಯರನ್ನು ಗುರುತಿಸಿದ್ದು, ಈಗಾಗಲೇ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಮೂಲ ತರಬೇತಿಯನ್ನು ನೀಡಲಾಗಿದ್ದು, ಆಯಾಯ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ 945 ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಚಾರಿ ಆರೋಗ್ಯ ಘಟಕ(ಗುಡ್ಡಗಾಡು ಮತ್ತು ಬುಡಕಟ್ಟು ಜನಾಂಗ) ಉಡುಪಿ: 2017–18 ನೇ ಸಾಲಿನಲ್ಲಿ ಕಾಲನಿಗಳಿಗೆ ಭೇಟಿ ನೀಡಿ, ಒಟ್ಟು 10,806 ರೋಗಿಗಳಿಗೆ ಹೊರರೋಗಿ ಚಿಕಿತ್ಸೆ ನೀಡಲಾಗಿತ್ತು. ಹೆಚ್ಚುವರಿ ಸೇವೆಗೆ ಜಿಲ್ಲಾ ಆಸ್ಪತ್ರೆಗಳಿಗೆ ರೆಫರೆನ್ಸ್ ಸ್ಲಿಪ್ ನೀಡಲಾಯಿತು. ಆಯ್ದ ಕಾಲನಿಗಳಲ್ಲಿ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಸಕ್ರೀಯ ಭಾಗವಹಿಸಿ ಆರೋಗ್ಯದ ಮಾಹಿತಿ ನೀಡಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆ:

ಉಡುಪಿ ಜಿಲ್ಲೆಯಲ್ಲಿ ಉಡುಪಿ, ಕುಂದಾಪುರ & ಕಾರ್ಕಳ ಗಳಂತೆ ಒಟ್ಟು 03 ತಾಲ್ಲೂಕುಗಳು ಒಳಗೊಂಡಿದ್ದು, ದಿನಾಂಕ: 17.08.1998 ರಿಂದ ಪರಿಶಿಷ್ಟ ಜಾತಿಯವರ ಶ್ರೇಯೋಭಿವೃದ್ಧಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖಾ ಕಛೇರಿ ಉಡುಪಿಯಲ್ಲಿ ಪ್ರಾರಂಭಿಸಲಾಯಿತು.

ಜಿಲ್ಲೆಯಲ್ಲಿ ಒಟ್ಟು 3,582 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, 2011ನೇ ಜನಗಣತಿ ಪ್ರಕಾರ 11,77,361 ಜನಸಂಖ್ಯೆಯನ್ನು ಹೊಂದಿದ್ದು. ಇದರಲ್ಲಿ 75,429 ಪರಿಶಿಷ್ಟ ಜಾತಿಯವರು (ಗಂಡಸರು 36,988 & ಹೆಂಗಸರು 38,441) ವಾಸಿಸುತ್ತಿದ್ದಾರೆ.

ಸಮಾಜ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿಯವರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಶ್ರೇಯೋಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಕಾರ್ಯೋನ್ಮುಖವಾಗಿದೆ. ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2017-18ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಕೈಗೊಂಡ ಕಾರ್ಯಕ್ರಮಗಳ ವಿವರ

1. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:

ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗಿನ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ/ಇತರೆ ವರ್ಗದವರ ಮಕ್ಕಳಿಗೆ ಪ್ರತ್ಯೇಕವಾಗಿ ಬಾಲಕ ಮತ್ತು ಬಾಲಕಿಯರಿಗಾಗಿ ಒಟ್ಟು 15 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿವೆ. ಅವುಗಳಲ್ಲಿ 9 ಬಾಲಕರ ಹಾಗೂ 6 ಬಾಲಕಿಯರ ವಿದ್ಯಾರ್ಥಿ ನಿಲಯಗಳು ಇರುತ್ತವೆ. ಈ ಎಲ್ಲಾ ವಿದ್ಯಾರ್ಥಿ ನಿಲಯಗಳು ತಾಲ್ಲೂಕು ಪಂಚಾಯತ್ ಯೋಜನೇತರ ಕಾರ್ಯಕ್ರಮದಲ್ಲಿ ನಿರ್ವಹಿಸಲಾಗುತ್ತಿದೆ.

2017-18ನೇ ಸಾಲಿನಲ್ಲಿ ಒಟ್ಟು ರೂ. 269.70 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟು 799 ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳು ಈ ನಿಲಯದ ಸೌಲಭ್ಯ ಪಡೆದಿದ್ದಾರೆ. ನಿಲಯಾರ್ಥಿಗಳಿಗೆ ಉಚಿತವಾಗಿ ಆಹಾರ, ಸಮವಸ್ತ್ರ, ಸೋಪು, ಎಣ್ಣೆ, ಪಠ್ಯಪುಸ್ತಕ, ಹಾಸಿಗೆ ಹೊದಿಕೆ ನೀಡಲಾಗುತ್ತಿದ್ದು, ಪ್ರತಿ ವಿದ್ಯಾರ್ಥಿ ನಿಲಯಗಳಲ್ಲಿ ಅಲ್ಪಾವಧಿ ಭೋಧಕರಿಂದ ಭೋಧನೆಯನ್ನು ಸಹ ನೀಡಲಾಗುತ್ತಿದೆ. 2018-19ನೇ ಸಾಲಿನ ಏಪ್ರಿಲ್/ಮೇ ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು 76.74% ಫಲಿತಾಂಶ ಸಾಧಿಸಲಾಗಿದೆ.

2. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ:

2017-18ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಒಟ್ಟು 7 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು, ಅವುಗಳಲ್ಲಿ 3 ಬಾಲಕರ ವಿದ್ಯಾರ್ಥಿ ನಿಲಯಗಳು ಹಾಗೂ 4 ಬಾಲಕೀಯರ ವಿದ್ಯಾರ್ಥಿ ನಿಲಯಗಳು ಇರುತ್ತವೆ.

2017-18ನೇ ಸಾಲಿನಲ್ಲಿ ಒಟ್ಟು ರೂ. 126.51 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಒಟ್ಟು 551 ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳು ಈ ನಿಲಯದ ಸೌಲಭ್ಯ ಪಡೆದಿದ್ದಾರೆ. ನಿಲಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷಗಳಿಗೆ ಮೀರಿರಬಾರದು. 2018-19ನೇ ಸಾಲಿನ ಏಪ್ರಿಲ್/ಮೇ ಮಾಹೆಯಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು 82.98% ಫಲಿತಾಂಶ ಸಾಧಿಸಲಾಗಿದೆ.

3. **<u>ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:</u>**

1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ ವಿದಾರ್ಥಿಗಳಿಗೆ ಈ ಕೆಳಕಂಡ ದರಗಳಂತೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (ಒಂದು ಬಾರಿ)		
ತರಗತಿ	**ಬಾಲಕರು**	**ಬಾಲಕಿಯರು**
1 ರಿಂದ 5	1000	1100
6 ರಿಂದ 7	1150	1250
8ನೇ ತರಗತಿ	1250	1350
9 & 10 ನೇ ತರಗತಿ	2250	2250

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಪಡೆಯಲು 1 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ. 6.00 ಲಕ್ಷಗಳಿಗೆ ಹಾಗೂ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ. 2.00 ಲಕ್ಷಗಳಿಗೆ ಮೀರಿರಬಾರದು.
2017–18ನೇ ಸಾಲಿನಲ್ಲಿ ರೂ. 102.45 ಲಕ್ಷಗಳ ಅನುದಾನದಲ್ಲಿ ಒಟ್ಟು 4909 ಪ.ಜಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದೆ.

4. **<u>ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:</u>**

ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪೋಷಕರ ವಾರ್ಷಿಕ ವರಮಾನ ರೂ. 2.50 ಲಕ್ಷಗಳ ಮಿತಿಯೊಳಗಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಈ ಕೆಳಕಂಡ ದರಗಳಂತೆ ವಿದ್ಯಾರ್ಥಿ ವೇತನವನ್ನು ಹಾಗೂ ಸರ್ಕಾರವು ನಿಗಧಿಪಡಿಸಿದ ಶುಲ್ಕಗಳನ್ನು ಮಂಜೂರು ಮಾಡಲಾಗುತ್ತಿದೆ. 2017–18ನೇ ಸಾಲಿನಲ್ಲಿ ರೂ. 305.67 ಲಕ್ಷಗಳ ಅನುದಾನದಲ್ಲಿ ಒಟ್ಟು 2380 ಪ.ಜಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ		
ವರ್ಗ	**ಡೇ ಸ್ಕಾಲರ್ (ಪ್ರತಿ ತಿಂಗಳಿಗೆ)**	**ಹಾಸ್ಟೇಲರ್ (ಪ್ರತಿ ತಿಂಗಳಿಗೆ)**
I (ವೈದ್ಯಕೀಯ & ತಾಂತ್ರಿಕ ಪದವಿ)	550	1200
II (ವೈದ್ಯಕೀಯ, ತಾಂತ್ರಿಕ ಸ್ನಾತಕೋತ್ತರ ಪದವಿ, ಎಂಫಿಲ್, ಪಿ.ಎಚ್.ಡಿ.)	530	820
III (I & II) ರಲ್ಲಿ ಸೇರದಿರುವ ಎಲ್ಲಾ ಪದವಿ ಕೋರ್ಸ್‌ಗಳು)	300	570
IV (ಉಳಿದ ಎಲ್ಲಾ ಪದವಿ ಕೋರ್ಸ್‌ಗಳು)	230	380

5. **<u>ಬಹುಮಾನ ಹಣ ಮಂಜೂರಾತಿ:</u>**

ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ದ್ವಿತೀಯ ಪಿ.ಯು.ಸಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ಇಂಜಿನಿಯರಿಂಗ್/ವೈದ್ಯಕೀಯ ಕೋರ್ಸುಗಳ ಅಂತಿಮ ತರಗತಿಗಳಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಈ ಕೆಳಕಂಡಂತೆ ಬಹುಮಾನ ಹಣ ಮಂಜೂರು ಮಾಡಲಾಗುತ್ತಿದೆ. 2017–18ನೇ ಸಾಲಿನಲ್ಲಿ ರೂ. 85.00 ಲಕ್ಷಗಳ ಅನುದಾನದಲ್ಲಿ ಒಟ್ಟು 386 ಪ.ಜಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದೆ.

ಕೋರ್ಸ್	**ಬಹುಮಾನ ಹಣದ ಮೊತ್ತ**
ದ್ವಿತೀಯ ಪಿ.ಯು.ಸಿ.	ರೂ. 20,000/–
ಅಂತಿಮ ಪದವಿ ತರಗತಿ	ರೂ. 25,000/–
ಎಲ್ಲಾ ತರಹದ ಸ್ನಾತಕೋತ್ತರ ಪದವಿ	ರೂ. 30,000/–
ವೃತ್ತಿ ಶಿಕ್ಷಣ (ಉದಾ: ಬಿ.ಇ. ಮೆಡಿಕಲ್)	ರೂ. 35,000/–

6. **<u>ಹೆಚ್ಚುವರಿ ಭೋಜನಾ ವೆಚ್ಚ (ಇ.ಬಿ.ಎಲ್):</u>**

ರಾಜ್ಯ ಸರ್ಕಾರವು ನಿಲಯಾರ್ಥಿಗಳಿಗೆ ಆಹಾರ ವೆಚ್ಚಕ್ಕಾಗಿ ರೂ. 1500/–ಗಳನ್ನು ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿದೆ. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಹಾಸ್ಟೇಲರ್ ದರದಲ್ಲಿ ಮಂಜೂರು ಮಾಡಿ ವ್ಯತ್ಯಾಸದ ಅನುದಾನವನ್ನು ಭರಿಸಲು ಹೆಚ್ಚುವರಿ ಭೋಜನಾ ಮತ್ತು ವಸತಿ

ವೆಚ್ಚವನ್ನು ಮಂಜೂರು ಮಾಡಲಾಗುತ್ತಿದೆ. 2017–18ನೇ ಸಾಲಿನಲ್ಲಿ ರೂ. 28.82 ಲಕ್ಷಗಳ ಅನುದಾನದಲ್ಲಿ ಒಟ್ಟು 551 ಪ.ಜಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದೆ.

ಗ್ರೂಪ್	EBL Charges ಪ್ರತಿ ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ
I	ರೂ. 300/–
II	ರೂ. 680/–
III	ರೂ. 930/–
IV	ರೂ. 1120/–

7. **<u>ವಿಶೇಷ ಘಟಕ ಯೋಜನೆ:</u>**

2017–18ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಒಟ್ಟು ರೂ. 89.06 ಲಕ್ಷಗಳ ಅನುದಾನ ವೆಚ್ಚವಾಗಿರುತ್ತದೆ. ಇದರಲ್ಲಿ ರೂ. 62.00 ಲಕ್ಷಗಳಲ್ಲಿ 70 ಕಾಮಗಾರಿಗಳು ಹಾಗೂ ರೂ. 27.06 ಲಕ್ಷಗಳಲ್ಲಿ 607 ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ವಿವಿಧ ಇಲಾಖೆಗಳ ಮೂಲಕ ಸವಲತ್ತುಗಳನ್ನು ನೀಡಲಾಗಿದೆ.

8. **<u>ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಸೇರ್ಪಡೆ ಮಾರ್ಪಾಡು:</u>**

ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಸೇರ್ಪಡೆ ಮಾರ್ಪಾಡು ಕಾಮಗಾರಿಗಾಗಿ 2017–18ನೇ ಸಾಲಿನಲ್ಲಿ ಒಟ್ಟು 6 ವಿದ್ಯಾರ್ಥಿ ನಿಲಯಗಳಲ್ಲಿ ರೂ. 16.71 ಲಕ್ಷಗಳ ಅನುದಾನವನ್ನು ವೆಚ್ಚಮಾಡಲಾಗಿದೆ.

ಯೋಜನಾ ಸಮನ್ವಯಾಧಿಕಾರಿಯವರ ಕಛೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಉಡುಪಿ ಜಿಲ್ಲೆಯಲ್ಲಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಮರಾಠಿ, ಮಲೆಕುಡಿಯ ಮತ್ತು ಕೊರಗ ಜನಾಂಗದವರ ಅಭಿವೃದ್ಧಿಗಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2011ರ ಜನಗಣತಿಯ ಪ್ರಕಾರ ಜಿಲ್ಲೇಯ ಪರಿಶಿಷ್ಟವರ್ಗದ ಜನಸಂಖ್ಯೆಯು 52.897 ಇದ್ದು ಜಿಲ್ಲೆಯ ಜನಸಂಖ್ಯೆ ಶೇಕಡಾ 4.49 ಆಗಿರುತ್ತದೆ. ತಾಲೂಕುವಾರು ಜನಸಂಖ್ಯೆ ವಿವರ ಈ ಕೆಳಗಿನಂತಿದೆ.

ಕ್ರ. ಸಂ	ತಾಲ್ಲೂಕು	ಜನಸಂಖ್ಯೆ	ಪ.ವರ್ಗದವರ ಜನಸಂಖ್ಯೆ ಒಟ್ಟು ಜನಸಂಖ್ಯೆ	ಕೊರಗ	ಮಲೆ ಕುಡಿಯ	ಮರಾಠಿ
1	ಉಡುಪಿ	5.62.799	26.087	11133	1456	39808
2	ಕಾರ್ಕಳ	2.16.091	12.091			
3	ಕುಂದಾಪುರ	3.98.471	14.719			
ಒಟ್ಟು		11.77.361	52.897	11133	1456	39808

I) ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳು

1) ಕಛೇರಿ ನಿರ್ವಹಣೆ
2) ವಿದ್ಯಾರ್ಥಿ ನಿಲಯಗಳ ನಿರ್ವಹಣೆ
3) ಆಶ್ರಮ ಶಾಲೆಗಳ ನಿರ್ವಹಣೆ
4) ವಿದ್ಯಾರ್ಥಿ ನಿಲಯಗಳು ವಿದ್ಯಾರ್ಥಿ ವೇತನ ಮತ್ತು ಧನಸಹಾಯ
5) ಮಹಿಳಾ ಕಲ್ಯಾಣ ಕೇಂದ್ರಗಳ ನಿರ್ವಹಣೆ
6) ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

II) ಎ.ತಾಲೂಕು ಪಂಚಾಯತ್ ಯೋಜನೆ ಕಾರ್ಯಕ್ರಮಗಳು:

1) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ
2) ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಊಟ ಮತ್ತು ವಸತಿ
3) ಸೇರ್ಪಡೆ ಮಾರ್ಪಾಡು

II) ಬಿ.ಕೇಂದ್ರಿಯ ಅನುದಾನ

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

II) ಸಿ.ಗಿರಿಜನ ಉಪಯೋಜನೆ ಕಾರ್ಯಕ್ರಮ

ಇದಲ್ಲದೆ ಈ ಕಛೇರಿಯಿಂದ ರಾಜ್ಯ ಅನುದಾನ ಕಾರ್ಯಕ್ರಮಗಳು ಅನುಷ್ಠಾನವಾಗುತ್ತಿದೆ.

ಆ) ಜಿಲ್ಲಾ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳು :-

1) <u>ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 2225-00-102-0-31 ಮತ್ತು 2225-00-102-0-07</u>:- ಈ ಜಿಲ್ಲೆಯಲ್ಲಿ ಕಾಲೇಜುಗಳಲ್ಲಿ ಒಟ್ಟು ವ್ಯಾಸಂಗ ಮಾಡುತ್ತಿದ್ದ ಪರಿಶಿಷ್ಟ ವರ್ಗದ ವಿಧ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. 2017-18 ನೇ ಸಾಲಿನಲ್ಲಿ ಒಟ್ಟು 1830 ವಿದ್ಯಾರ್ಥಿಗಳಿಗೆ ರೂ. 208.05ಲಕ್ಷ ವಿನಿಯೋಗಿಸಲಾಗಿದೆ.

2) <u>ವಿದ್ಯಾರ್ಥಿನಿಲಯಗಳು</u> : **<u>ವಿದ್ಯಾರ್ಥಿ ನಿಲಯ: 2225-00-102-0-33:-</u>** ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ 2ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ 1 ವಿದ್ಯಾರ್ಥಿನಿ ನಿಲಯ ಯೋಜನೇತರದಲ್ಲಿ ನಡೆಯುತ್ತಿದ್ದು 2017-18 ನೇ ಸಾಲಿನಲ್ಲಿ 156 ವಿದ್ಯಾರ್ಥಿ, ವಿದ್ಯಾರ್ಥಿನಿಯರು ದಾಖಲಾಗಿದ್ದು ಮೆಟ್ರಿಕ್ ನಂತರದ ಐದು ವಿದ್ಯಾರ್ಥಿ ನಿಲಯವಿದ್ದು 151 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಈ ಯೋಜನೆಯಡಿ ಕುಂದಾಪುರ ತಾಲೂಕಿನ ಬೈಂದೂರಿನಲ್ಲಿ ಒಂದು ಆಶ್ರಮ ಶಾಲೆಯು ನಡೆಯುತ್ತಿದ್ದು 2017-18ನೇ ಸಾಲಿನಲ್ಲಿ 104 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.ನಿರ್ವಹಣೆ ಹಾಗೂ ಸಿಬ್ಬಂದಿ ವೇತನವು ಸೇರಿ ರೂ 97.70 ಲಕ್ಷ ವಿನಿಯೋಗಿಸಲಾಗಿದೆ.

<u>3) ಆಶ್ರಮ ಶಾಲೆಗಳ ನಿರ್ವಹಣೆ : 2225-00-102-0-35</u>:- ಈ ಜಿಲ್ಲೆಯಲ್ಲಿ 4 ಗಿರಿಜನ ಶಾಲೆಗಳಲ್ಲಿ 2017-18 ನೇ ಸಾಲಿನಲ್ಲಿ 4 ಆಶ್ರಮ ಶಾಲೆಗಳಲ್ಲಿ 249 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ ಆಶ್ರಮ ಶಾಲೆ ಬನ್ನಂಜೆ, ಉಡುಪಿ ಜಿಲ್ಲೆಯಲ್ಲಿ 1 ರಿಂದ 7ನೇ ತರಗತಿಯವರೆಗೆ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಉಳಿದ ಎರಡು ಆಶ್ರಮ ಶಾಲೆಗಳಲ್ಲಿ 1 ರಿಂದ 5ನೇ ತರಗತಿಯವರೆಗೆ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಶಾಲೆಗಳ ನಿರ್ವಹಣೆ ವೆಚ್ಚಹಾಗೂ ವೇತನವೂ ಸೇರಿ, ರೂ .84.58 ಲಕ್ಷ ವಿನಿಯೋಗಿಸಲಾಗಿದೆ.

<u>4) ವಿಧ್ಯಾರ್ಥಿ ನಿಲಯಗಳು ವಿಧ್ಯಾರ್ಥಿ ವೇತನ ಮತ್ತು ಧನ ಸಹಾಯ</u> :- ಲೆಕ್ಕ ಶೀರ್ಷಿಕೆ:2225-00-102-0-38 ರಲ್ಲಿ ಆದಿವಾಸಿ ಜನಾಂಗದ ವಿದ್ಯಾರ್ಥಿಗಳ ಪೋಷಕರಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಪ್ರೋತ್ಸಾಹಿಸಲು. ರೂ 200/- ರಂತೆ ಧನ ಸಹಾಯ ನೀಡಲಾಗುತ್ತಿದೆ. ಈ ಸಾಲಿನಲ್ಲಿ 140 ವಿಧ್ಯಾರ್ಥಿಗಳ ಪೋಷಕರು ಈ ಪ್ರೋತ್ಸಾಹ ಧನವನ್ನು ಪಡೆದಿರುತ್ತಾರೆ. ಪ.ವರ್ಗದ ಕಾನೂನು ಪಧವಿದರರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚು ಜ್ಞಾನ ಪಡೆಯಲು ನೆರವಾಗುವಂತೆ ವಿದ್ಯಾರ್ಥಿಗಳಿಗೆ ನಾಲ್ಕುವರ್ಷದ ತರಬೇತಿ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಪುಸ್ತಕ ಖರಿದಿಸಲು ರೂ. 5000/- ಮತ್ತು ಪ್ರತಿ ಮಾಹೆಯಾನ ರೂ. 5000/- ದಂತೆ ಶಿಷ್ಯವೇತನ ನೀಡಲಾಗುತ್ತಿದ್ದೆ. ಈ ಸಾಲಿನಲ್ಲಿ ಮೂರು ಫಲಾನುಭವಿಗಳು ಹಾಗೂ ಹಿಂದಿನ ಸಾಲಿನ ನಾಲ್ಕು ಫಲಾನುಭವಿ ಒಟ್ಟು ಏಳು ಫಲಾನುಭವಿಗಳು ಈ ಸವಲತ್ತನ್ನು ಪಡೆದಿರುತ್ತಾರೆ. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ತಾಂತ್ರಿಕ ಮತ್ತು ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ

ವ್ಯಾಸಂಗದ ಅವಧಿಯಲ್ಲಿ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಸರಕಾರದ ವತಿಯಿಂದ ರೂ. 1000/- ಗಳಿಗೆ ಮೀರದಂತೆ ಅಧ್ಯಯನ ಪ್ರವಾಸ ವೆಚ್ಚ ಮಂಜೂರು ಮಾಡುವುದು ಈ ಕಾರ್ಯಕ್ರಮದ ಉದ್ದೇಶ 2017-18 ನೇ ಸಾಲಿನಲ್ಲಿ 3 ಪರಿಶಿಷ್ಟವರ್ಗದ ವಿದ್ಯಾರ್ಥಿಗಳಿಗೆ ತಲಾ ರೂ. 1000/- ದಂತೆ ರೂ. 3.000/- ಅಧ್ಯಯನ ಪ್ರವಾಸ ವೆಚ್ಚ ಭರಿಸಲಾಗಿದೆ. 2017-18ನೇ ಸಾಲಿನಲ್ಲಿ ತೇರ್ಗಡೆಯಾದ ಪಿ.ಯು.ಸಿ ವಾರ್ಷಿಕ ಪರಿಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ತಲಾ 20.000/- ಮತ್ತು ಯಾವುದೇ ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ತಲಾ ರೂ. 5.000/-ಸ್ನಾತಕ್ಕೋತ್ತರ ಪದವಿಗೆ ರೂ. 30.000/- ಹಾಗೂ ಇಂಜಿನಿಯರಿಂಗ್, ವೈಧ್ಯಕೀಯ, ಪಶುಸಂಗೋಪನೆ, ಕೃಷಿ ಇತ್ಯಾದಿ ಕೋರ್ಸ್‌ಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ರೂ. 35.000/- ಉತ್ತೇಜನ ಧನ ಸಹಾಯವನ್ನು ನೀಡಲಾಗುತ್ತಿದೆ. ಈ ವಿದ್ಯಾರ್ಥಿಗಳು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ್ದು 2017-18 ನೇ ಸಾಲಿನಲ್ಲಿ ಒಟ್ಟು 473 ವಿದ್ಯಾರ್ಥಿಗಳಿಗೆ ರೂ.1,04,75,000/- ವಿನಿಯೋಗಿಸಲಾಗಿದೆ. ಅಜೆಕಾರು ವಿದ್ಯಾರ್ಥಿ ನಿಲಯಕ್ಕೆ ವ್ಯಾಸಂಗದ ಕೊಠಡಿ, ಮಲಗುವ ಕೊಠಡಿ ರಚನೆ- ನಿರ್ಮಿತಿ ಕೇಂದ್ರ ಇವರಿಂದ ಅನುಷ್ಠಾನಗೋಳಿಸಲಯಿತು. ಮೆಟ್ರಿಕ್ ನಂತರದ ನಾಲ್ಕು ವಿದ್ಯಾರ್ಥಿ ನಿಲಯಗಳಿಗೆ ದಾಖಲಾದ ವಿದ್ಯಾರ್ಥಿಗಳಿಗೆ ಸಾದಿಲ್ವಾರು ವೆಚ್ಚ , ಕಟ್ಟಡ ಬಾಡಿಗೆ ವಿದ್ಯುತ್ ಮತ್ತು ನೀರು ಹಾಗೂ ಇತರ ವೆಚ್ಚವನ್ನು ಮತ್ತು ಈ ವಿದ್ಯಾರ್ಥಿ ನಿಲಯಕ್ಕೆ ಬಾಹ್ಯ ಮೂಲದಿಂದ ನೇಮಕವಾದ ಸಿಬಂದಿಗಳಿಗೆ ವೇತನವನ್ನು ಈ ಲೆಕ್ಕ ಶೀರ್ಷಿಕೆಯಿಂದ ಪಾವತಿಸಲಾಗಿದೆ 2017-18 ನೇ ಸಾಲಿನ ಅನುದಾನದಲ್ಲಿ ಒಟ್ಟು ಈ ಲೆಕ್ಕ ಶೀರ್ಷಿಕೆಯಲ್ಲಿ ಒಟ್ಟು ರೂ 191.07 ಲಕ್ಷ ವಿನಿಯೋಗಿಸಲಾಗಿದೆ.

5. ಕಛೇರಿ ನಿರ್ವಹಣೆ:2225-00-102-0-45 :- ಜಿಲ್ಲಾ ಮಟ್ಟದಲ್ಲಿ ಇಲಾಖೆಯ ಕೆಲಸ ಕಾರ್ಯಕ್ರಮಗಳು ಜಿಲ್ಲಾಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದು, ಯೋಜನಾ ಸಮನ್ವಯಾಧಿಕಾರಿಗಳು ಅನುಷ್ಠಾನಾಧಿಕಾರಿಯಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಸಮಾಜ ಕಲ್ಯಾಣಾಧಿಕರಿಗಳು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಾರೆ. ಯೋಜನಾ ಸಮನ್ವಯಾಧಿಕಾರಿಯವರ ಕಛೇರಿಗೆ 17 ಹುದ್ದೆಗಳು ಮಂಜೂರಾಗಿದ್ದು, ದಿನಾಂಕ: 31-03-2018 ಅಂತ್ಯಕ್ಕೆ 10 ಹುದ್ದೆಗಳಿ ಖಾಲಿ ಇದೆ. ಕಛೇರಿಯ ನಿರ್ವಹಣೆಯ ವೆಚ್ಚಕ್ಕಾಗಿ ಸಿಬ್ಬಂದಿ ವೇತನವೂ ಸೇರಿ ರೂ. 45.32 ಲಕ್ಷ ವಿನಿಯೋಗಿಸಲಾಗಿದೆ.

6. ಮಹಿಳಾ ಕಲ್ಯಾಣ ಕೇಂದ್ರಗಳ ನಿರ್ವಹಣೆ:2225-00-102-0-52:- ಜಿಲ್ಲೆಯಲ್ಲಿ ಐದು ಮಹಿಳಾ ಕಲ್ಯಾಣ ಕೇಂದ್ರಗಳಿದ್ದು ಮಹಿಳಾ ಕಲ್ಯಾಣ ಕೇಂದ್ರಗಳ ಬಳಿ ಅಂಗನವಾಡಿ ಕೇಂದ್ರಗಳಿದ್ದು, ಮಕ್ಕಳ ದಾಖಲಾತಿ ಕಡಿಮೆ ಇರುವುದರಿಂದ ಐದು ಸಂಸ್ಥೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಐದು ಮಹಿಳಾ ಕೇಂದ್ರದಲ್ಲಿ 10 ಸಿಬ್ಬಂದಿಗಳು ಮಂಜೂರಾತಿಯಿದ್ದು, ಇಲ್ಲಿ 2 ಸಿಬ್ಬಂದಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, 2017-18 ನೇ ಸಾಲಿನಲ್ಲಿ ಈ ಕೇಂದ್ರದ ಸಿಬ್ಬಂದಿ ವೇತನಕ್ಕಾಗಿ ರೂ. 6.66 ಲಕ್ಷ ವಿನಿಯೋಗಿಸಲಾಗಿದೆ.

ಇ- ತಾಲೂಕು ಪಂಚಾಯತ್ ಯೋಜನೆ ಕಾರ್ಯಕ್ರಮಗಳು:

1) ಪರಿಶಿಷ್ಟ ವರ್ಗದ ವಿಧ್ಯಾರ್ಥಿಗಳಿಗೆ ವಿಧ್ಯಾರ್ಥಿವೇತನ 2225-00-102-0-68:- ತಾಲೂಕು ಪಂಚಾಯಾತ್ ಯೋಜನೆ ಯೋಜನೇತರಲೆಕ್ಕ ಶೀರ್ಷಿಕೆಯಲ್ಲಿ ಈ ಕಾರ್ಯಕ್ರಮದಡಿಯಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮೊದಲಾದ ಕಾರ್ಯಕ್ರಮದಡಿ 1 ರಿಂದ 8ನೇ ತರಗತಿಯವರೆಗಿನ ಪ.ವರ್ಗದ ವಿದ್ಯಾರ್ಥಿಗಳಿಗೆ, 9ನೇ ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಒಟ್ಟು 5456 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಒಟ್ಟು ರೂ 48.98 ಲಕ್ಷ ಅನುದಾನ ವಿನಿಯೋಗಿಸಿದೆ.

2) <u>ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ಊಟ ಮತ್ತು ವಸತಿ2225-00-102-0-71</u>:- ಪ.ವರ್ಗದ ವಿದ್ಯಾರ್ಥಿಗಳಿಗೆ ರಾಜ್ಯ ಸರಕಾರದ ಅಂಗೀಕೃತ ವಿದ್ಯಾರ್ಥಿನಿಲಯದಲ್ಲಿ ನಿಲಯಾರ್ಥಿಗಳಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಭಾರತ ಸರಕಾರ ನಿಗದಿ ಪಡಿಸಿರುವ ವಿದ್ಯಾರ್ಥಿವೇತನ ದರಕ್ಕಿಂತಲೂ ಆಯಾ ನಿಲಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಖರ್ಚು ಮಾಡಿದಲ್ಲಿ ಈ ಲೆಕ್ಕ ಶೀರ್ಷಿಕೆಯಲ್ಲಿ ಹೆಚ್ಚಿನ ಊಟ ವಸತಿ ವೆಚ್ಚಕ್ಕಾಗಿ ಖರ್ಚುಭರಿಸಲಾಗುತ್ತದೆ. 2017-18 ನೇ ಸಾಲಿನ 292 ವಿದ್ಯಾರ್ಥಿಗಳಿಗೆ ರೂ.19.93 ಲಕ್ಷ ಅನುದಾನ ವಿನಿಯೋಗಿಸಿದೆ.

3) <u>ಸೇರ್ಪಡೆ ಮಾರ್ಪಾಡು 2225-00-102-0-77</u> :- ಈ ಲೆಕ್ಕ ಶೀರ್ಷಿಕೆಯಲ್ಲಿ ಪರಿಷ್ಟಿವರ್ಗದ ಆಶ್ರಮ ಶಾಲೆ ವಿಧ್ಯಾರ್ಥಿ ನಿಲಯದ ಸೇರ್ಪಡೆ ಮತ್ತು ಮಾರ್ಪಾಡು ಮೂದಲಾದ ಕಾರ್ಯಕ್ರಮಗಳಿಗೆ ಅನುದಾನ ವಿನಿಯೋಗಿಸಬೇಕಾಗಿದ್ದು 2017-18 ನೇ ಸಾಲಿನಲ್ಲಿ ಎರಡು ವಿದ್ಯೆಸಂಸ್ಥೆಗಳ ಸೇರ್ಪಡೆ ಮತ್ತು ಮಾರ್ಪಾಡುಗಾಗಿ ರೂ. 9.00 ಲಕ್ಷ ವಿನಿಯೋಗಿಸಿದೆ.

4) <u>ಗಿರಿಜನ ಉಪಯೋಜನೆ</u> :- ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳು ಪರಿಶಿಷ್ಟ ವರ್ಗದ ಜನರ ಅಭಿವೃದ್ಧಿ ಸಾದಿಸಲು ರೂಪುಗೊಂಡಿದ್ದು 2016-17ನೇ ಸಲಿ ನಲ್ಲಿ ಉಡುಪಿಜಿಲ್ಲೆಗೆ 87.00 ಲಕ್ಷ ಅನುದಾನ ನಿಗದಿ ಪಡಿಸಲಾಗಿದೆ. ಈ ಜಿಲ್ಲೆಯ ಪರಿಶಿಷ್ಟ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಅವರ ಆರ್ಥಿಕ ಅಭಿವೈದ್ಧಿ ಸಾದಿಸಲು ಹಾಗೂ ಮೂಲಭೊತ ಸೌಲಭ್ಯಗಳನ್ನು ಒದಗಿಸಲು ಈ ಯೋಜನೆಯಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ಮಂಜೂರಾಗಿರುವ ಅನುದಾನವನ್ನು ತಾಲೂಕುವಾರು ವಿವಿಧ ಇಲಾಖೆಗಳ ಮೂಲಕ ಕಾರ್ಯಕ್ರಮ ಅನುಷ್ಠಾನ ಮಾಡಿ 85.35 ಲಕ್ಷ ವಿನಿಯೋಗಿಸಲಾಗಿದೆ.

ಅದಿವಾಸಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ (ರಾಜ್ಯವಲಯ) : 7ನೇ ತರಗತಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಕೊರಗ ವಿದ್ಯಾರ್ಥಿಗಳಿಗೆ ತಲಾ 2500/- ಹಾಗೂ 10ನೇ ತರಗತಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ಕೊರಗ ವಿದ್ಯಾರ್ಥಿಗಳಿಗೆ 5000/- ದಂತೆ ಸಹಾಯ ಧನ ನೀಡಲಾಗುತ್ತಿದೆ. 2016-17 ನೇ ಸಾಲಿನ 7 ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ 60 ವಿದ್ಯಾರ್ಥಿಗಳಿಗೆ ಹಾಗೂ ಎಸ್,ಎಸ್,ಎಲ್,ಸಿ ಯಲ್ಲಿ ತೇರ್ಗಡೆಯಾದ 33 ವಿದ್ಯಾರ್ಥಿಗಳಿಗೆ ರೂ. 3,15,.000/- ಅನುದಾನವು 2017-18 ನೇ ಸಾಲಿನಲ್ಲಿ ವಿನಿಯೋಗಿಸಲಾಗಿದೆ.

<u>ವಿದ್ಯಾರ್ಥಿಗಳಗೆ ಪ್ರತಿಷ್ಟಿತ ಶಾಲೆಯಲ್ಲಿ ಅಧ್ಯಯನ ಮಾಡಲು ಧನಸಹಾಯ</u> :- 6ನೇ ತರಗತಿಯಿಂದ ಪ್ರತಿಷ್ಠಿತ ಶಾಲೆಗಳಲ್ಲಿ ಅಧ್ಯಯನ ಮಾಡಲು ಇಚ್ಚಿಸುವ ಪ.ವರ್ಗದ ವಿದ್ಯಾರ್ಥಿಗಳ ಪೂರ್ಣ ಶೈಕ್ಷಣಿಕ ವೆಚ್ಚವನ್ನು ಇಲಾಖೆಯಿಂದ ಭರಿಸಲಾಗುವುದು. 2017-18 ನೇ ಸಾಲಿನಲ್ಲಿ ನವೀಕರಣಗೊಂಡು ಪಿ.ಯು.ಸಿ. ವರಗೆ ಓದುತ್ತಿರುವ 67 ವಿದ್ಯಾರ್ಥಿಗಳಿಗೆ ಹಾಗೂ 2017-18 ನೇ ಸಾಲಿನಲ್ಲಿ 6ನೇ ತರಗತಿಗೆ ಸೇರ್ಪಡೆಗೊಂಡ 25 ವಿಧ್ಯಾರ್ಥಿಗಳು ಒಟ್ಟು 92 ವಿದ್ಯಾರ್ಥಿಗಳಿಗೆ 2017-18 ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಶಾಲಾ ಶುಲ್ಕ, ನಿರ್ವಹಣಾ ವೆಚ್ಚ ಹಾಗೂ ಇತರ ವೆಚ್ಚ ಸೇರಿ ರೂ. 45,77,525/- ಅನುದಾನವನ್ನು ವಿನಿಯೋಗಿಸಲಾಗಿದೆ.

ಈ ಕಛೇರಿಯಿಂದ ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಕೊರಗ ಸಮುದಾಯದ ಅಭಿವೃದ್ಧಿಗಾಗಿ ಉಚಿತವಾಗಿ ನೀಡುವ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. **ವಸತಿ ಸೌಲಭ್ಯ** :- ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊರಗ ಸಮುದಾಯದ ಅರ್ಹ ಫಲಾನಿಭವಿಗಳಿಗೆ ವಸತಿಸೌಲಭ್ಯಕ್ಕಾಗಿ ಎರಡು ಲಕ್ಷ ಸಹಾಯ ಧನವನ್ನು ನೀಡಲಾಗುವುದು, ಸ್ವಂತ
2. ಜಾಗ ಅಥವಾ ಸರಕಾರಿ ಜಾಗದಲ್ಲಿ 15 ವರ್ಷಗಳಿಗಿಂತ ಮೇಲ್ಪಟ್ಟು ವಾಸವಾಗಿರುವ ಕೊರಗ ಜನಾಂದವರಿಗೆ ಈ ಸೌಲಭ್ಯವನ್ನು ಒದಗಿಸಲಾಗುತ್ತದೆ.

3. ಕುಡಿಯುವ ನೀರು ಮತ್ತು ನೀರಾವರಿ ಸೌಲಭ್ಯ :– ಮೂಲನಿವಾಸಿ ಅಭಿವೃದ್ಧಿ ಯೋಜನೆಯಡಿ ಕೊರಗ ಸಮುದಾಯದ ಕಾಲನಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ನೀಡಲಾಗುವುದು. ಕೊರಗ ಕೃಷಿಕ ಕುಟುಂಬಗಳಿಗೆ ಕೃಷಿ ಅಭಿವೃದ್ಧಿಗಾಗಿ ನೀರಾವರಿ ಸೌಲಭ್ಯವನ್ನು ನೀಡಲಾಗುವುದು. ಕೊರಗ ಕೃಷಿ ಅಭಿವೃದ್ಧಿಗಾಗಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು.
4. ಮೂಲಭೂತ ಸೌಕರ್ಯಗಳು :– ಕೊರಗ ಸಮುದಾಯದ ಕಾಲನಿಗಳಿಗೆ ಅಗತ್ಯವಿರುವ ಸಮುದಾಯ ಭವನ ರಸ್ತೆ, ಬೀದಿ ದೀಪ, ಚರಂಡಿ, ಕಲುಸಂಕ. ವಿದ್ಯುತ್ ಸಂಪರ್ಕ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ನೀಡಲಾಗುವುದು.
5. ಪೌಷ್ಠಿಕ ಆಹಾರ ವಿತರಣೆ :– ಕೊರಗ ಸಮುದಾಯದವರ ಆರೋಗ್ಯದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಮಳೆಗಾಲದ ಆರು ತಿಂಗಲು ಪ್ರತೀ ಕುಟುಂಬಕ್ಕೆ ಪೌಷ್ಠಿಕ ಆಹಾರವಾದ ಹೆಸರು ಕಾಳು, ಹುರಳಿಕಾಳು, ಕುಚ್ಚಿಗೆ ಅಕ್ಕಿ, ತೊಗರಿಬೇಲೆ, ಹಲಸಂಡೆಕಾಳು, ಸಕ್ಕರೆ, ಬೆಲ್ಲ, ಎಣ್ಣೆ ಹಾಗೂ ಮೊಟ್ಟೆಯನ್ನು ವಿತರಿಸಲಾಗುವುದು.
6. ವೈಧ್ಯಕೀಯ ವೆಚ್ಚ ಮರುಪಾವತಿ :– ಕೊರಗ ಸಮುದಾಯದವರು ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಅವರ ಪೂರ್ತಿ ಚಿಕಿತ್ಸಾ ವೆಚ್ಚವನ್ನು ಇಳಾಖೆಯಿಂದ ಮರುಪಾವತಿಸಲಾಗುವುದು.
7. ಸೇತುಬಂದ ಕಾರ್ಯಕ್ರಮ:– ಅರ್ಧದಲ್ಲಿ ಶಾಳೆ ಬಿಟ್ಟಿರುವ ಕೊರಗ ವಿಧ್ಯಾರ್ಥಿಗಳು ನೇರವಾಗಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆ ಬರೆಯುವ ಸಲುವಾಗಿ ಕೋಚಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.
8. ಕೊರಗ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರ :– ಕೊರಗ ವಿದ್ಯಾರ್ಥಿಗಳಲ್ಲಿ ಹುದುಗಿರುವ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಬೇಸಿಗೆ ರಜೆಯ ಸಂದರ್ಭದಲ್ಲಿ ನುರಿತ ರಂಗ ನಿರ್ದೇಶಕರಿಂದ ಬೇಸಿಗೆ ಶಿಬಿರವನ್ನು ಆಯೋಜಿಸಲಾಗುತ್ತಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 2017–18ನೇ ಸಾಲಿನ ಪ್ರಗತಿ ವರದಿ.

ಕ್ರ. ಸಂ.	ಲೆಕ್ಕ ಶೀರ್ಷಿಕೆ ಹಾಗೂ ಕಾರ್ಯಕ್ರಮಗಳ ಹೆಸರು	2017–18ನೇ ಸಾಲಿಗೆ ನಿಗದಿಪಡಿಸಿದ ಅನುದಾನ	ಬಿಡುಗಡೆಯಾದ ಅನುದಾನ	ಒಟ್ಟು ಖರ್ಚಾದ ಅನುದಾನ	ಭೌತಿಕ ಗುರಿ	ಭೌತಿಕ ಸಾಧನೆ
1	2	3	4	7	8	9
	ಆ) ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು					
1	**ಕೇಂದ್ರ ಪುರಸ್ಕೃತ**	–	–	–		
1	ವೈಧ್ಯಕೀಯ & ಇಂಜಿನಿಯರಿಂಗ್ ಪ.ವರ್ಗ ವಿದ್ಯಾರ್ಥಿಗಳ (ರಾ)			–		
	ಪುಸ್ತಕ ಭಂಡರಕ್ಕಾಗಿ 2225–00–102–0–08	0.40	0.00	–		
–	**ಒಟ್ಟು:–**	**0.40**	**0.00**	–		

2	**ಜಿಲ್ಲಾ ಪಂಚಾಯತ್ :–**			–		
1	ಪ.ಪಂ.ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ 2225–00–102–0–31(117)	73.00	73.00	72.98	1000	627
		73.00	73.00	72.98		
2	ಪ.ಪಂ.ವಿದ್ಯಾರ್ಥಿ ನಿಲಯಗಳ ನಿರ್ವಹಣೆ					
1	2225–00–102–0–33 (ವೇ)(ಅಬ್ಜೇಕ್ಟಿವ್ ಕೋಡ್–001)	54.00	54.00	41.63	27	7
2	(ಬಾಹ್ಯಮೂಲದವರ ಸಂಬಾವನೆ)(ಅಬ್ಜೇಕ್ಟಿವ್ ಕೋಡ್–034)	12.54	12.54	11.61	15	14
3	(ನಿರ್ವಹಣೆ ಅಬ್ಜೇಕ್ಟಿವ್ ಕೋಡ್–50)	29.57	29.57	29.55	725	411
4	(ಗಿಉಯೋ)(ಅಬ್ಜೇಕ್ಟಿವ್ ಕೋಡ್–423)	15.00	15.00	14.91	725	411
	ಒಟ್ಟು:–	**111.11**	**18.20**	**97.70**		
3	**ಪ.ಪಂ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು –**					
1	2225–00–102–0–35 (ವೇತನ)(ಅಬ್ಜೇಕ್ಟಿವ್ ಕೋಡ್–001)	28.00	28.00	27.15	25	8
2	(ದಿನಗೂಲಿವೇತನ)(ಅಬ್ಜೇಕ್ಟಿವ್ ಕೋಡ್–033)	4.43	4.43	4.08	2	2
3	(ಬಾಹ್ಯಮೂಲದವರ ಸಂಬಾವನೆ)(ಅಬ್ಜೇಕ್ಟಿವ್ ಕೋಡ್–034)	13.63	13.62	11.55	10	10
4	(ನಿರ್ವಹಣೆ ಅಬ್ಜೇಕ್ಟಿವ್ ಕೋಡ್–50)	41.84	41.84	41.80	350	239
	ಒಟ್ಟು:–	**87.90**	**25.77**	84.58		

4	**ವಿದ್ಯಾರ್ಥಿವೇತನ & ಧನ ಸಹಾಯ 2225–00–102–0–38**					
1	(ಬಾಹ್ಯಮೂಲದವರ ಸಂಬಾವನೆ)(ಅಬ್ಜೇಕ್ಟಿವ್ ಕೋಡ್–034)	13.82	13.82	13.74	10	10
2	(ನಿರ್ವಹಣೆ ಮತ್ತು ವಿದ್ಯಾರ್ಥಿ ವೇತನ ಅಬ್ಜೇಕ್ಟಿವ್ ಕೋಡ್–50)	75.28	75.28	74.42	200	142
3	(ನಿರ್ವಹಣೆ ಮತ್ತು ವಿದ್ಯಾರ್ಥಿ ವೇತನ (ಗಿಉಯೋ)(ಅಬ್ಜೇಕ್ಟಿವ್ ಕೋಡ್–423)	103.00	103.00	102.91	354	414
	ಒಟ್ಟು:–	**192.10**	**192.10**	**191.07**		
5	**ಗಿರಿಜನ ಪ್ರದೇಶ ಉಪಯೋಜನೆಗಳು**					
1	2225–00–102–0–45 (ವೇತನ– 001)	25.00	25.00	24.92	17	7
2	(ಬಾಹ್ಯಮೂಲದವರ ಸಂಬಾವನೆ)(ಅಬ್ಜೇಕ್ಟಿವ್ ಕೋಡ್–034)	2.30	2.30	2.21	3	3
3	(ನಿರ್ವಹಣೆ 050)	24.00	24.00	18.19		
	ಒಟ್ಟು :–	**51.30**	**51.30**	**45.32**		
6	ಮಹಿಳೆಯರ ಕಲ್ಯಾಣ ಕೇಂದ್ರಗಳು					
1	2225–00–102–0–52 (ವೇ–001)	7.00	7.00	6.66	4	2
	ಒಟ್ಟು :–	**7.00**	**7.00**	6.66		
ಜಿಲ್ಲಾ ಪಂಚಾಯತ್ ಒಟ್ಟು :–(1+2)		**522.81**	**522.41**	498.31		
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ					
1	2225–00–102–0–68 (ಗಿಉಯೋ)(ಅಬ್ಜೇಕ್ಟಿವ್ ಕೋಡ್–423)	49.00	49.00	48.98	6000	5456
	ಒಟ್ಟು :–	**49.00**	**49.00**	**48.98**		

2	ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ 2225–00–102–0–69 ಆ)(ಗಿಉಯೋ)(ಅಬ್ಜೇಕ್ಟಿವ್ ಕೋಡ್–423)	31.00	31.00	29.38	20	25
	ಒಟ್ಟು :–	**31.00**	**31.00**	**29.38**		
3	ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸಹಾಯ 2225–00–102–0–70	56.00	56.00	55.97	6401	1416
4	ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ಗಳಿಗೆ ಹೆಚ್ಚಿನ ಬೋಜನೆ ಮತ್ತು ವಸತಿ ವೆಚ್ಚಗಳು 2225–00–102–0–71	20.00	20.00	19.93	300	292
5	ಮೆಟ್ರಿಕ್ ಪೂರ್ವ ಸರ್ಕಾರಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ವಹಣೆ 2225–00–102–0–77	9.00	9.00	9.00	2	2
	(3+4+5)ಒಟ್ಟು :–	**85.00**	**85.00**	**84.90**		
	(1+2+3+4+5)ಒಟ್ಟು :–	**165.00**	**165.00**	**163.26**		
1	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ2225–00–102–0–07	120.00	135.09	135.07	1000	1203
	ಒಟ್ಟು :–	**120.00**	**135.09**	**135.07**		
	ಒಟ್ಟು :– (ಅ & ಆ)	**285.00**	**195.00**	**298.33**		

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳು, ಮೊರಾರ್ಜಿದೇಸಾಯಿ ವಸತಿ ಶಾಲೆಗಳ ನಿರ್ವಹಣೆ, ಖಾಸಗಿ ಅನುದಾನಿತ ನಿಲಯಗಳು ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿ ಕೇಂದ್ರದ ನಿರ್ವಹಣೆ, ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಮತ್ತು ಶುಲ್ಕವಿನಾಯಿತಿ ಮಂಜೂರಾತಿ, ಪ್ರತಿಭಾ ಪುರಸ್ಕಾರ, ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮತ್ತು ವಿದ್ಯಾಸಿರಿ ವಿದ್ಯಾರ್ಥಿವೇತನ ಮಂಜೂರಾತಿ, ಕೌಶಲ್ಯ ಕಾರ್ಯಕ್ರಮದಲ್ಲಿ ನಿರುದ್ಯೋಗಿ ಅಭ್ಯರ್ಥಿಗಳಿಗೆ ಕಂಪ್ಯೂಟರ್ , ಪ್ಲಾಸ್ಟಿಕ್ ಟೆಕ್ನಾಲಜಿ, ಮತ್ತಿತರ ವೃತ್ತಿಪರ ಕೋರ್ಸುಗಳಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರಾತಿ, ನರ್ಸಿಂಗ್ ಕೋರ್ಸಿನಲ್ಲಿ ವ್ಯಾಸಂಗ ಮಾಡುವ ಅಭ್ಯರ್ಥಿಗಳಿಗೆ ಸ್ಟೈಫಂಡ್ ಮಂಜೂರಾತಿ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರೆಸಲು ಪ್ರೋತ್ಸಾಹಧನ ಮಂಜೂರಾತಿ, ಐ.ಟಿ.ಐ. ಡಿಪ್ಲೋಮಾ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಮಂಜೂರಾತಿ , ಕಾನೂನು ಪದವೀಧರರಿಗೆ ವಕೀಲಿ ವೃತ್ತಿಯಲ್ಲಿ ತರಬೇತಿ ನೀಡಿ ಶಿಷ್ಯವೇತನ ಮಂಜೂರಾತಿ, ವಾಹನಚಾಲನಾ ತರಬೇತಿ, ವಿದ್ಯಾಸಿರಿ, ಸಮಾಜದ ವಿವಿಧ ಸಮುದಾಯಕ್ಕೆ ಸೇರಿದ ಸಂಘ ಸಂಸ್ಥೆಗಳಿಗೆ ಸಮುದಾಯ ಭವನ ನಿರ್ಮಾಣಕ್ಕೆ ಸಹಾಯಧನ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರ.

1. **ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ:**

   ಜಿಲ್ಲೆಯಲ್ಲಿ 12 ಮೆಟ್ರಿಕ್ ಪೂರ್ವ ಬಾಲಕರ ಹಾಗೂ 06 ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯಗಳಿದ್ದು ಈ ನಿಲಯಗಳಲ್ಲಿ 565 ಬಾಲಕರು ಮತ್ತು 285 ಬಾಲಕಿಯರು ಒಟ್ಟು 850 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು ಇವರಿಗೆ ಸರ್ಕಾರದ ವತಿಯಿಂದ ಉಚಿತವಾಗಿ ಊಟ, ವಸತಿ, ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರ, ಹಾಸಿಗೆ, ಹೊದಿಕೆ, ತಟ್ಟೆ, ಲೋಟ , ಟ್ರಂಕ್ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

2. **ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ:**

   ಜಿಲ್ಲೆಯಲ್ಲಿ 09 ಮೆಟ್ರಿಕ್ ನಂತರದ ಬಾಲಕರ ಮತ್ತು 14 ಮೆಟ್ರಿಕ್ ನಂತರದ ಬಾಲಕಿಯರ ನಿಲಯಗಳಿದ್ದು 900 ಬಾಲಕರು ಮತ್ತು 1515 ಬಾಲಕಿಯರು ಒಟ್ಟು 2415 ವಿದ್ಯಾರ್ಥಿಗಳಿಗೆ ಈ ನಿಲಯಗಳಲ್ಲಿ ಪ್ರವೇಶಾವಕಾಶವಿದ್ದು ಇವರಿಗೆ ಉಚಿತವಾಗಿ ಊಟ, ವಸತಿ, ಹಾಸಿಗೆ ಹೊದಿಕೆ, ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

3. **ಖಾಸಗಿ ನಿಲಯಗಳಿಗೆ ಸಹಾಯಧನ ಮಂಜೂರಾತಿ:**

   ಜಿಲ್ಲೆಯಲ್ಲಿ 2 ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳಿದ್ದು, ಒಟ್ಟು ಮಂಜೂರಾತಿ ಸಂಖ್ಯೆ 92 ಆಗಿರುತ್ತದೆ. ವಿದ್ಯಾರ್ಥಿಗಳ ಊಟದ ವೆಚ್ಚಕ್ಕೆ ಒಬ್ಬ ವಿದ್ಯಾರ್ಥಿಗೆ ಮಾಹೆಯಾನ ರೂ. 1000 ರ ದರದಲ್ಲಿ ಭೋಜನಾ ವೆಚ್ಚವನ್ನು ಮಂಜೂರು ಮಾಡಲಾಗುತ್ತದೆ.

4. **ಹೊಲಿಗೆ ತರಬೇತಿ ಕೇಂದ್ರ** :

ಇಲಾಖೆಯ ವತಿಯಿಂದ ಉಡುಪಿಯ ಬನ್ನಂಜೆಯಲ್ಲಿ 20 ಸಂಖ್ಯಾಬಲದ ಹೊಲಿಗೆ ತರಬೇತಿ ಕೇಂದ್ರವನ್ನು ನಡೆಸಲಾಗುತ್ತಿದ್ದು ಈ ಕೇಂದ್ರದಲ್ಲಿ ಪ್ರವೇಶ ಪಡೆದ ಅರ್ಹ ಅಭ್ಯರ್ಥಿಗಳಿಗೆ ಮಾಹೆಯಾನ ರೂ. 300/- ರಂತೆ ಸ್ಟೈಫಂಡ್ ನೀಡಿ ಒಂದು ವರ್ಷ ಉಚಿತ ತರಬೇತಿ ನೀಡಲಾಗುತ್ತಿದೆ. ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಉಚಿತ ಹೊಲಿಗೆ ಯಂತ್ರವನ್ನು ನೀಡಲಾಗುವುದು.

5. **ಹಿಂದುಳಿದ ವರ್ಗಗಳ ಆಂಗ್ಲ ಮಾಧ್ಯಮದ ಮೊರಾರ್ಜಿದೇಸಾಯಿ ವಸತಿ ಶಾಲೆಗಳು:**

ಉಡುಪಿ ಜಿಲ್ಲೆಯಲ್ಲಿ ಕಾರ್ಕಳ, ಕುಂದಾಪುರ, ಹಿರೇಬೆಟ್ಟು, ಬೈಂದೂರಿನಲ್ಲಿ ಹಿಂದುಳಿದ ವರ್ಗಗಳ ಆಂಗ್ಲ ಮಾಧ್ಯಮದ ಮೊರಾರ್ಜಿದೇಸಾಯಿ ವಸತಿ ಶಾಲೆಗಳಿದ್ದು ಇಲ್ಲಿ 450 ಬಾಲಕರು ಮತ್ತು 396 ಬಾಲಕಿಯರು ಪ್ರವೇಶ ಪಡೆದಿರುತ್ತಾರೆ. ಇಲ್ಲಿ ಪ್ರವೇಶ ಪಡೆದ 6 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ, ಲೇಖನ ಸಾಮಗ್ರಿ, ಹಾಸಿಗೆ ಹೊದಿಕೆ, ಟ್ರಂಕು, ಮಂಚ, ಕ್ರೀಡಾ ಸಾಮಗ್ರಿ ಮುಂತಾದ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕಾರ್ಕಳದಲ್ಲಿ ಮೊರಾರ್ಜಿದೇಸಾಯಿ ಪದವಿ ಪೂರ್ವ ಕಾಲೇಜನ್ನು ನಡೆಸಲಾಗುತ್ತಿದ್ದು 160 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಇರುತ್ತದೆ.

6. **ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿ:**

ಜಿಲ್ಲೆಯಲ್ಲಿ 1ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 44,500/- ಇರುವ 1ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ. 750/- ಹಾಗೂ 6ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ರೂ. 900/- ರಂತೆ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ರೂ 1000/-ರಂತೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲಾಗುತ್ತದೆ. ಅಲ್ಲದೆ ಕೇಂದ್ರ ಪುರಸ್ಕೃತ ಯೋಜನೆಯಲ್ಲಿಯೂ ಸಹ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. 2017-18 ನೇ ಸಾಲಿನಲ್ಲಿ 35595 ವಿದ್ಯಾರ್ಥಿಗಳಿಗೆ ರೂ. 301.805 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

7. **ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿ:**

ಜಿಲ್ಲೆಯ ಕಾಲೇಜುಗಳಲ್ಲಿ ಪಿ.ಯು.ಸಿ, ಪದವಿ, ಸ್ನಾತಕೋತ್ತರ, ತಾಂತ್ರಿಕ ಮತ್ತಿತರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ರೂ. 1600, ರೂ. 2100, ರೂ. 3350/- ಮತ್ತು 3500/- ರ ದರದಲ್ಲಿ ಅರ್ಹತೆಯನ್ನಾಧರಿಸಿ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. ಅಲ್ಲದೆ ಕೇಂದ್ರ ಪುರಸ್ಕೃತ ಯೋಜನೆಯಲ್ಲಿಯೂ ಸಹಾ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ರೂ. 1600/-, ಪದವಿ ವಿದ್ಯಾರ್ಥಿಗಳಿಗೆ ರೂ. 2,100/-, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 3,350/- ರಂತೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. 2017-18ನೇ ಸಾಲಿನಲ್ಲಿ 13517 ವಿದ್ಯಾರ್ಥಿಗಳಿಗೆ ರೂ 281.78 ಲಕ್ಷ ಅನುದಾನ ಮಂಜೂರು ಮಾಡಲಾಗಿರುತ್ತದೆ.

8. **ವಿದ್ಯಾಸಿರಿ ಯೋಜನೆ**

ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ತಲಾ ರೂ. 1500/-ರ ದರದಲ್ಲಿ 10 ತಿಂಗಳ ಅವಧಿಗೆ ಊಟ ಮತ್ತು ವಸತಿ ಬಾಬ್ತು ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತದೆ. 2017-18ನೇ ಸಾಲಿನಲ್ಲಿ 3831 ವಿದ್ಯಾರ್ಥಿಗಳಿಗೆ ರೂ 201.16 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

9. **ಶುಲ್ಕ ವಿನಾಯಿತಿ ಮಂಜೂರಾತಿ :**

ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಕುಟುಂಬದ ವಾರ್ಷಿಕ ಆದಾಯ ರೂ. 1.00 ಲಕ್ಷ /- ಗಳ ಹಾಗೂ ವರ್ಗ-1ರ ವಿದ್ಯಾರ್ಥಿಗಳ ವಾರ್ಷಿಕ ಆದಾಯ ರೂ. 2.50 ಲಕ್ಷಗಳ ಮಿತಿಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಇತರೆ ವಿದ್ಯಾರ್ಥಿಗಳಿಗೆ ಸರ್ಕಾರ ನಿಗದಿಪಡಿಸಿದ ಬೋಧನಾ, ಪರೀಕ್ಷಾ, ಕ್ರೀಡಾ, ಗ್ರಂಥಾಲಯ ಮುಂತಾದ ಶುಲ್ಕಗಳನ್ನು ಬಿಸಿಎಂ ಇಲಾಖೆಯಿಂದ ಪಾವತಿಸಲಾಗುತ್ತದೆ. 2017-18 ನೇ ಸಾಲಿನಲ್ಲಿ 19880 ವಿದ್ಯಾರ್ಥಿಗಳಿಗೆ ರೂ. 961.92 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

10. **ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಿಕೆ**:

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದು ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ನಿಲಯಾರ್ಥಿಗಳಿಗೆ ಕೋರ್ಸುವಾರು ನಿಗದಿಪಡಿಸಿದ ದರ ಎಸ್.ಎಸ್.ಎಲ್.ಸಿ ರೂ. 1000/- ರಿಂದ ರೂ. 3000/-ರ ವರೆಗೆ ನಗದು ಪ್ರೋತ್ಸಾಹಧನ ಮಂಜೂರು ಮಾಡಲಾಗುತ್ತದೆ. 2017-18ನೇ ಸಾಲಿನಲ್ಲಿ 302 ವಿದ್ಯಾರ್ಥಿಗಳಿಗೆ ರೂ. 5.03 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

11. **ಕಾನೂನು ಪದವೀಧರರಿಗೆ ತರಬೇತಿ ಭತ್ಯೆ ನೀಡಿಕೆ:**

ಹಿಂದುಳಿದ ವರ್ಗಗಳ ಕಾನೂನು ಪದವೀಧರರು ವಕೀಲ ವೃತ್ತಿಯನ್ನು ಕೈಗೊಳ್ಳಲು ಸಮಿತಿಯಲ್ಲಿ ಆಯ್ಕೆ ಮಾಡಿ ನುರಿತ ಹಿರಿಯ ವಕೀಲರಿಂದ 4 ವರ್ಷಗಳ ತರಬೇತಿ ಕೊಡಿಸಿ ಮಾಹೆಯಾನ ತಲಾ ರೂ. 4,000/- ದಂತೆ 4 ವರ್ಷಗಳ ಅವಧಿಗೆ ತರಬೇತಿ ಭತ್ಯೆ ಮಂಜೂರು ಮಾಡಲಾಗುವುದು. 2017-18ನೇ ಸಾಲಿನಲ್ಲಿ 40 ಕಾನೂನು ಪದವೀಧರರಿಗೆ ರೂ 13.41 ಲಕ್ಷ ಶಿಷ್ಯವೇತನ ಮಂಜೂರು ಮಾಡಲಾಗಿದೆ.

12. **ಬಿಸಿಎಂ ನಿಲಯಗಳ ಸುಧಾರಣೆ:**

ಬಿಸಿಎಂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ನಿಲಯಗಳಿಗೆ ಅತ್ಯಾವಶ್ಯಕವಾಗಿ ಬೇಕಾದ ಪಾತ್ರೆ, ಪೀಠೋಪಕರಣ, ಹಾಸಿಗೆ, ಹೊದಿಕೆ, ಕ್ರೀಡಾ ಸಾಮಗ್ರಿ, ಅನಿಲ ಒಲೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

13. **ಬಿಸಿಎಂ ನಿಲಯಗಳ ಕಟ್ಟಡ ದುರಸ್ತಿ ಮತ್ತು ನಿರ್ವಹಣೆ:**

ಜಿಲ್ಲೆಯಲ್ಲಿರುವ ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡಗಳಿಗೆ ಅವಶ್ಯವಿರುವ ವಾರ್ಷಿಕ ದುರಸ್ತಿ, ಕಂಪೌಂಡ್ ನಿರ್ಮಾಣ, ಶೌಚಾಲಯಗಳ ದುರಸ್ತಿ, ಬಾವಿ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

14. **ಕೌಶಲ್ಯ ಯೋಜನೆಯಲ್ಲಿ ತರಬೇತಿ:**

ಹಿಂದುಳಿದ ವರ್ಗಗಳ ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳಿಗೆ ಕಂಪ್ಯೂಟರ್, ನರ್ಸಿಂಗ್ ಮುಂತಾದ ಕೋರ್ಸುಗಳಲ್ಲಿ ತರಬೇತಿ ಕೊಡಿಸಿ ಸ್ಟೈಫಂಡ್ ಮಂಜೂರು ಮಾಡಿ ಸ್ವಯಂ ಉದ್ಯೋಗ ಕೈಗೊಳ್ಳಲು ನೆರವು ನೀಡಲಾಗುವುದು. 2017-18ನೇ ಸಾಲಿನಲ್ಲಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ತರಬೇತಿ ಭತ್ಯೆ 1688 ವಿದ್ಯಾರ್ಥಿಗಳಿಗೆ 102.98 ಲಕ್ಷ ವಿದ್ಯಾರ್ಥಿವೇತನ ಮಂಜೂರು ಮಾಡಲಾಗಿದೆ.

15. **<u>ಅಲೆಮಾರಿ/ ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನ ನೀಡಿಕೆ:</u>**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಿಕೆ, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ (ಮೆರಿಟ್) ವಿದ್ಯಾರ್ಥಿವೇತನ ನೀಡಲಾಗುತ್ತದೆ. 2017-18ನೇ ಸಾಲಿನಲ್ಲಿ 119 ವಿದ್ಯಾರ್ಥಿಗಳಿಗೆ ರೂ. 2.275 ಲಕ್ಷ ವಿದ್ಯಾರ್ಥಿವೇತನ ನೀಡಲಾಗಿದೆ.

16. **<u>ವಿವಿಧ ಜನಾಂಗದ ಸಮುದಾಯ ಭವನಗಳಿಗೆ ಸಹಾಯಧನ :</u>** :

ಈ ಯೋಜನೆಯಡಿ ವಿವಿಧ ಸಮುದಾಯದ ಸಮುದಾಯಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲಾಗುತ್ತಿದ್ದು 2017-18ನೇ ಸಾಲಿನಲ್ಲಿ 52 ಸಮುದಾಯ ಭವನಗಳಿಗೆ ರೂ. 328.75 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

17. **<u>ಡಿ. ದೇವರಾಜು ಅರಸು ಪ್ರತಿಭಾ ಪುರಸ್ಕರ</u>** :

2015-16ನೇ ಸಾಲಿನಿಂದ ಎಸ್.ಎಸ್.ಎಲ್.ಸಿ, ಪಿಯುಸಿಯಲ್ಲಿ 90 ಶೇ ಕ್ಕಿಂತ ಹಾಗೂ ಪದವಿ, ಸ್ನಾತಕೋತ್ತರ ಪದವಿಯಲ್ಲಿ ಶೇ 70% ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ತಲಾ ರೂ. 10,000/-, ಪಿಯುಸಿಯಲ್ಲಿ ವಿದ್ಯಾರ್ಥಿಗಳಿಗೆ ತಲಾ ರೂ. 15,000/-, ಪದವಿ ವಿದ್ಯಾರ್ಥಿಗಳಿಗೆ ತಲಾ ರೂ. 20,000/-,ವೃತ್ತಿಪರ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ತಲಾ ರೂ. 25,000/ ರಂತೆ ರೂ. 28.50 ಲಕ್ಷ ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರವನ್ನು ನೀಡಲಾಗಿದೆ. 2017-18 ನೇ ಸಾಲಿನಲ್ಲಿ 30 ಪದವಿ ವಿದ್ಯಾರ್ಥಿಗಳಿಗೆ 7.300/- ಲಕ್ಷ ಹಾಗೂ 122 ಎಸ್ಎಸ್ಎಲ್ಸಿ/ಪಿಯುಸಿ ವಿದ್ಯಾರ್ಥಿಗಳಿಗೆ 15.10 ಲಕ್ಷ ಒಟ್ಟು ರೂ 22.40 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

18. **<u>ವಿದೇಶಿ ವ್ಯಾಸಂಗ ವಿದ್ಯಾರ್ಥಿವೇತನ</u>**:

ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನವನ್ನು 2015-16ನೇ ಸಾಲಿನಿಂದ ಮಂಜೂರು ಮಾಡಲಾಗುತ್ತಿದ್ದು, ವಿದೇಶಗಳಲ್ಲಿ ಸ್ನಾತಕೋತ್ತರ ಪದವಿ/ಪಿಎಚ್.ಡಿ/ಸಂಶೋಧನೆ- ಸಂಬಂಧಪಟ್ಟ ಪದವಿ/ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ 10.00 ಲಕ್ಷ ವಿದ್ಯಾರ್ಥಿವೇತನ ನೀಡಲಾಗುತ್ತದೆ.

19. **<u>ಪಿ.ಹೆಚ್.ಡಿ ಪೆಲೋಶಿಪ್:</u>**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಪಿ.ಹೆಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ ಪೆಲೋಶಿಪ್, ಹಾಗೂ ಶುಲ್ಕ ವಿನಾಯಿತಿ ಮಂಜೂರು ಮಾಡಲಾಗುತ್ತದೆ. 2017-18ನೇ ಸಾಲಿನಲ್ಲಿ 3 ವಿದ್ಯಾರ್ಥಿಗಳಿಗೆ ರೂ 1.45 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

20. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು IAS, KAS ಹಾಗೂ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

2017-18ನೇ ಸಾಲಿನ ರಾಜ್ಯವಲಯ ಯೋಜನೆ ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಮಾರ್ಚ್ 2018

ಕ್ರ. ಸಂ	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	2017-18ನೇ ಸಾಲಿಗೆ ಬಿಡುಗಡೆಯಾದ ಅನುದಾನ	ಮಾರ್ಚ್ 2018ರ ಅಂತ್ಯದವರೆಗೆ ಖರ್ಚಾದ ಅನುದಾನ	ಶೇಕಡಾ ಪ್ರಗತಿ	ಭೌತಿಕ ಪ್ರಗತಿ
1	2	3	4	5	6
1	ಅಲೆಮಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ 2225-03-102-0-12	1.505	1.505	100%	97 ವಿದ್ಯಾರ್ಥಿಗಳು
2	ಅಲೆಮಾರಿ ಜನಾಂಗದವರಿಗೆ ಅರಿವು ಮೂಡಿಸುವ ಮಾಹಿತಿ ಶಿಬಿರ 2225-03-102-0-12	0.300	0.200	67%	-
3	ಅಲೆಮಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ 2225-03-277-2-51	0.77	0.77	100%	22 ವಿದ್ಯಾರ್ಥಿಗಳು
4	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ನೀಡಿಕೆ 2225-03-277-2-51	281.030	281.010	99.99%	13495 ವಿದ್ಯಾರ್ಥಿಗಳು
5	ಶುಲ್ಕ ವಿನಾಯಿತಿ ನೀಡಿಕೆ 2225-03-277-2-51	108.320	108.320	100%	3071 ವಿದ್ಯಾರ್ಥಿಗಳು
6	ನರ್ಸಿಂಗ್ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಿಕೆ 2225-03-277-2-51	16.875	16.88	100%	361 ವಿದ್ಯಾರ್ಥಿಗಳು
7	ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನ ನೀಡಿಕೆ 2225-03-277-2-51	1.020	1.02	100%	3 ವಿದ್ಯಾರ್ಥಿಗಳು

8	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ 2225-03-277-2-52	299.920	299.92	100.00%	35447 ವಿದ್ಯಾರ್ಥಿಗಳು
9	ಅಲೆಮಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ 2225-03-277-2-52	0.380	0.38	100.00%	51 ವಿದ್ಯಾರ್ಥಿಗಳು
10	ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-03-277-2-53				
	059	93.88	89.38	95.21%	451 ವಿದ್ಯಾರ್ಥಿಗಳು
	422	9.27	7.61	82.09%	
	423	5.72	3.78	66.08%	
	034	31.69	29.89	94.32%	
	ಒಟ್ಟು	**140.56**	**130.66**	**92.96%**	
11	ಡಾಟಾ ಎಂಟ್ರಿ ಆಪರೇಟರ್‌ಗಳ ವೇತನ 2225-03-277-3-11	8.82	7.58	85.94%	-
12	ವಿದ್ಯಾಸಿರಿ 2225-03-283-0-03	186.04	186.02	99.99%	3533 ವಿದ್ಯಾರ್ಥಿಗಳು
13	ಅಲೆಮಾರಿ ವಿದ್ಯಾಸಿರಿ 2225-03-283-0-03	15.14	15.135	100.00%	298 ವಿದ್ಯಾರ್ಥಿಗಳು
14	ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣ 2225-03-001-0-05	328.75	328.75	100%	52 ಸಮುದಾಯ ಭವನಗಳು
15	ನರ್ಸಿಂಗ್ ವಿದ್ಯಾರ್ಥಿಗಳಿಗೆ ಸೈಫಂಡ್ ನೀಡಿಕೆ 2225-03-277-2-37	102.98	102.98	100%	1688 ವಿದ್ಯಾರ್ಥಿಗಳು
16	ಪ್ರತಿಭಾ ಪುರಸ್ಕಾರ 2225-03-277-2-37	22.40	22.40	100%	158 ವಿದ್ಯಾರ್ಥಿಗಳು

17	ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ವ್ಯಾಸಂಗ ವೇತನ ನೀಡಿಕೆ 2225–03–277–2–37	1.45	1.45	100%	3 ವಿದ್ಯಾರ್ಥಿಗಳು
18	ವೃತ್ತಿ ಮಾರ್ಗದರ್ಶನ ಶಿಬಿರ 2225–03–277–2–37	2.25	1.25	56%	307 ವಿದ್ಯಾರ್ಥಿಗಳು
19	ಡಿಜಿಟಲ್ ಲೈಬ್ರೆರಿ ಸ್ಥಾಪಿಸುವ ಬಗ್ಗೆ 2225–03–277–2–37	5.025	5.01	99.70%	–
20	ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಕುರಿತು 2225–03–277–2–53	18.14	17.92	99%	–
21	ಕಟ್ಟಡ ದುರಸ್ತಿ 4225–03–277–2–06	40.00	39.98	100%	7 ವಿದ್ಯಾರ್ಥಿ ನಿಲಯಗಳು
22	ಕಟ್ಟಡ ನಿರ್ಮಾಣ 4225–03–277–2–06	399.80	399.80	100%	2 ಕಟ್ಟಡಗಳು
		1981.465	**1968.935**	**99%**	

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಉಡುಪಿ ಜಿಲ್ಲೆ.

2017-18ನೇ ಸಾಲಿನ ಜಿಲ್ಲಾವಲಯ ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಖರ್ಚು ಮಾಡಿದ ಅನುದಾನ	ಶೇಕಡಾ	ಸಾಧನೆ
1	2	3	4	5	6
1	ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-26	928.45	840.35	91%	81 ಸಿಬ್ಬಂದಿ 2506 ವಿದ್ಯಾರ್ಥಿಗಳು
2	ಇತರೆ ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯ್ತಿಗಳು 2225-00-103-0-28	853.75	853.60	99.98%	16809 ವಿದ್ಯಾರ್ಥಿಗಳು
3	ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ 2225-00-103-0-39	43.00	39.01	91%	8 ಸಿಬ್ಬಂದಿಗಳು
4	ಕಟ್ಟಡಗಳ ವೆಚ್ಚ ಮತ್ತು ನಿರ್ವಹಣೆ 2225-00-103-0-40	30.00	29.99	100%	13 ನಿಲಯಗಳು
5	ದೇವರಾಜು ಅರಸು ಜನ್ಮ ದಿನಾಚರಣೆ 2225-00-103-0-56	1.00	0.92	92%	1 ಕಾರ್ಯಕ್ರಮ
6	ವಕೀಲರಿಗೆ ಪ್ರೋತ್ಸಾಹಧನ 2225-03-103-0-58	13.86	13.41	97%	40 ಕಾನೂನು ಪದವೀಧರರು
	ಒಟ್ಟು	**1870.06**	**1777.28**	**95%**	

	ತಾಲೂಕು ಪಂಚಾಯತ್ ಕಾರ್ಯಕ್ರಮಗಳು				
7	ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ 2225-00-103-0-66	157.00	156.97	100%	13970 ವಿದ್ಯಾರ್ಥಿಗಳು
8	ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72	15.00	15.00	100%	27 ನಿಲಯಗಳು
9	ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾ ಕಚೇರಿಗಳು 2225-00-103-0-74	20.92	14.73	70%	1 ಸಿಬ್ಬಂಧಿಗಳು
10	ಹೊಲಿಗೆ ತರಬೇತಿ ಕೇಂದ್ರಗಳು 2225-00-103-0-78	3.57	1.35	38%	8 ವಿದ್ಯಾರ್ಥಿಗಳು
11	ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕಗಳು 2225-00-103-0-79	16.31	5.03	31%	302 ವಿದ್ಯಾರ್ಥಿಗಳು
	ಒಟ್ಟು	**212.80**	**193.08**	**91%**	
	ಒಟ್ಟು (ಜಿ.ಪಂ+ತಾ.ಪಂ.)	**2082.86**	**1970.36**	**95%**	

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ಇಲಾಖೆಯ ಕಾರ್ಯಕ್ರಮಗಳ ವಿವರ

1) **ಶಾದಿಮಹಲ್/ಸಮುದಾಯ ಭವನ ನಿರ್ಮಾಣ:**

ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ/ ಸಮುದಾಯಭವನಗಳ ನಿರ್ಮಾಣಕ್ಕಾಗಿ ಮುಂದೆ ಬಂದಲ್ಲಿ ಪ್ರತಿ ಸಮುದಾಯ ಭವನ ನಿರ್ಮಾಣಕ್ಕಾಗಿ ಜಿಲ್ಲಾ ಕೇಂದ್ರಗಳಿಗೆ ಗರಿಷ್ಠ ರೂ. 100.00 ಲಕ್ಷಗಳು ಮೀರದಂತೆ ಮತ್ತು ಇತರೆ ಸ್ಥಳಗಳಲ್ಲಿ ಗರಿಷ್ಠ ರೂ. 50.00 ಲಕ್ಷಗಳಿಗೆ ಮೀರದಂತೆ ಅನುದಾನವನ್ನು ಮಂಜೂರು ಮಾಡಲಾಗುವುದು. 2017-18ನೇ ಸಾಲಿನಲ್ಲಿ ರೂ 3 ಸಮುದಾಯ ಭವನಕ್ಕೆ ರೂ 85.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

2) **ಬಿದಾಯಿ ಯೋಜನೆ:-**

ಕರ್ನಾಟಕ ರಾಜ್ಯದ ಬಿಪಿಎಲ್/ಅಂತ್ಯೋದಯ ಕಾರ್ಡ್ ಹೊಂದಿರುವ ಅಲ್ಪಸಂಖ್ಯಾತ ಮುಸ್ಲಿಂ, ಕ್ರಿಶ್ಚಿಯನ್, ಜೈನ್ ಸಮುದಾಯದ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರ ಮದುವೆ ಕಾರ್ಯಕ್ಕಾಗಿ ವೈಯುಕ್ತಿಕ ಹಾಗೂ ಸಾಮೂಹಿಕ ಮದುವೆಯ ನಿಮಿತ್ತ ರೂ. 50,000/-ಗಳ ಸಹಾಯಧನ ನೀಡಲು ಸರ್ಕಾರ ಆದೇಶ ಹೊರಡಿಸಲಾಗಿದ್ದು, ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2017-18ನೇ ಸಾಲಿನಲ್ಲಿ 288 ಅಭ್ಯರ್ಥಿಗಳಿಗೆ ರೂ 144.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

3) **ಜೈನ್ ದೇವಾಲಯ (ಬಸದಿ)ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರ:-**

ಕರ್ನಾಟಕ ರಾಜ್ಯಾದ್ಯಂತ ಜೈನ್ ಅಲ್ಪಸಂಖ್ಯಾತರ ಸಮುದಾಯವನ್ನು ಪ್ರೋತ್ಸಾಹಿಸುವ ಉದ್ದೇಶದಲ್ಲಿ ಜೈನ್ ದೇವಾಲಯ(ಬಸದಿ)ಗಳ ನವೀಕರಣ/ದುರಸ್ಥಿ/ಜೀರ್ಣೋದ್ಧಾರಕ್ಕಾಗಿ ಅರ್ಹ ಜೈನ್ ದೇವಾಲಯ(ಬಸದಿ)ಗೆ ಅಂದಾಜು ವೆಚ್ಚದ ಶೇ.50% ರಷ್ಟು ಅಥವಾ ಗರಿಷ್ಟ ರೂ10.00 ಲಕ್ಷದ ವರೆಗೆ ಅನುದಾನ ನೀಡಲಾಗುವುದು. 2017-18 ನೇ ಸಾಲಿನಲ್ಲಿ ರೂ. 9.85 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

4) **ಕ್ರೈಸ್ತ ಸಮುದಾಯದ ಅಭಿವೃದ್ಧಿ:-**

- ಚರ್ಚ್ ನವೀಕರಣ ಮತ್ತು ದುರಸ್ತಿಗಾಗಿ ಸಹಾಯಧನ – ರೂ.10.00 ಲಕ್ಷದಿಂದ ರೂ.50.00 ಲಕ್ಷಗಳವರೆಗೆ
- ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ – ರೂ.50.00 ಲಕ್ಷದಿಂದ ರೂ.100.00 ಲಕ್ಷಗಳವರೆಗೆ
- ಅನಾಥಾಶ್ರಮ/ವೃದ್ಧಾಶ್ರಮಗಳಿಗೆ ಸಹಾಯಧನ – ರೂ.5.00 ಲಕ್ಷಗಳವರೆಗೆ :
- ಉಡುಪಿ ಜಿಲ್ಲೆಯಲ್ಲಿರುವ ಅನಾಥಾಲಯಗಳ ವಿವರ: 1. ಬಿ.ಇ.ಎಂ. ಅನಾಥಾಲಯ, ಉಡುಪಿ (ಬಾಲಕರ)
  2. ಸೈಂಟ್ ಫಿಲೋಮಿನಾ ಅನಾಥಾಲಯ, ಕೆಮ್ಮಣ್ಣು.
  3. ಸೈಂಟ್ ಜೋಸೆಫ್ ಅನಾಥಾಲಯ, ಕುಂದಾಪುರ

5) **ಮದರಸಗಳ ಆಧುನೀಕರಣ:**

ಕರ್ನಾಟಕ ರಾಜ್ಯದಲ್ಲಿ ನಡೆಸಲಾಗುತ್ತಿರುವ ಮುಸ್ಲಿಂ ಸಮುದಾಯದ ನೋಂದಾಯಿತ ಮದರಸಗಳನ್ನು ಆಧುನೀಕರಣಗೊಳಿಸಲು ಹಾಗೂ ಈ ಮದರಸಗಳಿಗೆ ಮೂಲಸೌಕರ್ಯವನ್ನು ಕಲ್ಪಿಸಲು ಮತ್ತು ಈ ಮದ್ರಸಾಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಔಪಚಾರಿಕ ಹಾಗೂ ಗಣಕೀಕೃತ ಶಿಕ್ಷಣವನ್ನು ನೀಡಲು ಯೋಜನೆಯನ್ನು 2016-17ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ. 7 ಶಿಕ್ಷಕರಿಗೆ 10 ತಿಂಗಳಿಗೆ ರೂ. 4.20 ಲಕ್ಷ, ಗ್ರಂಥಾಲಯಕ್ಕೆ 1 ಲಕ್ಷ, ಕಂಪ್ಯೂಟರ್ ಯುಪಿಸ್ ಹಾಗೂ ಪ್ರಿಂಟರ್‌ಗೆ 2 ಲಕ್ಷ, ಮೂಲಭೂತ ಸೌಕರ್ಯಗಳಿಗೆ 5 ಲಕ್ಷ. ಒಟ್ಟು ರೂ. 12.20 ಲಕ್ಷ ಮಂಜೂರು ಮಾಡಲಾಗುವುದು. 2017-18ನೇ ಸಾಲಿನಲ್ಲಿ ಎರಡು ಮದ್ರಸಾಗಳಿಗೆ ರೂ. 15.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

6) **ಕೌಶಲ್ಯ ಅಭಿವೃದ್ಧಿ ಯೋಜನೆ.**

ಅಲ್ಪಸಂಖ್ಯಾತರ ಕ್ರಿಶ್ಚಿಯನ್ ನಿರುದ್ಯೋಗಿ ಅಭ್ಯರ್ಥಿಗಳಿಗೆ ವಿವಿಧ ಕಂಪ್ಯೂಟರ್, ಕಾಲ್‌ಸೆಂಟರ್, ಆನಿಮೇಷನ್, ಸಿ.ಇ.ಟಿ, ಬಿಪಿಓ ತರಬೇತಿಗಳನ್ನು ಸರ್ಕಾರದಿಂದ ಪಾರದರ್ಶಕ ಕಾಯ್ದೆಯಡಿ ವಿನಾಯಿತಿ ಪಡೆದ ಸಂಸ್ಥೆಗಳಿಂದ ನೀಡಲಾಗುವುದು. ತರಬೇತಿಯನ್ನು ಗರಿಷ್ಠ 3 ರಿಂದ 6 ತಿಂಗಳ ಅವಧಿಗೆ ಒದಗಿಸುತ್ತಿದ್ದು ಮಾಸಿಕ ರೂ. 500/-ರಂತೆ ಶಿಷ್ಯವೇತನ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ 2.00 ಲಕ್ಷದ ಒಳಗಿರಬೇಕು.

7) **ಜಿ.ಎನ್.ಎಂ ಮತ್ತು ಬಿ.ಎಸ್ಸಿ. ನರ್ಸಿಂಗ್ ತರಬೇತಿ:**

ಜಿ.ಎನ್.ಎಂ, ಬಿ.ಎಸ್ಸಿ ನರ್ಸಿಂಗ್ ಹಾಗೂ ಪ್ಯಾರಾಮೆಡಿಕಲ್ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ತರಬೇತಿ ಶುಲ್ಕ ರೂ. 35000 ರಂತೆ ಪ್ರತಿ ವರ್ಷ (ಕೋರ್ಸು ಮುಗಿಯುವ ವರೆಗೆ) ಇಲಾಖೆಯಿಂದ ಮಂಜೂರು ಮಾಡಲಾಗುವುದು. 2017-18ನೇ ಸಾಲಿನಲ್ಲಿ 104 ವಿದ್ಯಾರ್ಥಿಗಳಿಗೆ ರೂ. 36.40 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ..

8) **ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ:**

ಕಾನೂನು ಪದವಿಯನ್ನು ಪಡೆದಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ 4 ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಎಲ್.ಎಲ್.ಬಿ ಪ್ರ್ಯಾಕ್ಟಿಸ್ ಮಾಡುವವರಿಗೆ ಮಾತ್ರ. ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.4000/- ರಂತೆ ತರಬೇತಿ ಭತ್ಯೆ ನೀಡಲಾಗುವುದು. ಈ ಯೋಜನೆಗೆ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ 3.50 ಲಕ್ಷದ ಒಳಗಿರಬೇಕು. 2017-18 ನೇ ಸಾಲಿನಲ್ಲಿ 6 ಕಾನೂನು ಪದವೀಧರರಿಗೆ ರೂ 1.41 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

9) **ಐಟಿಐ ಮತ್ತು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಸ್ಟೈಫಂಡ್**:

ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಕೈಗಾರಿಕಾ ಸಂಸ್ಥೆಗಳಲ್ಲಿ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಐಟಿಐ ಮತ್ತು ಡಿಪ್ಲೋಮಾ ತರಗತಿಗಳಲ್ಲಿ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ. 150/- ರಂತೆ 10 ತಿಂಗಳಿಗೆ ಸ್ಟೈಫಂಡ್ ನೀಡಲಾಗುತ್ತಿದೆ. ಅರ್ಜಿಯನ್ನು ತಾಲೂಕು ಬಿ.ಸಿ.ಎಂ ಕಛೇರಿಯಿಂದ ಪಡೆಯಬಹುದು. ಈ ಯೋಜನೆಗೆ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ 1.00 ಲಕ್ಷದ ಒಳಗಿರಬೇಕು. 2016-17 ನೇ ಸಾಲಿನಲ್ಲಿ 63 ವಿದ್ಯಾರ್ಥಿಗಳಿಗೆ 0.48 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ. 2017-18ನೇ ಸಾಲಿನಲ್ಲಿ 58 ವಿದ್ಯಾರ್ಥಿಗಳಿಗೆ 0.50 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

10) **ವಿದ್ಯಾರ್ಥಿವೇತನ ಕಾರ್ಯಕ್ರಮಗಳು:**

a. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:

1ನೇ ತರಗತಿಯಿಂದ 10ನೇ ತರಗತಿಯವರಿಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 1,000 ರಿಂದ ರೂ. 5,000 ವರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ 1.00 ಲಕ್ಷದ ಒಳಗಿರಬೇಕು.

b. ಮೆಟ್ರಿಕ್ ನಂತರ ವಿದ್ಯಾರ್ಥಿವೇತನ:

ಪದವಿಪೂರ್ವ, ಪದವಿ ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 6,000 ರಿಂದ ರೂ. 15,000 ವರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 2.00 ಲಕ್ಷದ ಒಳಗಿರಬೇಕು.

c. ಮೆರಿಟ್-ಕಮ್-ಮೀನ್ಸ್ ವಿದ್ಯಾರ್ಥಿವೇತನ:

ತಾಂತ್ರಿಕ ಹಾಗೂ ವೃತ್ತಿಪರ ವಿವಿಧ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 10,000 ರಿಂದ ರೂ. 30,000 ವರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ. 2.50 ಲಕ್ಷದ ಒಳಗಿರಬೇಕು.

d. ಶುಲ್ಕ ಮರುಪಾವತಿ:

ಪದವಿ ಪೂರ್ವ, ಪದವಿ ಮತ್ತು ಸ್ನಾತಕೋತ್ತರ ಹಂತದಲ್ಲಿ ಬರುವ ವೃತ್ತಿಪರ ಹಾಗೂ ತಾಂತ್ರಿಕ, ಎಂ.ಫಿಲ್ ಮತ್ತು ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸವನ್ನು ಮುಂದುವರಿಸಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಕೇಂದ್ರ ಸರ್ಕಾರದ ಮೆಟ್ರಿಕ್ ನಂತರದ ಹಾಗೂ ಮೆರಿಟ್-ಕಂ-ಮೀನ್ಸ್ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹೊಂದಾಣಿಕೆ ಮೊತ್ತವನ್ನು ಈ ಯೋಜನೆಯಲ್ಲಿ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಪ್ರತ್ಯೇಕ ಅರ್ಜಿ ಇರುವುದಿಲ್ಲ.

e. ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಕಲಿಕಾ ಸಾಮಾಗ್ರಿ:

ಮೆರಿಟ್-ಕಂ-ಮೀನ್ಸ್ ಆಧಾರಿತ ವಿದ್ಯಾರ್ಥಿವೇತನದಲ್ಲಿ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಒಂದು ಬಾರಿಗೆ ಪುಸ್ತಕ ಮತ್ತು ಕಲಿಕಾ ಸಾಮಾಗ್ರಿ ಪಡೆದುಕೊಳ್ಳಲು ರೂ. 10,000 ರಂತೆ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಪ್ರತ್ಯೇಕ ಅರ್ಜಿ ಇರುವುದಿಲ್ಲ. 2017-18ನೇ ಸಾಲಿನಲ್ಲಿ ರೂ. 1.70 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

f. ವಿದ್ಯಾಸಿರಿ ಯೋಜನೆ:

ಯಾವುದೇ ಇಲಾಖೆಯ ಸರ್ಕಾರಿ/ಸರ್ಕಾರಿ ಅನುದಾನಿತ ವಿದ್ಯಾರ್ಥಿನಿಲಯ/ವಸತಿ ಕಾಲೇಜುಗಳಲ್ಲಿ, ಪ್ರವೇಶದೊರೆಯದೆ ಹಾಗೂ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ, ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗೆ ಸಹಾಯ ಒದಗಿಸಲು ಪ್ರತಿ ತಿಂಗಳಿಗೆ ರೂ.1,500/- ರಂತೆ ಶೈಕ್ಷಣಿಕೆ ಅವಧಿಯ 10 ತಿಂಗಳಿಗೆ ವಿದ್ಯಾರ್ಥಿಗಳ ಖಾತೆಗೆ ಅನ್‌ಲೈನ್ ಮೂಲಕ ಜಮಾ ಮಾಡಲಾಗುವುದು. ಈ ಯೋಜನೆಯಡಿ ಸಹಾಯಧನ ಆಯಾ ವರ್ಷಕ್ಕೆ ಲಭ್ಯವಿರುವ ಅನುದಾನ ಹಾಗೂ ಭೌತಿಕ ಗುರಿಗೆ ತಕ್ಕಂತೆ ಸ್ವೀಕೃತವಾದ ಅರ್ಹ ಅರ್ಜಿಗಳಲ್ಲಿ ಪಡೆದ ಅಂಕ/ಕೋರ್ಸುಗಳ ಆಧಾರದ ಮೇಲೆ ಮಂಜೂರು ಮಾಡಲಾಗವುದು. 2017-18ನೇ ಸಾಲಿನಲ್ಲಿ 431 ವಿದ್ಯಾರ್ಥಿಗಳಿಗೆ 401 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

g. ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ:

ರಾಜ್ಯದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು ವಿದೇಶದ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ, ಪಿ.ಎಚ್.ಡಿ. ಮತ್ತು ಡೆಂಟಲ್ ಕೋರ್ಸ್ ಮುಂತಾದವುಗಳನ್ನು ವ್ಯಾಸಂಗ ಮಾಡಲು 2 ವರ್ಷಗಳಿಗೆ ಗರಿಷ್ಠ ರೂ.10ಲಕ್ಷ ಪ್ರತಿ ವರ್ಷಕ್ಕೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಗೆ ಅರ್ಜಿಯನ್ನು ನಿರ್ದೇಶನಾಲಯದಿಂದ ಜೂನ್-ಜುಲೈ ತಿಂಗಳಿನಲ್ಲಿ ಆಹ್ವಾನಿಸಲಾಗುವುದು.

h. ಪಿ.ಎಚ್.ಡಿ ಹಾಗೂ ಎಂ.ಫಿಲ್ ವಿದ್ಯಾರ್ಥಿಗಳಿಗೆ ಫೆಲೋಶಿಪ್:

ಅಲ್ಪಸಂಖ್ಯಾತರ ವಿಷಯಗಳ ಬಗ್ಗೆ ವಿಶ್ವ ವಿದ್ಯಾನಿಲಯಗಳಲ್ಲಿ ಪಿ.ಎಚ್.ಡಿ ಹಾಗೂ ಎಂ.ಫಿಲ್ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರತಿ ಮಾಹೆಯಾನ ರೂ.25,000/- ಗಳನ್ನು ಹಾಗೂ ಪ್ರತಿ ವರ್ಷ ರೂ.10,000/- ನಿರ್ವಹಣಾ ವೆಚ್ಚವನ್ನು ಫೆಲೋಶಿಪ್ ಮೂಲಕ ನೀಡಲಾಗುವುದು. ಯೋಜನೆಗೆ ಅರ್ಜಿಯನ್ನು ನಿರ್ದೇಶನಾಲಯದಿಂದ ಜನವರಿ ಹಾಗೂ ಮೇ ತಿಂಗಳಿನಲ್ಲಿ ಆಹ್ವಾನಿಸಲಾಗುವುದು.

i. ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ:

ರಾಜ್ಯದಲ್ಲಿ ಹಿಂದಿನ ಸಾಲಿನ **SSLC** ಹಾಗೂ **PUC**ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಮಾಹಿತಿಯನ್ನು ಆಯಾ ಬೋರ್ಡ್‌ನಿಂದ ಪಡೆದು, **SSLC**ಯ 250 ವಿದ್ಯಾರ್ಥಿಗಳಿಗೆ ತಲಾ ರೂ.10,000/- ಹಾಗೂ **PUC** 250 ವಿದ್ಯಾರ್ಥಿಗಳಿಗೆ ತಲಾ ರೂ.20,000/-ಗಳ ಪ್ರೋತ್ಸಾಹಧನವನ್ನು ನಿರ್ದೇಶನಾಲಯದಿಂದ ಮಂಜೂರು ಮಾಡಲಾಗುವುದು. ಈ ಯೋಜನೆಗೆ ಪ್ರತ್ಯೇಕ ಅರ್ಜಿ ಇರುವುದಿಲ್ಲ.

11) **ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ:**

ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮ ಮಣಿಪಾಲದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 50 ಸಂಖ್ಯಾಬಲದ 01 ಮೆಟ್ರಿಕ್ ನಂತರದ ಬಾಲಕಿಯರ ಹಾಗೂ ಉಡುಪಿಯಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿದೆ. ಈ ನಿಲಯದಲ್ಲಿ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

- ಪದವಿ ಪೂರ್ವ ಕೋರ್ಸಿನಿಂದ ಸ್ನಾತಕೋತ್ತರ ಪದವಿಗಳವರೆಗೆ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ.
- ಊಟ ಮತ್ತು ಉಪಹಾರ ವ್ಯವಸ್ಥೆ, ಸುಸಜ್ಜಿತ ಕೊಠಡಿಗಳು, ಉತ್ತಮ ಗ್ರಂಥಾಲಯ
- ಪ್ರತಿ ವಿದ್ಯಾರ್ಥಿಗೂ ಬೆಡ್, ಕಾಟ್ ಹಾಗೂ ಹೊದಿಕೆಗಳು, ಕ್ರೀಡಾ ಸಾಮಾಗ್ರಿಗಳು, ಪ್ರಥಮ ಚಿಕಿತ್ಸಾ ಕಿಟ್

2017-18ನೇ ಸಾಲಿನ ಜಿಲ್ಲಾವಲಯ ಯೋಜನೆ / ಯೋಜನೇತರ (ಅಲ್ಪಸಂಖ್ಯಾತರ) ಕಾರ್ಯಕ್ರಮಗಳ ಪ್ರಗತಿ ವರದಿ

(ರೂ. ಲಕ್ಷಗಳಲ್ಲಿ) ಮಾರ್ಚ್ 2018

ಕ್ರ.ಸಂ	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ	ಶೇಕಡಾ ಸಾಧನೆ	ಸಾಧನೆ
1	2	3	4	5	6
	ಜಿಲ್ಲಾ ವಲಯ ಯೋಜನೆ ಕಾರ್ಯಕ್ರಮಗಳು				
1	ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು 2225-00-103-0-34	15.88	14.97	94%	1 ಸಿಬ್ಬಂದಿ 40 ವಿದ್ಯಾರ್ಥಿಗಳು
2	ಅಲ್ಪಸಂಖ್ಯಾತರಿಗಾಗಿ ತರಬೇತಿ ಮತ್ತು ಕಾನೂನು ಪದವೀಧರರಿಗೆ ಶಿಷ್ಯವೇತನ 2225-00-103-0-44	1.41	1.41	100%	6 ಕಾನೂನು ಪದವೀಧರರು
3	ಕಾರ್ಯಕಾರಿ ಸಿಬ್ಬಂಧಿ 2225-00-103-0-51	10.98	8.29	76%	1 ಸಿಬ್ಬಂದಿ
4	ಔದ್ಯಮಿಕ ತರಬೇತಿ ಸಂಸ್ಥೆ/ ಡಿಪ್ಲೊಮ ಕೋರ್ಸುಗಳ ಪ್ರಶಿಕ್ಷುಗಳಿಗೆ ಶಿಷ್ಯವೇತನ- ಅಲ್ಪಸಂಖ್ಯಾತರು 2225-00-103-0-84	0.50	0..48	96%	58 ವಿದ್ಯಾರ್ಥಿಗಳು
1	ಅಲ್ಪಸಂಖ್ಯಾತರ ಅನಾಥಾಲಯಗಳಿಗೆ ಸಹಾಯಧನ 2225-00-103-0-49	11.25	5.95	53%	124 ವಿದ್ಯಾರ್ಥಿಗಳು
2	ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-50	1.87	1.14	61%	16 ವಿದ್ಯಾರ್ಥಿಗಳು
	ಒಟ್ಟು	**41.89**	**32.24**	**77%**	

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಉಡುಪಿ ಜಿಲ್ಲೆ.

2017-18ನೇ ಸಾಲಿನ ರಾಜ್ಯವಲಯ ಯೋಜನೆ (ಅಲ್ಪಸಂಖ್ಯಾತರ) ಕಾರ್ಯಕ್ರಮಗಳ ಪ್ರಗತಿ ವರದಿ (ರೂ. ಲಕ್ಷಗಳಲ್ಲಿ)

ಮಾರ್ಚ್ 2018

ಕ್ರ.ಸಂ	ಕಾರ್ಯಕ್ರಮಗಳ ಹೆಸರು ಮತ್ತು ಲೆಕ್ಕ ಶೀರ್ಷಿಕೆ	ಬಿಡುಗಡೆ ಯಾದ ಅನುದಾನ	ಮಾರ್ಚ್ 2018ರ ಅಂತ್ಯದ ವರೆಗಿನ ಖರ್ಚು	ಶೇಕಡಾ ಸಾಧನೆ	ಭೌತಿಕ ಸಾಧನೆ
1	2	3	4	5	6
	ಸಮುದಾಯ ಭವನ ಮತ್ತು ಚರ್ಚ್ ದುರಸ್ತಿ 2225-03-102-0-14	284.50	244.50	86%	12 ಚರ್ಚ್ ದುರಸ್ತಿ ಮತ್ತು ಸ್ಮಶಾನ ಅಭಿವೃದಿ 5 ಸಮುದಾಯ ಭವನ
2	ಅಲ್ಪಸಂಖ್ಯಾತರ ಶಾದಿಮಹಲ್/ಸಮುದಾಯ ಭವನ ನಿರ್ಮಾಣ 2225-03-277-2-48	60.00	60.00	100%	2 ಸಮುದಾಯ ಭವನ
3	ಜೈನ ಬಸದಿಗಳ ಜೀರ್ಣೋದ್ಧಾರಕ್ಕೆ ಸಹಾಯಧನ 2225-03-277-2-82	9.85	9.85	100%	1 ಜೈನ್ ಬಸದಿ ದುರಸ್ಥಿ
4	ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಅರಿವು ಮೂಡಿಸುವ ಮಾಹಿತಿ ಕೇಂದ್ರ 2250-00-102-5-01	11.94	11.91	100%	-
5	ಮುಸ್ಲಿಂ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರಿಗೆ ಮದುವೆ ಕಾರ್ಯಗಳಿಗೆ ಸಹಾಯಧನ 2225-03-800-0-07	90.00	90.00	100%	180 ಅಭ್ಯರ್ಥಿಗಳು
6	ಕ್ರಿಶ್ಚಿಯನ್ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರಿಗೆ ಮದುವೆ ಕಾರ್ಯಗಳಿಗೆ ಸಹಾಯಧನ 2225-03-102-0-14	51.50	51.50	100%	103 ಅಭ್ಯರ್ಥಿಗಳು

7	ಜೈನ್ ಹೆಣ್ಣು ಮಕ್ಕಳಿಗೆ/ವಿಚ್ಛೇದಿತ ಮಹಿಳೆ ಮತ್ತು ವಿಧವೆಯರಿಗೆ ಮದುವೆ ಕಾರ್ಯಗಳಿಗೆ ಸಹಾಯಧನ 2225-03-277-2-82	2.50	2.50	1008%	5 ಅಭ್ಯರ್ಥಿಗಳು
8	ಅಲ್ಪಸಂಖಾತರ ಕಲ್ಯಾಣ ಕಚೇರಿ ನಿರ್ವಹಣೆ 2225-03-001-0-03	2.30	2.30	1008%	
9	ವಿದ್ಯಾರ್ಥಿನಿಲಯಗಳಿಗೆ ತಟ್ಟೆ, ಲೋಟ, ಕ್ರೀಡಾ ಸಾಮಗ್ರಿ ಖರೀದಿ 2225-03-277-2-64	1.70	1.66	99%	
10	ಮುಖ್ಯಮಂತ್ರಿ ಅಭಿವೃದ್ಧಿ ಯೋಜನೆಯಡಿ ನರ್ಸಿಂಗ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅನುದಾನ 4225-03-277-2-10	9.45	9.45	100%	27 ವಿದ್ಯಾರ್ಥಿಗಳು
11	ಕ್ರೈಸ್ತ ಅಭಿವೃದ್ಧಿ ಯೋಜನೆಯಡಿ ನರ್ಸಿಂಗ್ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅನುದಾನ 2225-03-102-0-14	45.15	45.15	100%	129 ಅಭ್ಯರ್ಥಿಗಳು
12	ವಿದ್ಯಾಸಿರಿ 2225-03-102-0-14	4.3.50	43.50	100%	290 ವಿದ್ಯಾರ್ಥಿಗಳು
13	ವಿದ್ಯಾಸಿರಿ 2225-03-277-2-91	20.00	19.95	100%	133 ವಿದ್ಯಾರ್ಥಿಗಳು
14	ವಿದ್ಯಾಸಿರಿ 2225-03-277-2-82	1.20	1.20	100%	8 ವಿದ್ಯಾರ್ಥಿಗಳು
15	ಮುಖ್ಯಮಂತ್ರಿ ಅಭಿವೃದ್ಧಿ ಯೋಜನೆಯಡಿ ಕಾಲೋನಿಗಳ ಮೂಲಭತ ಸೌಕರ್ಯಗಳ ಅಭಿವೃದ್ಧಿ ಯೋಜನೆ 4225-03-277-2-10	550.00	550.00	100%	

16	ಮದ್ರಸದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸಹಾಯನುದಾನ (2225-03-102-3-10) (103)				
17	ವಕ್ಫ್ ಮಂಡಳಿ ಮತ್ತು ಸಂಬಂಧಿತ ಇತರೆ ಚಟುವಟಿಕೆಗಳು- ಅಲ್ಪಸಂಖ್ಯಾತರ ಕಚೇರಿ ಕಟ್ಟಡ ನಿರ್ಮಿಸುವ ಕುರಿತು 2250-00-102-5-02	65.34	65.34	100%	
	ಒಟ್ಟು	**1201.59**	**1159.49**	**97%**	

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಹಿಳೆಯರ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಜಿಲ್ಲಾ ಪಂಚಾಯತ್‌ನ ಆಡಳಿತ ಮತ್ತು ನಿರ್ದೇಶನದಡಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳು ಈ ಕೆಳಗಿನಂತಿವೆ.

1. **ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್) ಮತ್ತು ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ**

ಜಿಲ್ಲೆಯಲ್ಲಿ 4 ಶಿಶು ಅಭಿವೃದ್ಧಿ ಯೋಜನೆಗಳಿವೆ ವಿವರ ಈ ಕೆಳಗಿನಂತಿದೆ.

ಕ್ರ.ಸಂ	ತಾಲ್ಲೂಕು	ಯೋಜನೆ	ಅಂಗನವಾಡಿ ಕೇಂದ್ರ	ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ	ಅಂಗನವಾಡಿ ಸಹಾಯಕಿಯರ ಸಂಖ್ಯೆ
1	ಉಡುಪಿ	ಶಿಶು ಅಭಿವೃದ್ಧಿ ಯೋಜನೆ ಉಡುಪಿ	274	274	274
2		ಶಿಶು ಅಭಿವೃದ್ಧಿ ಯೋಜನೆ ಬ್ರಹ್ಮಾವರ	275	275	275
3	ಕುಂದಾಪುರ	ಶಿಶು ಅಭಿವೃದ್ಧಿ ಯೋಜನೆ ಕುಂದಾಪುರ	412	412	412
4	ಕಾರ್ಕಳ	ಶಿಶು ಅಭಿವೃದ್ಧಿ ಯೋಜನೆ ಕಾರ್ಕಳ	230	230	230
ಒಟ್ಟು			**1191**	**1191**	**1191**

2. **ಸೇವೆಗಳ ವಿವರ ಈ ಕೆಳಗಿನಂತಿದೆ.**

1. ಅಂಗನವಾಡಿ ಕೇಂದ್ರಗಳಲ್ಲಿ 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳಿಗೆ, ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆ,
2. 3 ರಿಂದ 6 ವರ್ಷದೊಳಗಿನ ಮಕ್ಕಳಿಗೆ – ಶಾಲಾಪೂರ್ವ ಶಿಕ್ಷಣ ಆರೋಗ್ಯ ಸೇವೆಗಳು, ಪೂರಕ ಪೌಷ್ಠಿಕ ಆಹಾರ ವಿತರಣೆ, ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ ಮೂರು ದಿನ ಹಾಲು ವಿತರಣೆ
3. ಗರ್ಭಿಣಿ ಬಾಣಂತಿಯರಿಗೆ ಪೌಷ್ಠಿಕತೆಯ ಬಗ್ಗೆ ಪ್ರತಿ ತಿಂಗಳು ಪೌಷ್ಠಿಕ ಆಹಾರ ಶಿಬಿರ ಏರ್ಪಡಿಸುವುದು.
4. ಪ್ರತಿ 2 ತಿಂಗಳಿಗೊಮ್ಮೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ 6 ತಿಂಗಳಿಂದ 6 ವರ್ಷದ ಮಕ್ಕಳು ಹಾಗೂ ಗರ್ಭಿಣಿ, ಬಾಣಂತಿಯರಿಗೆ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ.
5. ಪ್ರತಿ ಅಂಗನವಾಡಿಗಳಲ್ಲಿ ಜನನಿ ಸುರಕ್ಷಾ, ಪ್ರಸೂತಿ ಆರೈಕೆ ಬಗ್ಗೆ ಮಾಹಿತಿ ನೀಡಲಾಗುತ್ತದೆ.
6. ಪ್ರತಿ ತಿಂಗಳು ತಾಯಂದಿರ ಸಭೆ ಮಾಡಿ ಐಸಿಡಿಎಸ್ ಯೋಜನೆಗಳ ಬಗ್ಗೆ ಅರಿವು ನೀಡುವುದು.
7. ಅಂಗನವಾಡಿಗಳಲ್ಲಿ ಕಿಶೋರಿಯರಿಗೆ ಕಬ್ಬಿಣಾಂಶ ಸತ್ವವುಳ್ಳ ಮಾತ್ರೆ, ಮಾನಸಿಕ, ದೈಹಿಕ ಆರೋಗ್ಯ, ಭವಿಷ್ಯದ ಜೀವನಕ್ಕೆ ಅಣಿಗೊಳಿಸಲು ಕಿಶೋರಿ ಶಕ್ತಿ ತರಬೇತಿ ನೀಡುವುದಲ್ಲದೆ ಇಲಾಖೆಯ ಯೋಜನೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳಲಾಗುತ್ತಿದೆ ಹಾಗೂ ವರ್ಷದಲ್ಲಿ ಪತ್ರಿ ಅಂಗನವಾಡಿ ಕೇಂದ್ರದಲ್ಲಿ 4

ಜನ ಕಿಶೋರಿಯರಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆ ತಾಯಿ ಮಗುವಿನ ಸುರಕ್ಷತೆಯ ಬಗ್ಗೆ ಶಿಕ್ಷಣ, ಕಡಿಮೆ ತೂಕದ ಅಪೌಷ್ಟಿಕ ಮಕ್ಕಳನ್ನು ಗುರುತಿಸಿ ಆರೋಗ್ಯ ತಪಾಸಣೆಗೆ ಕಾಲಕಾಲಕ್ಕೆ ಚುಚ್ಚುಮದ್ದು, ದುಪ್ಪಟ್ಟು ಆಹಾರ, ವಾರದಲ್ಲಿ ಐದು ದಿನ ಮೊಟ್ಟೆ ವಿತರಣೆ ಹಾಗೂ ಸಮಾಜದ ಮತ್ತು ಸಂಘ ಸಂಸ್ಥೆಗಳ ನೆರವು ಕೋರಿ ಮಕ್ಕಳನ್ನು ಸಾಮಾನ್ಯ ಸ್ಥಿತಿಗೆ ತರುವಂತೆ ಪ್ರಯತ್ನಿಸುವುದು.

8. ಶಿಶು ಮರಣ, ತಾಯಂದಿರ ಮರಣ ಪ್ರಮಾಣ ಕಡಿಮೆಯಾಗುವಂತೆ ನೋಡಿಕೊಳ್ಳುವ ಕಾರ್ಯಕ್ರಮಗಳನ್ನು ಇಲಾಖೆ ಮಾಡುತ್ತಿದೆ.
9. ವಿಕಲಚೇತನ ಮಕ್ಕಳ ಬಗ್ಗೆಯೂ ಸಹ ವಿಶೇಷ ಗಮನ ಹರಿಸಲಾಗುತ್ತಿದೆ.
10. ಪತ್ರಿ ತಿಂಗಳ 19ನೇ ತಾರೀಖಿನಂದು ಅಂಗನವಾಡಿಗಳಲ್ಲಿ ಬಾಲ್ಯದ ಪಾಲನಾ ಮತ್ತು ಶಿಕ್ಷಣ ದಿನ ಆಚರಿಸಲಾಗುತ್ತಿದೆ.
11. ದಿನಾಂಕ:02.10.2017ರಿಂದ ಮಾತೃಪೂರ್ಣ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಧ್ಯಾಹ್ನದ ಬಿಸಿ ಊಟವನ್ನು ನೀಡುವ ನೂತನ ಕಾರ್ಯಕ್ರಮವನ್ನು ಜಾರಿಗೆ ತಂದು ಅನುಷ್ಠಾನಗೊಳಿಸಲಾಗುತ್ತಿದೆ.
12. ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಡಿ 1ನೇ ಕಂತು ರೂ:1000/ 2ನೇ ಕಂತು ರೂ:2000/– 3ನೇ ಕಂತು ರೂ:2000/–ಹಾಗೂ ಜನನಿ ಸುರಕ್ಷಾ ಯೋಜನೆಯಡಿ ರೂ:1000/– ಒಟ್ಟು ರೂ:6000/–ರಂತೆ ಮೊದಲ ಜೀವಂತ ಹರಿಗೆಗೆ ಸೀಮಿತಗೊಳಿಸಿ ದಿನಾಂಕ:01.01.2017ರ ನಂತರ ಗರ್ಭಿಣಿಯಾಗಿರುವ ಮಹಿಳೆಯರಿಗೆ ನೇರ ನಗದು ಪಾವತಿ ಮಾಡಲಾಗುತ್ತಿದೆ.
13. ಕ್ಷೀರಭಾಗ್ಯ ಯೋಜನೆಯಡಿ 6ತಿಂಗಳಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 5 ದಿನ 150 ಎಂ.ಎಲ್ ಹಾಲು ವಿತರಿಸಲಾಗಿದೆ.
14. ಅಂಗನವಾಡಿಗೆ ಹಾಜರಾಗುವ 3 ವರ್ಷದಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆ ವಿತರಿಸಲಾಗಿದೆ.

೩. ಆರ್ಥಿಕ ಸಾಧನೆ ವಿವರ

ಕ್ರ.ಸಂ	ವಿವರ	ಗುರಿ		ಸಾಧನೆ	
		ಭೌತಿಕ	ಆರ್ಥಿಕ (ಲಕ್ಷಗಳಲ್ಲಿ)	ಭೌತಿಕ	ಆರ್ಥಿಕ (ಲಕ್ಷಗಳಲ್ಲಿ)
1	ಪೂರಕ ಪೌಷ್ಟಿಕ ಆಹಾರ ಯೋಜನೆ	79876	2441.05	75992	1745.14
2	ಸಮಗ್ರ ಶಿಶು ಅಭಿವ್ರದ್ಧಿ ಸೇವಾ ಯೋಜನೆ (ಸಿಬ್ಬಂದಿ ವೇತನ, ಕಛೇರಿ ವೆಚ್ಚ, ಬಾಡಿಗೆ, ದೂರವಾಣಿ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಗೌರವಧನ)	2466	2041.80	2390	2015.28
3	ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆ (ಜಿಲ್ಲಾ ಕೋಶ)	9	33.00	3	19.89
4	ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಕಾರ್ಯಕ್ರಮ	9	41.16	4	29.89

4. ಮೂಲಭೂತ ಸೌಕರ್ಯಗಳ ವಿವರ:

- ಜಿಲ್ಲೆಯ 1191 ಅಂಗನವಾಡಿ ಕೇಂದ್ರಗಳಲ್ಲಿ 1012 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಹೊಂದಿದ್ದು, 2017-18ನೇ ಸಾಲಿನಲ್ಲಿ 163 ಅಂಗನವಾಡಿ ಕಟ್ಟಡದ ದುರಸ್ತಿಗಾಗಿ ರೂ.80.00 ಲಕ್ಷ ಮಂಜೂರಾಗಿದ್ದು, ಒಟ್ಟು ರೂ.78.86 ಲಕ್ಷ ವಿನಿಯೋಗಿಸಲಾಗಿದೆ.

4. ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳಲ್ಲಿ ಈ ಕೆಳಗಿನಂತೆ ಮೂಲಭೂತ ಸೌಕರ್ಯಗಳನ್ನು ಹೊಂದಲಾಗಿದೆ.

ಮೂಲಭೂತ ಸೌಕರ್ಯದ ವಿವರ	ಮೂಲಭೂತ ಸೌಕರ್ಯ ಹೊಂದಿರುವ ಯೋಜನೆಗಳು				
	ಉಡುಪಿ	ಕುಂದಾಪುರ	ಕಾರ್ಕಳ	ಬ್ರಹ್ಮಾವರ	ಒಟ್ಟು
ಸ್ವಂತ ಕಟ್ಟಡ	208	354	220	230	**1012**
ವಿದ್ಯುತ್	273	370	224	268	**1135**
ಫ್ಯಾನ್	273	368	224	268	**1133**
ಗ್ಯಾಸ್ ಸಂಪರ್ಕ	274	412	230	275	**1191**
ನೀರಿನ ಸೌಲಭ್ಯ	274	412	230	275	**1191**
ಶೌಚಾಲಯ	274	395	230	271	**1170**
ಅಡುಗೆ ಮನೆ	218	356	220	159	**953**
ಆಟದ ಮೈದಾನ	118	265	111	195	**689**
ಆವರಣಗೋಡೆ	115	114	109	71	**409**

5. **ಭಾಗ್ಯಲಕ್ಷ್ಮೀ ಯೋಜನೆ:**

- ಹೆಣ್ಣು ಮಕ್ಕಳ ರಕ್ಷಣೆ, ಆರೋಗ್ಯ, ಶಿಕ್ಷಣ, ಪೋಷಣೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರವು 2006-07ನೇ ಸಾಲಿನಿಂದ ಭಾಗ್ಯಲಕ್ಷ್ಮೀ ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯನ್ವಯ ಬಿಪಿಎಲ್ ಕುಟುಂಬಗಳಲ್ಲಿ ಜನಿಸಿದ ಇಬ್ಬರು ಹೆಣ್ಣು ಮಕ್ಕಳಿಗೆ ಆರ್ಥಿಕ, ಶೈಕ್ಷಣಿಕ ಮತ್ತು ವಿಮಾ ಸೌಲಭ್ಯಗಳನ್ನು ಭಾರತೀಯ ಜೀವವಿಮಾ ನಿಗಮದ ಸಹಯೋಗದೊಂದಿಗೆ ಒದಗಿಸಲಾಗುತ್ತಿದೆ.
- 2017-18ನೇ ಸಾಲಿನಲ್ಲಿ ಅಯ್ಕೆ ಮಾಡಿರುವ ಫಲಾನುಭವಿಗಳು: 2917
- 2017-18ನೇ ಸಾಲಿನಲ್ಲಿ- 15-16ನೇ ಸಾಲಿನ ಫಲಾನುಭವಿಗಳಿಗೆ ವಿತರಿಸಿದ್ದು: 415
  16-17ನೇ ಸಾಲಿನ ಫಲಾನುಭವಿಗಳಿಗೆ ವಿತರಿಸಿದ್ದು: 293

ಒಟ್ಟು 708

6. **ಎಂ.ಎಸ್‌ಪಿ.ಟಿ.ಸಿ:-**

- ಉಡುಪಿ ಜಿಲ್ಲೆಯಲ್ಲಿ 2 ಎಂ.ಎಸ್‌ಪಿ.ಟಿ.ಸಿಗಳು ಕಾರ್ಯನಿರ್ವಹಿಸುತ್ತಿದ್ದು, ಉಡುಪಿ ಮತ್ತು ಕಾರ್ಕಳ ಯೋಜನೆಗೆ ಸಂಬಂಧಿಸಿದಂತೆ ಎಂಎಸ್‌ಪಿಟಿಸಿ ಕೊಂಡಾಡಿ, ಮಂಜೊಟ್ಟು ಉಡುಪಿ ತಾಲ್ಲೂಕು ಹಾಗೂ ಕುಂದಾಪುರ ಯೋಜನೆಗೆ ಸಂಬಂಧಿಸಿದಂತೆ ಎಂಎಸ್‌ಪಿಟಿಸಿ ಮಾಕೋಡು ಕುಂದಾಪುರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ ಬಹುಧಾನ್ಯ ಮಿಶ್ರಿತ ಪೋರೇಜ್ ಹಾಗೂ ಪೌಷ್ಠಿಕಾಂಶವುಳ್ಳ ಪದಾರ್ಥಗಳನ್ನು ತಯಾರಿಸಿ 6 ತಿಂಗಳಿನಿಂದ 1 ವರ್ಷದ ಮಕ್ಕಳಿಗೆ ಪುಷ್ಠಿ ಮತ್ತು 1 ವರ್ಷದಿಂದ 3 ವರ್ಷದ ಮಕ್ಕಳಿಗೆ ಪುಷ್ಟಿ+, ಗರ್ಭಿಣಿ, ಬಾಣಂತಿಯರು, ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿಯರಿಗೆ, ಕಿಶೋರಿಯರಿಗೆ ಪೂರಕ ಪೌಷ್ಟಿಕ ಆಹಾರವನ್ನು ಶಿಶು ಅಭಿವೃದ್ಧಿ ಯೋಜನೆಯ ಮುಖಾಂತರ ಅಂಗನವಾಡಿಗಳಿಗೆ ಪೂರೈಕೆ ಮಾಡಲಾಗುತ್ತಿದೆ.

7. **ತೀವ್ರ ಅಪೌಷ್ಟಿಕತೆ ಮಕ್ಕಳಿಗೆ ಹಾಲು ಮತ್ತು ಮೊಟ್ಟೆ:-**

- ಉಡುಪಿ ಜಿಲ್ಲೆಯಲ್ಲಿ 2017-18ನೇ ಸಾಲಿನ ಪ್ರಾರಂಭದಲ್ಲಿ 202 ತೀವ್ರ ಅಪೌಷ್ಟಿಕ ಮಕ್ಕಳು ಇದ್ದು 88 ಮಕ್ಕಳನ್ನು ಹೊಸದಾಗಿ ಒಟ್ಟು 290 ತೀವ್ರ ಅಪೌಷ್ಟಿಕ ಮಕ್ಕಳನ್ನು ಗುರುತಿಸಿ ಇವರಿಗೆ ಸಾಧಾರಣ ಮಕ್ಕಳಿಗೆ ನೀಡುವಂತಹ ಆಹಾರದ 1ಳಿ ಪಟ್ಟು ಪೌಷ್ಟಿಕಾಂಶವುಳ್ಳ ಆಹಾರ ಹಾಗೂ ವಾರದಲ್ಲಿ 6 ದಿನ ಹಾಲು ಮತ್ತು 5 ದಿನ ಮೊಟ್ಟೆಯನ್ನು ವಿತರಿಸಲಾಗಿದೆ. ಈ ಪೈಕಿ 116 ತೀವ್ರ ಅಪೌಷ್ಟಿಕ ಮಕ್ಕಳು ಸಾಧಾರಣ ತೂಕಕ್ಕೆ ಪ್ರಗತಿ ಹೊಂದಿರುತ್ತಾರೆ. ಉಳಿದ 174 ತೀವ್ರ ಅಪೌಷ್ಟಿಕ ಮಕ್ಕಳಿಗೆ ಹಾಲು ಮತ್ತು ಮೊಟ್ಟೆಯನ್ನು ಮುಂದುವರಿಸಲಾಗಿದೆ.

8. **ಮಾತೃಪೂರ್ಣ ಯೋಜನೆ:-**

- ಉಡುಪಿ ಜಿಲ್ಲೆಯಲ್ಲಿ ಮಾತೃಪೂರ್ಣ ಯೋಜನೆಯಡಿ 8023 ಗರ್ಭಿಣಿ,ಬಾಣಂತಿ ,ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರಿಗೆ ಮಧ್ಯಾಹ್ನದ ಪೌಷ್ಟಿಕ ಊಟವನ್ನು ವಿತರಿಸಲಾಗಿದೆ.

9. **ಕ್ಷೀರಭಾಗ್ಯ ಯೋಜನೆ:-** ಉಡುಪಿ ಜಿಲ್ಲೆಯಲ್ಲಿ ಕ್ಷೀರಭಾಗ್ಯ ಯೋಜನೆಯಡಿ 54961ಮಕ್ಕಳಿಗೆ ವಾರದಲ್ಲಿ 5 ದಿನ 150 ಎಂ.ಎಲ್ ಹಾಲು ವಿತರಿಸಲಾಗಿದೆ.

ಕೃಷಿ ಇಲಾಖೆ, ಉಡುಪಿ

ಉಡುಪಿ ಜಿಲ್ಲೆಯು ವಲಯ-10 ರಲ್ಲಿ ಬರುತ್ತಿದ್ದು, ಭತ್ತ ಜಿಲ್ಲೆಯ ಪ್ರಮುಖ ಕೃಷಿ ಬೆಳೆಯಾಗಿರುತ್ತದೆ. ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 4571 ಮಿ.ಮಿ.ಯಿದ್ದು, 2017ನೇ ವರ್ಷದಲ್ಲಿ 3865.07 ಮಿ.ಮಿ ಮಳೆಯಾಗಿರುತ್ತದೆ. ಜಿಲ್ಲೆಯಲ್ಲಿ ಜೇಡಿ ಮತ್ತು ಜಂಬಿಟ್ಟಿಗೆ ಮಣ್ಣಿನ ವಿಧಗಳಿದ್ದು, ಮಣ್ಣು ಕಡಿಮೆ ರಸಸಾರ ಮತ್ತು ಹುಳಿ ಗುಣಧರ್ಮವನ್ನು ಹೊಂದಿರುತ್ತದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 3.56 ಲಕ್ಷ ಹೆಕ್ಟೇರ್‌ಯಿದ್ದು, ಇದರಲ್ಲಿ 0.96861 ಲಕ್ಷ ಹೆ. ನಿವ್ವಳ ಬಿತ್ತನೆ ಪ್ರದೇಶವಿರುತ್ತದೆ. ನಿವ್ವಳ ಬಿತ್ತನೆ ಪ್ರದೇಶದ ಶೇ. 44.21ರಷ್ಟು ನಿವ್ವಳ ಬಿತ್ತನೆ ಪ್ರದೇಶವನ್ನು ಕೃಷಿ ಬೆಳೆಗಳು ಆವರಿಸಿರುತ್ತವೆ. ಜಿಲ್ಲೆಯ ಒಟ್ಟು ಬಿತ್ತನೆ ಕ್ಷೇತ್ರ 111474 ಹೆ. ಇದ್ದು, ಕೃಷಿ ಬೆಳೆಗಳ ಕ್ಷೇತ್ರ 52123 ಹೆ.(ಶೇ.46.75) ಆಗಿರುತ್ತದೆ. ಕೃಷಿ ಬೆಳೆಗಳಲ್ಲಿ ಭತ್ತ ಪ್ರಮುಖ ಬೆಳೆಯಾಗಿದ್ದು, ವರ್ಷದ ಮೂರು ಹಂಗಾಮಿನಲ್ಲಿ ಬೆಳೆಯಲಾಗುತ್ತಿದೆ. ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ಉಳಿಕೆ ತೇವಾಂಶದಲ್ಲಿ ದ್ವಿದಳ ಧಾನ್ಯ ಬೆಳೆಗಳಾದ ಉದ್ದು, ಹುರುಳಿ, ಹೆಸರು, ಅಲಸಂಡೆ ಹಾಗೂ ಎಣ್ಣೆ ಕಾಳು ಬೆಳೆಗಳಾದ ನೆಲಗಡಲೆ, ಎಳ್ಳನ್ನು ಬೆಳೆಯಲಾಗುತ್ತಿದೆ. ಬ್ರಹ್ಮಾವರದ ಸಕ್ಕರೆ ಕಾರ್ಖಾನೆ ನಿಲುಗಡೆಯಾಗಿರುವುದರಿಂದ ಕಬ್ಬು ಬೆಳೆ ಆವರಿಸಿರುವ ವಿಸ್ತೀರ್ಣ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುತ್ತದೆ.2017-18ನೇ ಸಾಲಿಗೆ ವಿವಿಧ ಕೃಷಿ ಬೆಳೆಗಳಲ್ಲಿ ಒಟ್ಟು 57000 ಹೆ. ಪ್ರದೇಶದಲ್ಲಿ ಬಿತ್ತನೆ ಗುರಿಯಿರಿಸಿಕೊಂಡಿದ್ದು, ಇದರಲ್ಲಿ 52123 ಹೆ.(ಶೇ.91.44ರಷ್ಟು) ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆಯಾಗಿರುತ್ತದೆ.

ಕೃಷಿ ಇಲಾಖೆಯು ಕೃಷಿ ಕ್ಷೇತ್ರದ ಸಮತೋಲಿತ ಅಭಿವೃದ್ಧಿ, ಆಹಾರ ಸುರಕ್ಷತೆ, ರೈತರ ಆದಾಯವನ್ನು 2022ರ ವೇಳೆಗೆ ದ್ವಿಗುಣಗೊಳಿಸುವ ದೃಷ್ಟಿಕೋನವನ್ನು ಹೊಂದಿದ್ದು, ಕೃಷಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ರೈತರ ಆದಾಯವನ್ನು ಹೆಚ್ಚಿಸಲು ವಿವಿಧ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಘೋಷಿಸಲಾದ ವಿವಿಧ ಯೋಜನೆಗಳನ್ನು ಕ್ಷೇತ್ರ ಮಟ್ಟದಲ್ಲಿ ರೈತರಿಗೆ ತಲುಪಿಸುವ ಮೂಲಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಇಲಾಖೆಯಿಂದ ಕೃಷಿ ವಿಸ್ತರಣಾ ಚಟುವಟಿಕೆಗಳು, ರೈತರಿಗೆ ತರಬೇತಿ, ಸಕಾಲಕ್ಕೆ ಗುಣಮಟ್ಟದ ಕೃಷಿ ಪರಿಕರಗಳ ಪೂರೈಕೆ, ಮಣ್ಣಿನ ಗುಣಧರ್ಮ ಕಾಪಾಡಲು ಮಣ್ಣು ಪರೀಕ್ಷೆ ಅಭಿಯಾನ ಹಾಗೂ ಪೋಷಕಾಂಶಗಳ ಶಿಫಾರಸ್ಸು, ಬೆಳೆ ಸಂರಕ್ಷಣೆಗೆ ವಿಮಾ ಸೌಲಭ್ಯ, ಸಮಗ್ರ ಪೋಷಕಾಂಶ ಹಾಗೂ ಪೀಡೆ ನಿರ್ವಹಣೆ ಕಾರ್ಯಕ್ರಮಗಳು, ಕೃಷಿ ಯಾಂತ್ರೀಕರಣ ಹಾಗೂ ಸೂಕ್ಷ್ಮ ನೀರಾವರಿ ಉಪಕರಣಗಳ ಅಳವಡಿಕೆಗೆ ಉತ್ತೇಜನ, ಸಾರ್ವಜನಿಕ ಸಹಭಾಗಿತ್ವದ ಮೂಲಕ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಂಡು ರೈತರ ಏಳಿಗೆ ಹಾಗೂ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ಕ್ರಮ ವಹಿಸಲಾಗುತ್ತಿದೆ.ಸರಕಾರದಿಂದ ರೈತರಿಗಾಗಿ ಹಲವಾರು ವಿನೂತನ ಕಾರ್ಯಕ್ರಮಗಳಾದ ಕೃಷಿ ಯಾಂತ್ರೋಪಕರಣಗಳ ವಿತರಣೆ, ಪ್ರಮಾಣೀಕೃತ ಗುಣಮಟ್ಟದ ಬಿತ್ತನೆ ಬೀಜಗಳ ಪೂರೈಕೆ, ಸಾವಯವ ಕೃಷಿಗೆ ಉತ್ತೇಜನ, ಕೃಷಿ ಯಂತ್ರಧಾರೆ ಕೇಂದ್ರಗಳ ಮೂಲಕ ಕಡಿಮೆ ಬಾಡಿಗೆ ದರದಲ್ಲಿ ಕೃಷಿ ಯಂತ್ರೋಪಕರಣಗಳ ಪೂರೈಕೆ, ಶೇ.90ರ ಸಹಾಯಧನದಲ್ಲಿ ತುಂತುರು ನೀರಾವರಿ ಘಟಕಗಳ ಪೂರೈಕೆ, ಸಸ್ಯ ಸಂರಕ್ಷಣಾ ರಾಸಾಯನಿಕ/ಉಪಕರಣ, ಮಣ್ಣು ಸುಧಾರಕಗಳು, ಲಘು ಪೋಷಕಾಂಶಗಳು, ಜೈವಿಕಗೊಬ್ಬರಗಳನ್ನು ರಿಯಾಯತಿ ದರದಲ್ಲಿ ಪೂರೈಕೆ, ರೈತರಿಗೆ ಉತ್ಪಾದನಾ ಬಹುಮಾನ ಮೂಲಕ ಪ್ರೋತ್ಸಾಹ, ಸಮಗ್ರ ಕೃಷಿ ಪದ್ಧತಿ ಅಳವಡಿಕೆ ಮುಂತಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೃಷಿಯಲ್ಲಿನ ಹೊಸ ತಾಂತ್ರಿಕತೆಗಳು ಹಾಗೂ ಬೇಸಾಯ ಪದ್ಧತಿಗಳ ಅಳವಡಿಕೆಗೆ ಉತ್ತೇಜನವನ್ನು ನೀಡಲಾಗುತ್ತಿದ್ದು, ನೇರ ಬಿತ್ತನೆ ಹಾಗೂ ಯಾಂತ್ರೀಕೃತ ನಾಟಿಯನ್ನು ಕೈಗೊಳ್ಳುವ ರೈತರಿಗೆ ಪ್ರತಿ ಹೆ.ಗೆ ರೂ. 4000/-ದಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಸುಧಾರಿತ ಯಂತ್ರೋಪಕರಣಗಳ ಬಳಕೆಗೆ ಉತ್ತೇಜನ, ಭತ್ತದ ನಂತರ ಅನುಕ್ರಮ ಬೆಳೆಯಾಗಿ ದ್ವಿದಳ ಧಾನ್ಯ ಬೆಳೆ ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. ಹೊಸ

ಆವಿಷ್ಕಾರಗಳನ್ನು ಅಳವಡಿಸಿ ಕೃಷಿಯಲ್ಲಿ ಉನ್ನತ ಸಾಧನೆಗೈದ ಪ್ರಗತಿ ಪರ ರೈತರ ಕ್ಷೇತ್ರಗಳಿಗೆ ಅಧ್ಯಯನ ಪ್ರವಾಸ ಏರ್ಪಡಿಸಿ ಇತರ ರೈತರೂ ಸದರಿ ಪದ್ಧತಿಗಳ ಅಳವಡಿಕೆಗೆ ಪ್ರೇರಪಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಂಟಿ ಕೃಷಿ ನಿರ್ದೇಶಕರ ಕಛೇರಿ, ಉಪ ವಿಭಾಗ ಮಟ್ಟದಲ್ಲಿ ಉಪ ಕೃಷಿ ನಿರ್ದೇಶಕರ ಕಛೇರಿ, ತಾಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಹಾಗೂ ಹೋಬಳಿ ಮಟ್ಟದಲ್ಲಿ 9 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಕೃಷಿ ಹಾಗೂ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೈತರಿಗೆ ತಲುಪಿಸುತ್ತಿದೆ.

ಉಡುಪಿ, ಬ್ರಹ್ಮಾವರ, ಕಾರ್ಕಳ, ಅಜೆಕಾರು, ಕಾಪು, ಬೈಂದೂರು, ಕೋಟ, ವಂಡ್ಸೆ ರೈತ ಸಂಪರ್ಕ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕುಂದಾಪುರ ರೈತ ಸಂಪರ್ಕ ಕೇಂದ್ರ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ರೈತ ಸಂಪರ್ಕ ಕೇಂದ್ರಗಳ ಮೂಲಕ ನೂತನ ತಾಂತ್ರಿಕತೆ ವರ್ಗಾವಣೆ ಮಾಡುವುದರೊಂದಿಗೆ ರೈತರಿಗೆ ಕಾಲಕಾಲಕ್ಕೆ ಬೇಕಾದ ಉತ್ತಮ ಗುಣಮಟ್ಟದ ಬಿತ್ತನೆ ಬೀಜ, ಸಸ್ಯ ಸಂರಕ್ಷಣಾ ರಾಸಾಯನಿಕ/ಉಪಕರಣ, ಸಾವಯವ ಗೊಬ್ಬರ, ಲಘು ಪೋಷಕಾಂಶ, ಹಸಿರೆಲೆ ಗೊಬ್ಬರದ ಬೀಜ, ಜೈವಿಕ ಗೊಬ್ಬರ, ಜಿಪ್ಸಂ/ಸುಣ್ಣ, ಟಾರ್ಪಾಲಿನ್, ನವೀನ ಮಾದರಿಯ ಕೃಷಿ ಯಂತ್ರೋಪಕರಣಗಳನ್ನು ಶೇ.50ರ ಸಹಾಯಧನದಲ್ಲಿ ಹಾಗೂ ಪೋರ್ಟೆಬಲ್ ತುಂತುರು ನೀರಾವರಿ/ಹನಿ ನೀರಾವರಿ ಘಟಕಗಳನ್ನು ಶೇ.90ರ ಸಹಾಯಧನದಲ್ಲಿ ಒದಗಿಸಲಾಗುತ್ತಿದೆ. ಇದರೊಂದಿಗೆ ಪರಿಶಿಷ್ಠ ಜಾತಿ ಹಾಗೂ ಪಂಗಡದ ರೈತರಿಗೆ ಶೇ.90ರ ಸಹಾಯಧನದಲ್ಲಿ ಪವರ್ ಟಿಲ್ಲರ್, ಆಧುನಿಕ ಕೃಷಿ ಉಪಕರಣಗಳು, ಟಾರ್ಪಲಿನ್, ತುಂತುರು ನೀರಾವರಿ ಘಟಕ, ಸಸ್ಯ ಸಂರಕ್ಷಣಾ ಉಪಕರಣಗಳಿಗೆ ಸಹಾಯಧನ ಒದಗಿಸುತ್ತಿದ್ದು, ಉಚಿತವಾಗಿ ರೂ.4,000/- ಅನುದಾನದ ಕೃಷಿ ಪರಿಕರಗಳನ್ನು ಪ್ರಾತ್ಯಕ್ಷತೆಗಳಿಗಾಗಿ ನೀಡಲಾಗುತ್ತಿದೆ.

ಕೃಷಿ ಕ್ಷೇತ್ರದಲ್ಲಿ ಉದ್ಭವಿಸುವ ತಾಂತ್ರಿಕ ಸಮಸ್ಯೆಗಳಿಗೆ ಕೃಷಿ ವಿಜ್ಞಾನಿಗಳಿಂದ ಸೂಕ್ತ ಅಧ್ಯಯನ ನಡೆಸಿ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಪ್ರತಿ ಹಂಗಾಮಿನಲ್ಲಿ ಕಂಡು ಬರುವ ತಾಂತ್ರಿಕ ಸಮಸ್ಯೆ ಹಾಗೂ ನ್ಯೂನತೆಗಳ ಕುರಿತು ತಜ್ಞರ ತಂಡದಿಂದ ಅಧ್ಯಯನ ನಡೆಸಿ ಸಂಶೋಧನೆಗಳ ಮೂಲಕ ಪರಿಹಾರ ಕಂಡುಕೊಳ್ಳಲಾಗುತ್ತಿದೆ ಮತ್ತು ವಿಸ್ತರಣಾ ಸಿಬ್ಬಂದಿಗಳಿಗೆ ಕೃಷಿ ವಿಜ್ಞಾನಿಗಳಿಂದ ಪ್ರತಿ 2 ತಿಂಗಳಿಗೊಮ್ಮೆ ನಡೆಯುವ ದ್ವೈಮಾಸಿಕ ಕಾರ್ಯಾಗಾರ, ಪಾಕ್ಷಿಕ ತರಬೇತಿ ಹಾಗೂ ಸಾಂಸ್ಥಿಕ ತರಬೇತಿಗಳ ಮೂಲಕ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.

ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸಂಶೋದಿಸಲ್ಪಟ್ಟ ನೂತನ ತಾಂತ್ರಿಕತೆಗಳ ಕುರಿತು ರೈತರ ಜಮೀನಿನಲ್ಲಿ ಕ್ಷೇತ್ರ ಪ್ರಯೋಗ ಹಾಗೂ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದರೊಂದಿಗೆ ಕೃಷಿ ತಂತ್ರಜ್ಞಾನಗಳ ಹೆಚ್ಚಿನ ಪ್ರಸರಣಕ್ಕಾಗಿ ರೈತರ ಅಧ್ಯಯನ ಪ್ರವಾಸ, ಪ್ರಗತಿ ಪರ ರೈತರ ಕ್ಷೇತ್ರ ಭೇಟಿ, ಕೃಷಿ ವಸ್ತು ಪ್ರದರ್ಶನ, ತರಬೇತಿ, ವಿಚಾರಗೋಷ್ಠಿ, ಕಿಸಾನ್ ಗೋಷ್ಠಿ , ಕೃಷಿ ಮೇಳ ಮತ್ತು ಕೃಷಿ ಅಬಿಸಯಾನ ಮುಂತಾದ ಕಾರ್ಯಕ್ರಮಗಳ ಮುಖಾಂತರ ವಿವಿಧ ಹಂತದಲ್ಲಿ ಕೃಷಿ ಕ್ಷೇತ್ರದಲ್ಲಿ ಅವಿಷ್ಕರಿಸಲ್ಪಟ್ಟ ಆಧುನಿಕ ತಾಂತ್ರಿಕತೆಗಳ ಕುರಿತು ರೈತರಿಗೆ ಮಾಹಿತಿ ನೀಡಲಾಗುತ್ತಿದೆ.

ಭೂ ಸಮೃದ್ಧಿ ಯೋಜನೆಯಡಿ ಬೆಳೆ ಉತ್ಪಾದನೆಯನ್ನು ಮುಂದಿನ 4 ವರ್ಷಗಳಲ್ಲಿ ಶೇ.20 ಹಾಗೂ ರೈತರ ಆರ್ಥಿಕ ಮಟ್ಟವನ್ನು ಶೇ.25ರಷ್ಟು ಹೆಚ್ಚಿಸುವ ಉದ್ದೇಶದಿಂದ ಭೂ ಸಮೃದ್ಧಿ ಯೋಜನೆಯನ್ನು ಉಡುಪಿ ಜಿಲ್ಲೆಯಲ್ಲಿ 2017-18ನೇ ಸಾಲಿನಲ್ಲಿ ವಂಡ್ಸೆ, ಬ್ರಹ್ಮಾವರ, ಅಜೆಕಾರು ಹಾಗೂ ಬೈಂದೂರು ಹೋಬಳಿಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಯೋಜನೆಯಡಿ ಕೃಷಿ, ತೋಟಗಾರಿಕೆ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆ, ಸಾಮಾಜಿಕ ಅರಣ್ಯ ಹಾಗೂ ಎನ್.ಆರ್.ಎಲ್.ಎಂ. ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಜಿಲ್ಲಾ ಮಟ್ಟದಲ್ಲಿ ನವೀನ ಕಾರ್ಯಕ್ರಮಗಳ ಕ್ರಿಯಾ ಯೋಜನೆಯನ್ನು ರೂಪಿಸಿ ಸಮಗ್ರವಾಗಿ ರೈತರ ಅಬಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರೊಂದಿಗೆ ಸಮಗ್ರ ಕೃಷಿ ಪದ್ಧತಿ ಮಾದರಿ ಪ್ರಾತ್ಯಕ್ಷಿಕೆಯನ್ನು

ಅನುಷ್ಠಾನಗೊಳಿಸಿದ್ದು, ರೈತರಿಗೆ ಕ್ಷೇತ್ರ ಮಟ್ಟದಲ್ಲಿ ಪಾಠಶಾಲೆಗಳ ಮೂಲಕ ಮಾಹಿತಿ ನೀಡಲಾಗಿರುತ್ತದೆ. ಸದ್ರಿ ಯೋಜನೆಯಡಿ 2017-18ನೇ ಸಾಲಿನಲ್ಲಿ ಒಟ್ಟು 800 ಕ್ಕೂ ಅಧಿಕ ಮಂದಿ ರೈತರು ಪ್ರಯೋಜನವನ್ನು ಪಡೆದಿದ್ದು, 2017-18ನೇ ಸಾಲಿನಲ್ಲಿ ಭೂ ಸಮೃದ್ಧಿ ಯೋಜನೆಯ ಅನಷ್ಠಾನಕ್ಕಾಗಿ ರೂ. ರೂ.277.52 ಲಕ್ಷ ಅನುದಾನವನ್ನು ವಿನಿಯೋಗಿಸಲಾಗಿದೆ. ಮಣ್ಣಿನ ಆರೋಗ್ಯ ನಿರ್ವಹಣೆಯನ್ನು ಉತ್ತೇಜಿಸಲು ಹಾಗೂ ಜಿಲ್ಲೆಯ ರೈತರಿಗೆ ಪ್ರತಿ2 ವರ್ಷಗಳಿಗೊಮ್ಮೆ ಮಣ್ಣು ಪರೀಕ್ಷೆ ಆಧಾರಿತ ಮಣ್ಣು ಆರೋಗ್ಯ ಚೀಟಿಗಳನ್ನು ಒದಗಿಸುವ ಉದ್ದೇಶದಿಂದ 2015-16ನೇ ಸಾಲಿನಿಂದ ಮಣ್ಣು ಆರೋಗ್ಯ ಅಬಿಯಾನ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2017-18 ಸಾಲಿನಲ್ಲಿ ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದಡಿ 13553 ಮಣ್ಣು ಮಾದರಿಗಳನ್ನು ವಿಶ್ಲೇಷಿಸಿ 80000 ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ಮುದ್ರಿಸಲಾಗಿದ್ದು ರೈತರಿಗೆ ವಿತರಣೆ ಪ್ರಗತಿಯಲ್ಲಿರುತ್ತದೆ.

ರೈತರಿಗೆ ಸಕಾಲದಲ್ಲಿ ಕಡಿಮೆ ಬಾಡಿಗೆ ದರದಲ್ಲಿ ಅವಶ್ಯಕ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವ ಉದ್ದೇಶದಿಂದ ಹೋಬಳಿ ಮಟ್ಟದಲ್ಲಿ 7 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಇದರೊಂದಿಗೆ 2017-18ನೇ ಸಾಲಿನಲ್ಲಿ ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಉದ್ಯೋಗವಕಾಶವನ್ನು ಸೃಜಿಸಲು ಹಾಗೂ ಕೃಷಿ ಯಂತ್ರೋಪಕರಣಗಳನ್ನು ಸ್ಥಳೀಯವಾಗಿ ದುರಸ್ತಿ ಮಾಡಲು ಅನುವುವಾಗುವಂತೆ ತಾಲೂಕಿಗೆ ಒಂದರಂತೆ ಗ್ರಾಮೀಣ ಕೃಷಿ ಯಂತ್ರೋಪಕರಣ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಕೃಷಿಯಲ್ಲಿ ರಾಸಾಯನಿಕಗಳ ಬಳಕೆಯನ್ನು ಹಂತ ಹಂತವಾಗಿ ಕಡಿಮೆ ಮಾಡಿ ಹೋಬಳಿಯ ಕನಿಷ್ಠ 100 ಹೆ. ಪ್ರದೇಶವನ್ನು 3 ವರ್ಷಗಳ ಅವದಿಯಲ್ಲಿ ಸಾವಯವ ಕೃಷಿಗೆ ಪರಿವರ್ತಿಸುವ ಉದ್ದೇಶದಿಂದ ಸಾವಯವ ಭಾಗ್ಯ ಯೋಜನೆಯನ್ನು ಉಡುಪಿ ಜಿಲ್ಲೆಯ ಹಿರೇಬೆಟ್ಟು, ಕಟ್ಟಿಂಗೇರಿ, ಕಾಡೂರು, ಜಪ್ತಿ, ತೆಗ್ಗರ್ಸೆ-ಯೆಳಜಿತ್ ಹಾಗೂ ಬೇಳಂಜೆ ಗ್ರಾಮಗಳಲ್ಲಿ 2013-14 ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದ್ರಿ ಯೋಜನೆಯಡಿ ರೈತರಿಗೆ ಸಾವಯವ ಕೃಷಿಗೆ ಪೂರಕವಾದ ಘಟಕಗಳಿಗೆ ಸಹಾಯಧವನ್ನು ಒದಗಿಸಲಾಗುತ್ತಿದ್ದು, ತರಬೇತಿ, ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಿ ಸಾವಯವ ಕೃಷಿಯ ಅಳವಡಿಕೆಗೆ ಪ್ರೇರೇಪಿಸಲಾಗುತ್ತಿದೆ. 2016-17ನೇ ಸಾಲಿನಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ,ರೂ.43.19 ಲಕ್ಷ ವಿನಿಯೋಗಿಸಲಾಗಿದೆ ಇದರೊಂದಿಗೆ ಜಿಲ್ಲೆಯ 8 ಹೋಬಳಿಗಳಲ್ಲಿ 20 ಎಕ್ರೆಯ 9 ಬೆಳೆ ನಿರ್ದಿಷ್ಠ ಸಾವಯವ ಕ್ಲಸ್ಟರ್‌ಗಳನ್ನು ರಚಿಸುವ ಉದ್ದೇಶದಿಂದ 2015-16ನೇ ಸಾಲಿನಿಂದ ಪರಂಪರಾಗತ ಕೃಷಿ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ತರಬೇತಿ, ಅಧ್ಯಯನ ಪ್ರವಾಸ, ಸಾವಯವ ಕೃಷಿ ಘಟಕಗಳ ರಚನೆ ಹಾಗೂ ಕ್ಷೇತ್ರ ಪರಿವರ್ತನಾ ಚಟುವಟಿಕೆಗಳಿಗಾಗಿ ರೂ.15.26 ಲಕ್ಷ ಅನುದಾನವನ್ನು ಬಳಕೆ ಮಾಡಿಕೊಳ್ಳಲಾಗಿದೆ. ಸಾವಯವ ಕೃಷಿಕರ ಉತ್ಪನ್ನಗಳಿಗೆ ವ್ಯವಸ್ಥಿತ ಮಾರುಕಟ್ಟೆಯನ್ನು ಒದಗಿಸಲು ಹಾಗೂ ಸಾವಯವ ಕೃಷಿಕರ ಸಂಘಗಳನ್ನು ಬಲವರ್ಧನೆಗೊಳಿಸುವ ಉದ್ದೇಶದಿಂದ 2015-16ನೇ ಸಾಲಿನಲ್ಲಿ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳ ಪ್ರಾಂತೀಯ ಸಾವಯವ ಕೃಷಿಕರ ಒಕ್ಕೂಟವನ್ನು ರಚಿಸಲಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ಸಾವಯವ ಕೃಷಿಕರು ಹಾಗೂ ಗ್ರಾಹಕರ ಅನುಕೂಲಕ್ಕಾಗಿ ಸಾವಯವ ಸಂತೆಯನ್ನು ಪ್ರಾರಂಭಿಸಲಾಗಿದೆ.

ಜಿಲ್ಲೆಯಲ್ಲಿ ಕೃಷಿ ಕೂಲಿ ಕಾರ್ಮಿಕರ ಸಮಸ್ಯೆ ತೀವ್ರವಾಗಿದ್ದು, ಇದಕ್ಕೆ ಪರ್ಯಾಯವಾಗಿ ಇಲಾಖೆಯಿಂದ ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕೆ ಉತ್ತೇಜನ ನೀಡಲಾಗುತ್ತಿದ್ದು, ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಕೃಷಿ ಯಂತ್ರೋಪಕರಣಗಳ ಖರೀದಿಗಾಗಿ ಶೇ. 50ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ. 90ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. 2017-18ನೇ ಸಾಲಿನಲ್ಲಿ ಸದ್ರಿ ಯೋಜನೆಯಡಿ 1101 ಮಂದಿ ರೈತರು ಪ್ರಯೋಜವನ್ನು ಪಡೆದಿದ್ದು 303.45 ಲಕ್ಷ ಸಹಾಯಧನವನ್ನು ಒದಗಿಸಲಾಗಿದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಸ್ವಾಭಾವಿಕ ಸಂಪನ್ಮೂಲಗಳಾದ ನೀರಿನ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ. ಅಂರ್ತಜಲ ವೃದ್ಧಿಗೆ ಪೂರಕ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ನೀರಿನ ಮಿತಬಳಕೆಯನ್ನು ಪ್ರೋತ್ಸಾಹಿಸಲು ಸದರಿ ಯೋಜನೆಯಡಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಶೇ.90ರ ಸಹಾಯಧನದಲ್ಲಿ ಒದಗಿಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು 1128 ಮಂದಿ ರೈತರಿಗೆ 1123.60 ಹೆ. ಪ್ರದೇಶಕ್ಕೆ ತುಂತುರು ನೀರಾವರಿ ಘಟಕಗಳನ್ನು ವಿತರಿಸಿದ್ದು, ರೂ. 198.50 ಲಕ್ಷ ಸಹಾಯಧನ ಒದಗಿಸಲಾಗಿದೆ.

ಜಲಾನಯನ ಅಬಿವೃದ್ಧಿ ಚಟುವಟಿಕೆಗಳನ್ನು ಪಿ.ಎಮ್.ಕೆ.ಎಸ್.ವೈ.- ಸಮಗ್ರ ಜಲಾನಯನ ಹಾಗೂ ಪಶ್ಚಿಮ ಘಟ್ಟ ಅಬಿಽವೃದ್ಧಿ ಕಾರ್ಯಕ್ರಮಗಳ ಮೂಲಕ ಕೈಗೊಳ್ಳಲಾಗುತ್ತಿದ್ದು, ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳು ಹಾಗೂ ತೋಟಗಾರಿಕೆ, ಅರಣ್ಯಾಬಿಽವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರೊಂದಿಗೆ ಆದಾಯ ಉತ್ಪನ್ನ ಚಟುವಟಿಕೆಗಳು, ಉತ್ಪಾದನಾ ಪದ್ಧತಿ ಹಾಗೂ ಕಿರು ಉದ್ಯಮಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಸಮಗ್ರ ಜಲಾನಯ ನಿರ್ವಹಣಾ ಕಾರ್ಯಕ್ರಮವನ್ನು ಉಡುಪಿ ಜಿಲ್ಲೆಯಲ್ಲಿ 39062 ಹೆ.ಪ್ರದೇಶದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿದ್ದು, 2017-18ನೇ ಸಾಲಿನಲ್ಲಿ 120 ಕಿಂಡಿ ಆಣೆಕಟ್ಟು, 19 ಗೋಕಟ್ಟೆ, 8 ಅಲ್ಪಾಳದ ಬಾವಿ, 540 ಮೀ. ನಾಲಾ ತಡೆ ಗೋಡೆ, 7 ನಾಲಾ ಬದು ರಚನೆ ಕಾಮಗಾರಿಗಳನ್ನು ಮತ್ತು 1760.78 ಹೆ. ಪ್ರದೇಶದಲ್ಲಿ ಖುಷ್ಕಿ ತೋಟಗಾರಿಕೆ ಹಾಗೂ ಅರಣ್ಯ ಅಬಿಽವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ.

ರೈತರ ಸಮಗ್ರ ಅಬಿಽವೃದ್ಧಿಗಾಗಿ ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಜಿಲ್ಲಾ ವಲಯ, ರಾಜ್ಯ ವಲಯ ಹಾಗೂ ಕೇಂದ್ರ ಪುರಸ್ಕೃತ ವಿವಿಧ ಅನುಮೋದಿತ ಕಾರ್ಯಕ್ರಮಗಳನ್ನು ನಿಯಮಾನುಸಾರವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

2017-18ನೇ ಸಾಲಿನಲ್ಲಿ ಕೃಷಿ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಿದ ಜಿಲ್ಲಾ ಪಂಚಾಯತ್ ಯೋಜನೆಗಳ ಪ್ರಗತಿ ವಿವರ:-

1. ಇತರೆ ಕೃಷಿ ಯೋಜನೆಗಳು:-ಉಡುಪಿ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರ ಕೊರತೆ ತೀವ್ರವಾಗಿದ್ದು, ಸಣ್ಣ/ಅತೀಸಣ್ಣ ಹಿಡುವಳಿದಾರರು ಶೇ.90ಕ್ಕೂ ಅದಿಽಕ ಸಂಖ್ಯೆಯಲ್ಲಿ ಇರುತ್ತಾರೆ. ಕೂಲಿ ಕಾರ್ಮಿಕರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಣ್ಣ ಹಿಡುವಳಿದಾರರಿಗೆ ಸೂಕ್ತವಾದ ಕೃಷಿ ಯಂತ್ರೋಪಕರಣಗಳನ್ನು 135 ಮಂದಿ ರೈತರಿಗೆ ವಿತರಿಸಲಾಗಿರುತ್ತದೆ.
2. ಬೇಸಾಯಕ್ಕೆ ಸಂಬಂದಿಽಸಿದ ಇತರೆ ಯೋಜನೆಗಳು :- ಜಿಲ್ಲೆಯಲ್ಲಿ 9 ರೈತ ಸಂಪರ್ಕ ಕೇಂದ್ರಗಳ ಪೈಕಿ 8 ರೈತ ಸಂಪರ್ಕ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸದ್ರಿ ರೈತ ಸಂಪರ್ಕ ಕೇಂದ್ರಗಳ ಕಛೇರಿ ಕಟ್ಟಡದ ಬಾಡಿಗೆ, 9 ರೈತ ಸಂಪರ್ಕ ಕೇಂದ್ರಗಳ ಕಛೇರಿ ವೆಚ್ಚಕ್ಕಾಗಿ ಅನುದಾವನ್ನು ವಿನಿಯೋಗಿಸಲಾಗುತ್ತದೆ.
3. ಕೃಷಿ ಕಛೇರಿ ಕಟ್ಟಡಗಳು:- ಕೃಷಿ ಇಲಾಖೆಯ ಅದಿಽೀನದಲ್ಲಿರುವ ಕಛೇರಿ ಹಾಗೂ ವಸತಿ ಗೃಹಗಳಲ್ಲಿ ಅವಶ್ಯವಿರುವ ತುರ್ತು ಕಾಮಗಾರಿ ಹಾಗೂ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಸದರಿ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದೆ. 2017-18ನೇ ಸಾಲಿನಲ್ಲಿ ಒಟ್ಟು ರೂ.10.00 ಲಕ್ಷ ಅನುದಾನ ಒದಗಿಸಲಾಗಿದ್ದು ಬ್ರಹ್ಮಾವರ ರೈತ ಸಂಪರ್ಕ ಕೇಂದ್ರದ ಆವರಣ ಗೋಡೆ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಉಡುಪಿ ಕಛೇರಿಯಲ್ಲಿ ಟೈಲ್ಸ್ ಅಳವಡಿಕೆ, ಬೈಂದೂರು ರೈತ ಸಂಪರ್ಕ ಕೇಂದ್ರ ವ್ಯಾಪ್ತಿಯಲ್ಲಿ ಇಂಟರ್‌ಲಾಕ್

ಅಳವಡಿಕೆ, ವಂಡ್ಸೆ ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಪೈಪ್‌ಲೈನ್ ವ್ಯವಸ್ಥೆ ಹಾಗೂ ಸಿಂಟೆಕ್ಸ್ ಟ್ಯಾಂಕ್ ಅಳವಡಿಕೆ, ಸಾಣೂರು ಬೀಜೋತ್ಪಾದನಾ ಕೇಂದ್ರದ ತಂತಿಬೇಲಿ ಅಳವಡಿಕೆ ಹಾಗೂ ಕಾರ್ಕಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಕುಡಿಯುವ ನೀರಿಗೆ ಪೈಪ್‌ಲೈನ್ ವ್ಯವಸ್ಥೆ ಹಾಗೂ ಸಿಂಟೆಕ್ಸ್ ಟ್ಯಾಂಕ್ ಅಳವಡಿಕೆ, ಮುಂತಾದ ಕಾಮಗಾರಿಗಳಾಗಿ ಅನುದಾನವನ್ನು ವಿನಿಯೋಗಿಸಲಾಗಿರುತ್ತದೆ.

4. ಸಾವಯವ ಗೊಬ್ಬರ ಯೋಜನೆ :- ರಸಗೊಬ್ಬರ ಬಳಕೆಯನ್ನು ಕಡಿಮೆ ಮಾಡಿ ಸಾವಯವ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ 91 ಹೆ.ಗೆ ಸಾವಯವ ಗೊಬ್ಬರವನ್ನು ಸಹಾಯಧನದಲ್ಲಿ ವಿತರಿಸಲಾಗಿರುತ್ತದೆ.

5. ರಾಷ್ಟ್ರೀಯ ಎಣ್ಣೆಕಾಳು ಹಾಗೂ ತಾಳೆ ಅಬಿವೃದ್ಧಿ ಯೋಜನೆ:- ಶೇ.50ರ ಸಹಾಯಧನದಲ್ಲಿ 129 ಕ್ವಿಂ ಪ್ರಮಾಣೀಕೃತ ನೆಲಗಡಲೆ ಬಿತ್ತನೆ ಬೀಜ, 121 ಟನ್ ಜಿಪ್ಸಂ, 5 ಮಂದಿ ರೈತರಿಗೆ ಸಹಾಯಧನದಲ್ಲಿ ನೀರಾವರಿ ಪೈಪು, 144 ಹೆ.ಗೆ ಸಸ್ಯ ಸಂರಕ್ಷಣಾ ಔಷಧಿಯನ್ನು ವಿತರಿಸಲಾಗಿದೆ.

6. ಸಸ್ಯ ಸಂರಕ್ಷಣಾ ಯೋಜನೆ :-ರೈತರು ತಾವು ಬೆಳೆದ ಬೆಳೆಗಳನ್ನು ಸಕಾಲದಲ್ಲಿ ಕೀಟ ಮತ್ತು ರೋಗಗಳಿಂದ ಸಂರಕ್ಷಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಕಾಲದಲ್ಲಿ ಸಿಂಪಡಣೆ ಕೈಗೊಳ್ಳಲು ಅನುಕೂಲವಾಗುವಂತೆ ಶೇ.50ರ ಸಹಾಯಧನದಲ್ಲಿ 97 ಹೆ.ಗೆ ಸಸ್ಯ ಸಂರಕ್ಷಣಾ ರಾಸಾಯನಿಕ ಮತ್ತು 164 ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಿಸಲಾಗಿರುತ್ತದೆ.

7. ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ:- ಗ್ರಾಮೀಣ ಮಟ್ಟದ ರೈತರಿಗೆ ಕೃಷಿಯ ಬಗ್ಗೆ ಅರಿವು ಮೂಡಿಸಲು ಗ್ರಾಮೀಣ ಜಾತ್ರೆ, ಕೃಷಿ ಮೇಳ, ಕೃಷಿ ಅಬಿಯಾನಗಳ ಸಂದರ್ಭಗಳಲ್ಲಿ ಆಧುನಿಕ ತಾಂತ್ರಿಕತೆಗಳನ್ನೊಳಗೊಂಡ ಕೃಷಿಗೆ ಸಂಬಂದಿಸಿದ ಹಾಗೂ ಕೃಷಿಗೆ ಪೂರಕವಾದ ಒಟ್ಟು 11 ಕೃಷಿ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿರುತ್ತದೆ.

8. ವಿಶೇಷ ಘಟಕ ಯೋಜನೆ:- ಪರಿಶಿಷ್ಟ ಜಾತಿಯ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕೃಷಿ ಆಧಾರಿತ ಕುಟುಂಬಗಳಿಗೆ ಉಚಿತವಾಗಿ 8.75 ಹೆ.ಗೆ ಕೃಷಿ ಪರಿಕರ ವಿತರಣೆ, ಶೇ.90 ರ ಸಹಾಯಧನದಲ್ಲಿ 3 ಮಂದಿ ರೈತರಿಗೆ ಹೈಟೆಕ್ ಕೃಷಿ ಉಪಕರಣ ಹಾಗೂ ಒಬ್ಬರು ರೈತರಿಗೆ ಪವರ್ ಟಿಲ್ಲರ್‌ನ್ನು ವಿತರಿಸಲಾಗಿರುತ್ತದೆ.

9. ಗಿರಿಜನ ಉಪಯೋಜನೆ :- ಪರಿಶಿಷ್ಠ ಪಂಗಡದ ರೈತರ ಆರ್ಥಿಕ ಅಬಿವೃದ್ಧಿಗಾಗಿ ಕೃಷಿ ಆಧಾರಿತ ರೈತ ಕುಟುಂಬಗಳಿಗೆ ಉಚಿತವಾಗಿ 2.5 ಹೆ.ಗೆ. ಕೃಷಿ ಪರಿಕರ, ಶೇ.90 ರ ಸಹಾಯಧನದಲ್ಲಿ 4 ಮಂದಿ ರೈತರಿಗೆ ಪವರ್ ಟಿಲ್ಲರ್ ಹಾಗೂ 4 ಮಂದಿ ರೈತರಿಗೆ ಹೈಟೆಕ್ ಕೃಷಿ ಉಪಕರಣಗಳನ್ನು ವಿತರಿಸಲಾಗಿರುತ್ತದೆ. ಜಲಾನಯನ ಅಬಿವೃದ್ಧಿ ಚಟುವಟಿಕೆಗಳಾದ 3 ನಾಲಾ ತಡೆಗೋಡೆ ಕಾಮಗಾರಿಗಳನ್ನು ರೂ.5.50 ಲಕ್ಷ ಅನುದಾನದಲ್ಲಿ ರಚಿಸಲಾಗಿರುತ್ತದೆ.

10. ಪಶ್ಚಿಮಘಟ್ಟ ಅಬಿವೃದ್ಧಿ ಯೋಜನೆ :- 2010-11 ನೇ ಸಾಲಿನಿಂದ 1ನೇ ಹಂತದಲ್ಲಿ 8,000 ಹೆಕ್ಟೇರ್ ಪ್ರದೇಶ ಮೂರು ಉಪಜಲಾನಯನಗಳಲ್ಲಿ ಹಾಗೂ 2011-12 ನೇ ಸಾಲಿನಿಂದ 2 ನೇ ಹಂತದಲ್ಲಿ ಮತ್ತೆ ಒಟ್ಟು 10,400 ಹೆಕ್ಟೇರ್ ಪ್ರದೇಶದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2017-18ನೇ ಸಾಲಿನಲ್ಲಿ ಸದರಿ ಯೋಜನೆಯಡಿ

ಒಟ್ಟು 15 ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿ ಮತ್ತು 12 ಸೋಲಾರ್ ದೀಪ 34.24 ಲಕ್ಷಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಕಿಂಡಿ ಅಣೆಕಟ್ಟು, ಗೋಕಟ್ಟೆ ರಚನೆ, ಅಲ್ಪ ಆಳದ ಬಾವಿಗಳು, ನಾಲಾ ತಡೆಗೋಡೆ, ಇತ್ಯಾದಿ ಕಾಮಗಾರಿಗಳು ಸೇರಿರುತ್ತವೆ.

ಸಿಬ್ಬಂದಿ ವಿವರ:- ಕೃಷಿ ಇಲಾಖೆಯ ವಿವಿಧ ಕಛೇರಿಗಳಿಗೆ ಒಟ್ಟು 84 ತಾಂತ್ರಿಕ ಹಾಗೂ 60 ತಾಂತ್ರಿಕೇತರ ಹುದ್ದೆಗಳು ಮಂಜೂರಾಗಿದ್ದು 28 ತಾಂತ್ರಿಕ ಹಾಗೂ 21 ತಾಂತ್ರೀಕೇತರ ಹುದ್ದೆಗಳು ಭರ್ತಿಯಾಗಿರುತ್ತದೆ. ಇಲಾಖೆಯಲ್ಲಿ ಒಟ್ಟು ಮಂಜೂರಾದ ಹುದ್ದೆಗಳಲ್ಲಿ 49 ಹುದ್ದೆ ಭರ್ತಿಯಾಗಿದ್ದು, ಶೇ. 66ರಷ್ಟು ಹುದ್ದೆಗಳು ಭರ್ತಿಯಾಗದೇ ಖಾಲಿ ಇದ್ದು, ಸಿಬ್ಬಂದಿಗಳ ಕೊರತೆ ಇರುತ್ತದೆ.

2017-18ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಸಾಧಿಸಿದ ಪ್ರಗತಿ ವಿವರ

ಯೋಜನೆಯ ಹೆಸರು	ಲೆಕ್ಕ ಶೀಷಿಕೆ ಲಿಂಕ್ ಪುಸ್ತಕದಂತೆ	ಬಿಡುಗಡೆಯಾದ ಅನುದಾನ (ರೂ.ಗಳಲ್ಲಿ)	ಪ್ರಗತಿ		ಪ್ರಗತಿ	
			ಭೌತಿಕ (ಹೆ.)	ಭೌತಿಕ (ಸಂ.)	ಆರ್ಥಿಕ ರೂ.ಗಳಲ್ಲಿ	ಶೇಕಡಾ
ಕೃಷಿ ಅಭಿವೃದ್ಧಿ ಚಟುವಟಿಕೆಗಳು						
ಇತರೆ ಕೃಷಿ ಯೋಜನೆಗಳು	2435-00-101-0-29	2460000	0	135	2457157	99.88
ಬೇಸಾಯಕ್ಕೆ ಸಂಬಂಧಿತ ಚಟುವಟಿಕೆಗಳು	2435-00-101-0-31	300000	0	30	299943	99.98
ಕೃಷಿ ಕಛೇರಿ ಕಟ್ಟಡಗಳು	2435-00-101-0-33	1000000	0	7	999956	99.99
ಸಾವಯವ ಗೊಬ್ಬರ ಯೋಜನೆ	2435-00-101-0-34	300000	0	90	299194	99.73
ರಾಷ್ಟ್ರೀಯ ಎಣ್ಣೆಕಾಳು, ಹಾಗೂ ತಾಳೆ ಬೆಳೆ ಅಭಿವೃದ್ಧಿ ಯೋಜನೆ	2435-00-101-0-03	560000	144	428	559881	99.98
ಸಸ್ಯ ಸಂರಕ್ಷಣಾ ಯೋಜನೆ	2435-00-101-0-63	180000	97	164	179566	99.75

ಕೃಷಿ ಜಾತ್ರೆ ಮತ್ತು ವಸ್ತು ಪ್ರದಶÀðನ	2435-00-101-0-65	59000	0	11	58668	99.44
ವಿಶೇಷ ಘಟಕ ಯೋಜನೆ	2225-00-101-0-64	175000	8.75	4	174990	99.99
ಗಿರಿಜನ ಉಪಯೋಜನೆ	2225-00-102-0-70	450000	2.50	8	448793	99.73
ಜಲಾನಯನ ಅಭಿವೃದ್ಧಿ ಚಟುವಟಿಕೆಗಳು						
ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	ಚೆಕ್ ಮುಖಾಂತರ	4139000	0	27	3424000	82.77
ಗಿರಿಜನ ಉಪಯೋಜನೆ	2225-00-102-0-70	550000	0	3	550000	100

ರೈತರ ಅನುಕೂಲಕ್ಕಾಗಿ ಇಲಾಖೆಯಿಂದ ಕೃಷಿ, ಕೃಷಿ ಸಂಬಂಧಿತ ವಿಷಯಗಳು ಹಾಗೂ ತಾಂತ್ರಿಕತೆಗಳು, ಹವಾಮಾನ ಆಧಾರಿತ ಮುನ್ಸೂಚನೆ ಮುಂತಾದವುಗಳನ್ನು ಕಿಸಾನ್ ಕಾಲ್ ಸೆಂಟರ್-1800-425-1551, ರೈತ ಸಹಾಯವಾಣಿ 1800-425-3553, ಅನ್ನದಾತ 1800-425-4085, ಕೃಷಿ ಮಾರಾಟವಾಹಿನಿ -1800-425-1552, ಹವಾಮಾನ ಮಾಹಿತಿ 080-22211118, ವರುಣಮಿತ್ತ, ಕೆ ಕಿಸಾನ್ ಕಿರು ಸಂದೇಶ, ಸಂವಹನ (ವಾಟ್ಸಪ್) ಗುಂಪು ರಚನೆ ಮೂಲಕ ಕಾಲಕಾಲಕ್ಕೆ ಒದಗಿಸಲಾಗುತ್ತಿದೆ.

ತೋಟಗಾರಿಕೆ ಇಲಾಖೆ

ಉಡುಪಿ ಜಿಲ್ಲೆಯ ಹವಾಗುಣ ಮತ್ತು ಮಣ್ಣು ವಿವಿಧ ಜಾತಿಯ ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ಅತ್ಯತ್ತಮವಾಗಿರುತ್ತದೆ. ತೋಟಗಾರಿಕೆ ಬೆಳೆಗಳು ಜಿಲ್ಲೆಯಲ್ಲಿ ರೈತರ ಮುಖ್ಯ ಆರ್ಥಿಕ ಮೂಲಗಳಾಗಿರುತ್ತದೆ. ಬಹಳ ಹಿಂದಿನಿಂದಲೂ ಜಿಲ್ಲೆಯಲ್ಲಿ ತೋಟದ ಬೆಳೆಗಳಾದ ತೆಂಗು, ಅಡಿಕೆ, ಗೋಡಂಬಿ, ಸಾಂಬಾರು ಬೆಳೆಗಳಾದ ಕಾಳುಮೆಣಸು, ಹಣ್ಣಿನ ಬೆಳೆಗಳಾದ ಮಾವು, ಚಿಕ್ಕು, ಬಾಳೆ, ಅನಾನಸ್, ತರಕಾರಿ ಬೆಳೆಗಳಾದ ಮಟ್ಟುಗುಳ್ಳ, ಮೆಣಸು, ಸಾಂಭಾರ ಸೌತೆಕಾಯಿ, ಮುಂತಾದವುಗಳನ್ನು ಬೆಳೆಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ಸುಗಂಧ ಬೆಳೆಗಾಳಾದ ರಕ್ತಚಂದನ ಪ್ರಮುಖ್ಯತೆಯನ್ನು ಗಳಿಸುತ್ತಿವೆ. ಪ್ರಸ್ತುತ ಜಿಲ್ಲೆಯ ಅಂದಾಜು ತೋಟಗಾರಿಕೆ ಬೆಳೆಗಳ ವಿಸ್ತೀರ್ಣ 55,784 ಹೆಕ್ಟೇರ್ ನಲ್ಲಿ ತೋಟದ ಮತ್ತು ಸಾಂಬಾರು ಬೆಳೆಗಳ ವಿಸ್ತೀರ್ಣ 51,174 ಹೆಕ್ಟೇರ್, ಹಣ್ಣಿನ ಬೆಳೆಗಳು 3112 ಹೆಕ್ಟೇರ್ ಮತ್ತು ಹೂವಿನ ಬೆಳೆಗಳು 242 ಹೆಕ್ಟೇರ್ ಪ್ರದೇಶದಲ್ಲಿ ಇರುತ್ತದೆ. ಜಿಲ್ಲೆಯ ಬ್ರಹ್ಮಾವರ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರವು ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಅಗತ್ಯ ಸಂಶೋಧನೆ ಕಾರ್ಯಕ್ರಮ ರೂಪಿಸುತ್ತಿದೆ. ಇಲಾಖೆಯ ಜಿಲ್ಲೆಯಲ್ಲಿ ಸಾಂಪ್ರಾದಾಯಿಕ ತೋಟಗಾರಿಕೆ ಬೆಳೆಗಳ ಕೃಷಿಯನ್ನು ಅಭಿವೃದ್ಧಿ ಪಡಿಸಲು ಹಾಗೂ ಜಿಲ್ಲೆಯಲ್ಲಿ ಬೆಳೆಯ ಬಹುದಾದ ಹೊಸ ತೋಟಗಾರಿಕೆ ಬೆಳೆಗಳನ್ನು ಪರಿಚಯಿಸಲು ವಿವಿಧ ಯೋಜನೆಗಳಲ್ಲಿ ಕಾರ್ಯಕ್ರಮಗಳನ್ನು 2017-18 ನೇ ಸಾಲಿಗೆ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲೆಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ತೋಟಗಾರಿಕೆ ಉಪನಿರ್ದೇಶಕರಿದ್ದು, ತಾಲೂಕು ಮಟ್ಟದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮತ್ತು ಅವರ ಸಿಬ್ಬಂದಿ ವರ್ಗದವರಿರುತ್ತಾರೆ.

ಇಲಾಖೆಯ ರೈತರಿಗೆ ಉತ್ತಮ ಗುಣಮಟ್ಟದ ವಿವಿಧ ತೋಟಗಾರಿಕೆ ಬೆಳೆಗಳ ಗಿಡಗಳನ್ನು ರೈತರಿಗೆ ಅಭಿವೃದ್ಧಿ ಪಡಿಸಿಕೊಡಲು ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳನ್ನು ತಾಲೂಕು ಮಟ್ಟಗಳಲ್ಲಿ ಸ್ಥಾಪಿಸಿದೆ. ಜಿಲ್ಲೆಯಲ್ಲಿ 2 ತೋಟಗಾರಿಕೆ ನರ್ಸರಿಗಳು ಹಾಗೂ 6 ತೋಟಗಾರಿಕೆ ಕ್ಷೇತ್ರಗಳು ಇರುತ್ತದೆ.

2017-18 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾದ ಯೋಜನೆಗಳ ಸಂಕ್ಷಿಪ್ತ ವರದಿ ಈ ಕೆಳಕಂಡಂತಿದೆ.

1. 2017-18 ನೇ ಸಾಲಿನ ತೆಂಗು ಬೀಜ ಸಂಗ್ರಹಣೆ ಹಾಗೂ ನರ್ಸರಿ ನಿರ್ವಹಣೆ ಯೋಜನೆಯಡಿಯಲ್ಲಿ 11935 ಬೀಜದಂತೆ ತೆಂಗಿನ ಕಾಯಿಗಳ ಬಿತ್ತನೆ ಮಾಡಲಾಗಿರುತ್ತದೆ.
2. ತೋಟಗಾರಿಕೆ ಕಟ್ಟಡಗಳ ಯೋಜನೆಯಡಿಯಲ್ಲಿ ಉಡುಪಿ ಹಾಗೂ ಕುಂದಾಪುರ ತಾಲೂಕಿನಲ್ಲಿ ರೂ. 7.00 ಲಕ್ಷ ವೆಚ್ಚದಲ್ಲಿ ಆಧುನಿಕರಣ ಕಾಮಗಾರಿ ಕೈಗೊಳ್ಳಲಾಗಿದೆ.

3. ತೋಟಗಾರಿಕೆ ಕ್ಷೇತ್ರ/ನರ್ಸರಿ ನಿರ್ವಹಣೆ ಯೋಜನೆಯಡಿಯಲ್ಲಿ ನರ್ಸರಿಗಳಲ್ಲಿ ರಾತ್ರಿ ಹಾಗೂ ಹಗಲು ಕೆಲಸದವರಿಗೆ ಕೂಲಿ ವೆಚ್ಚ ಪಾವತಿಸಲು ಮತ್ತು ಕ್ಷೇತ್ರಗಳಿಗೆ ಅವಶ್ಯಕವಿರುವ ವಿವಿಧ ಪರಿಕರಗಳ ಖರೀದಿಗಾಗಿ ಮತ್ತು ನಿರ್ವಹಣೆಗಾಗಿ ರೂ. 9.99549 ಲಕ್ಷಗಳನ್ನು ವ್ಯಯಿಸಲಾಗಿದೆ.
4. ಪ್ರಚಾರ ಮತ್ತು ಸಾಹಿತ್ಯ ಯೋಜನೆಯಡಿಯಲ್ಲಿ ಪ್ರಚಾರ ಸಾಮಾಗ್ರಿಗಳ ತಯಾರಿಕೆ, ಕನ್ನಡ ರಾಜೋತ್ಸವಕ್ಕೆ ಸ್ಥಬ್ಧ ಚಿತ್ರ ಪ್ರದರ್ಶನ ಏರ್ಪಡಿಸುವುದು, SLRM ಚಟುವಟಿಕೆಗಳ ಪ್ರೋತ್ಸಾಹಕ್ಕಾಗಿ ಫಲ ಪುಷ್ಪ ಪ್ರದರ್ಶನ ಆಯೋಜಿಸುವುದಕ್ಕಾಗಿ ರೂ. 4.48855 ಲಕ್ಷ ವ್ಯಯಿಸಲಾಗಿದೆ.
5. ರೈತರಿಗೆ ತರಭೇತಿ ಯೋಜನೆಯಡಿ 195 ರೈತ ಮಹಿಳೆಯರಿಗೆ ತೋಟಗಾರಿಕೆ ಯಲ್ಲಿನ ಸಂಸ್ಕರಣೆ ಬಗ್ಗೆ ಪ್ರಯೋಗಿಕ ತರಬೇತಿ ನೀಡಿದೆ ಹಾಗೂ ರೂ.0.98 ಲಕ್ಷ ವ್ಯಯಿಸಲಾಗಿದೆ.
6. ರೈತರಿಗೆ ಸಹಾಯ ಯೋಜನೆಯಡಿ ಪ್ರದೇಶ ವಿಸ್ತರಣೆ, ಸಾಮಾಜಿಕ ತೋಟಗಾರಿಕೆ ಹಾಗೂ ರೈತರು ಖರೀದಿಸಿದ ಸಸ್ಯ ಸಂರಕ್ಷಣೆ ಶೇ. 50 ರಂತೆ ರೂ.3.19 ಲಕ್ಷ ಸಹಾಯಧನ ವಿತರಿಸಲಾಗಿದೆ. ಹಾಗೂ ಪ್ರದೇಶ ವಿಸ್ತರಣೆಯನ್ನು 20 ಜನ ಫಲಾನುಭವಿಗಳಿಗೆ ರೂ.0.20 ಲಕ್ಷ ಸಹಾಯಧನ ನೀಡಲಾಗಿದೆ.
7. ವಿಶೇಷ ಘಟಕ (ರಾಜ್ಯ) ಯೋಜನೆಯಡಿ ಮನೆ ಮುಂದೆ ನೆಡಲು 219 ಫಲಾನುಭವಿಗಳಿಗೆ ತಲಾ 2 ರಂತೆ ತೆಂಗಿನ ಸಸಿಗಳನ್ನು ವಿತರಿಸಿದೆ.
8. ಗಿರಿಜನ ಉಪಯೋಜನೆ (ರಾಜ್ಯ) ಕಾರ್ಯಕ್ರಮದಡಿ ಮನೆ ಮುಂದೆ ನೆಡಲು 186 ಫಲಾನುಭವಿಗಳಿಗೆ ತಲಾ 2 ರಂತೆ ತೆಂಗಿನ ಸಸಿಗಳನ್ನು ವಿತರಿಸಿದೆ.
9. ಕೇಂದ್ರ ಪುರಸ್ಕೃತ ಸೂಕ್ಷ್ಮ ನೀರಾವರಿ ಯೋಜನೆಯಡಿ 2017-18 ನೇ ಸಾಲಿನಲ್ಲಿ 212.05 ಹೆಕ್ಟೇರ್ ಗೆ ರೂ. 117.16475 ಲಕ್ಷ ಸಹಾಯಧನ ವನ್ನು ಹನಿ ನೀರಾವರಿಗೂ, 42.24 ಹೆಕ್ಟೇರ್ ಗೆ ರೂ.12.06111 ಲಕ್ಷ ಸಹಾಯಧನವನ್ನು ತುಂತುರು ನೀರಾವರಿಗಾಗಿ ಪಾವತಿಸಲಾಗಿದೆ.
10. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ರೂ. 170.55162 ಲಕ್ಷ ಖರ್ಚು ಭರಿಸಲಾಗಿದ್ದು ವಿವಿಧ ತೋಟಗಾರಿಕೆ ಬೆಳೆಗಳನ್ನು 211.39 ಹೆ. ಪ್ರದೇಶದಲ್ಲಿ ವಿಸ್ತರಿಸಲಾಗಿದೆ ಮತ್ತು 1 ಗೇರು ಸಂಸ್ಕರನಾ ಘಟಕ 170.55162, 13 ಟ್ರ್ಯಾಕ್ಟರ್ ಗಳಿಗೆ ಸಹಾಯಧನ ವಿತರಿಸಲಾಗಿದೆ.

    ಸಂಸ್ಕರಣಾ ಘಟಕ 1, 5 ಹಸಿರು ಮನೆಗೆ ಸಹಾಯಧನ ವಿತರಿಸಿದೆ, 44.34 ಹೆ. ಪ್ರದೇಶಕ್ಕೆ ಪ್ಲಾಸ್ಟಿಕ್ ಹೊದಿಕೆ ಹಾಗು 1 ಪ್ಯಾಕ್ ಹೌಸ್ ಗೆ ಸಹಾಯಧನ ನೀಡಲಾಗಿದೆ. 1.60 ಹೆ. ಪಾಲಿ ಹೌಸ್ ಹಾಗೂ ನೆರಳು ಪರದೆಗೆ ಸಹಾಯಧನ ನೀಡಲಾಗಿದೆ.
11. ರಾಜ್ಯವಲಯ ಯೋಜನೆಯಡಿ ತೋಟಗಾರಿಕೆ ಉತ್ಪನ್ನಗಳ ಸಂಸಕರಣೆ ಮತ್ತು ಮೌಲ್ಯವರ್ಧನೆ ರೂ. 100.00 ಲಕ್ಷ ಸಹಾಯಧನವನ್ನು 12 ಗೇರು ಸಂಸ್ಕರಣಾ ಘಟಕಗಳಿಗೆ ವಿತರಿಸಲಾಗಿದೆ.
12. RKVY ತೋಟಗಾರಿಕೆಯಲ್ಲಿ ಯಾಂತ್ರಿಕರಣ ಯೋಜನೆಯಡಿ ರೂ.19.99 ಲಕ್ಷ ಸಹಾಯಧನವನ್ನು 212 ಉಪಕರಣಗಳಿಗಾಗಿ ಸಹಾಯಧನ ನೀಡಲಾಗಿದೆ.

13. 2017-18 ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ 3 ಹೊಸ ಗುಚ್ಚಗಳನ್ನು ಆಯ್ಕೆ ಮಾಡಿ ಗುಚ್ಚ ಪ್ರದೇಶದಲ್ಲಿ 55.21 ಕಸಿ ಕಾಳುಮೆಣಸಿನ ಹಾಗೂ 1 ಗುಚ್ಚವನ್ನು ಕಲ್ಲಂಗಡಿ ಬೆಳೆ ಮಾಡಿ 7 ಹೆ. ಪ್ರದೇಶ ವಿಸ್ತರಣೆ ಕೈಗೊಳ್ಳಲಾಗಿದೆ.

14. ಕೈತೋಟ ಮತ್ತು ತಾರಸಿ ತೋಟಗಳ ಉತ್ತೇಜನ ಕಾರ್ಯಕ್ರಮದಡಿ ರೂ.9.94805 ಲಕ್ಷ ಸಹಾಯಧನವನ್ನು 600 ಫಲಾನುಭವಿಗಳಿಗೆ ವಿತರಿಸಲಾಗಿದೆ.

15. ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ ಕಾರ್ಯಕ್ರಮದಡಿ ತೆಂಗಿನ ಮರಗಳ ಮರುನಾಟಿ ಹಾಗೂ ಪುನಃಶ್ಚೇತನ ರೂ.31.22795 ಲಕ್ಷ ವೆಚ್ಚ ವನ್ನು 85.64 ಹೆ.ಗಳಿಗೆ ಸಹಾಯಧನ ವಿತರಿಸಲಾಗಿದೆ.

16. ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 80.994 ಲಕ್ಷವನ್ನು ವೆಚ್ಚ ಮಾಡಲಾಗಿದ್ದು 234 ಅಡಿಕೆ ಪ್ರದೇಶ ವಿಸ್ತರಣೆ ಕಾಮಗಾರಿಗಳನ್ನು ಕೈಗೊಂಡು 30032 ಮಾನವದಿನಗಳ ಸೃಜನೆ ಮಾಡಲಾಗಿರುತ್ತದೆ. 8 ತೆಂಗು 09 ಕಾಳುಮೆಣಸು, 11 ಗೋಡಂಬಿ 3 ಅಡಿಕೆ ಪುನಃಶ್ಚೇತನ ಕಾಮಗಾರಿಗಳನ್ನು ಕೈಗೊಂಡು 1849 ಮಾನವದಿನಗಳ ಸೃಜನೆ ಮಾಡಲಾಗಿರುತ್ತದೆ. ತೋಟಗಾರಿಕೆ ಕ್ಷೇತ್ರ ಮತ್ತು ನಿರ್ವಹಣೆ ಕಾಮಗಾರಿಗಳಲ್ಲಿ ಕ್ಯಾಚ್ ಪಿಟ್ ನಿರ್ಮಾಣ ಕಾಮಗಾರಿ ಕೈಗೊಂಡಿದ್ದು 84 ಮಾನವದಿನಗಳ ಸೃಜನೆ ಮಾಡಲಾಗಿರುತ್ತದೆ. ಒಟ್ಟಾರೆ 31965 ಮಾನವ ದಿನಗಳ ಸೃಜನೆ ಆಗಿರುತ್ತದೆ.

17. ಆಯವ್ಯಯ ಘೋಷಣೆ ಕಾರ್ಯಕ್ರಮದಲ್ಲಿ ಇಲಾಖೆ ನಿಗದಿಪಡಿಸಿದ ಕಾರ್ಯಕ್ರಮಗಳಾದ 3.73 ಲಕ್ಷ ಸಸಿ ವತರಣೆ ಕಾರ್ಯಕ್ರಮಕ್ಕೆ 3.39 ಲಕ್ಷ ಸಸಿ ವಿತರಣೆ ಮಾಡಲಾಗಿರುತ್ತದೆ. ಮಾದರೀ ತೋಟಗಾರಿಕೆ ಕ್ಷೇತ್ರಕ್ಕೆ ರೂ. 43.02 ಲಕ್ಷ ಅನುದಾನ ಬಳಕೆ ಮಾಡಲಾಗಿರುತ್ತದೆ. ಗೇರು ಅಭಿವೃದ್ಧಿ ಕಾರ್ಯಕ್ರಮದಲ್ಲಿ ರೂ.17.62 ಲಕ್ಷ ಪ್ರಗತಿ ಸಾಧಿಸಲಾಗಿರುತ್ತದೆ. ತೆಂಗು ಪುನಃಶ್ಚೇತನ ಕಾಮಗಾರಿಗಳಲ್ಲಿ ರೂ. 31.22795 ಲಕ್ಷ ಪ್ರಗತಿ ಸಾಧಿಸಲಾಗಿರುತ್ತದೆ 104 ಲಕ್ಷ ಸಂಸ್ಕರಣಾ ಘಟಕಗಳಿಗೆ ಪ್ರಗತಿ ಸಾಧನೆ ಆಗಿರುತ್ತದೆ. ಹನಿ ನೀರಾವರಿ ಹಾಗು ತುಂತುರು ನಿರಾವರಿಗಾಗಿ ರೂ. 137.08 ಲಕ್ಷ ಪ್ರಗತಿ ಸಾಧನೆ ಮಾಡಲಾಗಿರುತ್ತದೆ. ಒಟ್ಟಾರೆ ನಿಗಧಿಪಡಿಸಿದ ಾರ್ಥಿಕ ಗುರಿಗಳಿಗೆ ಶೇ. 56.65 ಪ್ರಗತಿ ಸಾಧನೆ ಆಗಿರುತ್ತದೆ. ಭೌತಿಕ ಗುರಿಗಳಿಗೆ ಶೇ. 65 ಪ್ರಗತಿ ಸಾಧನೆ ಆಗಿರುತ್ತದೆ.

18. ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡ ಅಭಿವೃದ್ಧಿಗಾಗಿ ಮೀಸಲಾದ ಯೋಜನೆಗಳಡಿ ಪರಿಶಿಷ್ಟ ಜಾತಿ ವರ್ಗದ ಫಲಾನುಭವಿಗಳ ಆರ್ಥಿಕ ಗುರಿ ಶೇ. 57.95 ಲಕ್ಷ ಕ್ಕೆ 57.85 ಲಕ್ಷ ಅನುದಾನ ಹಾಗು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಆರ್ಥಿಕ ಗುರಿ ರೂ. 80.38 ಲಕ್ಷ ಅನುದಾನಕ್ಕೆ ರೂ. 80.71 ಲಕ್ಷ ಅನುದಾನವನ್ನು ಖರ್ಚು ಭರಿಸಲಾಗಿರುತ್ತದೆ. ಒಟ್ಟಾರೆ ಶೇ. 99.96 ಆರ್ಥಿಕ ಪ್ರಗತಿ ಸಾಧನೆ ಆಗಿರುತ್ತದೆ.

2017-18 ನೇ ಸಾಲಿಗೆ ಜಿಲ್ಲಾ ಪಂಚಾಯತ್ ಯೋಜನೆಗಳಲ್ಲಿ ಆರ್ಥಿಕ ಪ್ರಗತಿಯ ವಿವರ (31.03.2018 ರ ಅಂತ್ಯಕ್ಕೆ)

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೊಜನೆಗಳ ವಿವರ	ವಾರ್ಷಿಕ ಆರ್ಥಿಕ ಗುರಿ	ಬಿಡುಗಡೆಯಾದ ಅನುದಾನ	ಖರ್ಚು
1	ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ತಾಳೆ ಬೆಳೆ ಅಭಿವೃದ್ಧಿ ಯೋಜನೆ (D-01)	3.60	3.60	3.60
2	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ (ಡಿ-02)	2.00	2.00	2.00
3	ತೋಟಗಾರಿಕೆ ಕಟ್ಟಡಗಳು (ಡಿ-03)	7.00	7.00	7.00
4	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ (ಡಿ-04)	10.00	10.00	9.99549
5	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ (ಡಿ-05)	5.00	5.00	4.99774
6	ಪ್ರಚಾರ ಮತ್ತು ಸಾಹಿತ್ಯ (ಡಿ-06)	4.50	4.50	4.4885
7	ಜೇನು ಸಾಕಣೆ (ಡಿ-08)	2.50	2.50	2.49724
ಒಟ್ಟು		**34.60**	**34.60**	**34.579**

2017-18 ನೇ ಸಾಲಿಗೆ ತಾಲೂಕು ಪಂಚಾಯತ್ ಯೋಜನೆಗಳಲ್ಲಿ ಆರ್ಥಿಕ ಪ್ರಗತಿಯ ವಿವರ (31.03.2018 ರ ಅಂತ್ಯಕ್ಕೆ) ರೂ. ಲಕ್ಷಗಳಲ್ಲಿ

ಕ್ರ.ಸಂ	ಯೊಜನೆಗಳ ವಿವರ	ವಾರ್ಷಿಕ ಆರ್ಥಿಕ ಗುರಿ	ಬಿಡುಗಡೆಯಾದ ಅನುದಾನ	ಖರ್ಚು
1	ರೈತರಿಗೆ ಸಹಾಯ (ಡಿ-09)	3.40	3.39	3.39
2	ರೈತರಿಗಾಗಿ ತರಬೇತಿ (ಡಿ-10)	1.00	0.98	0.98
3	ವಿಶೇಷ ಘಟಕ ಯೋಜನೆ (ರಾಜ್ಯ) (ಡಿ-11)	1.50	1.50	1.50
4	ಗಿರಿಜನ ಉಪಯೋಜನೆ (ರಾಜ್ಯ) (ಡಿ-12)	1.42	1.42	1.42
ಒಟ್ಟು		7.32	7.29	7.29

2017-18 ನೇ ಸಾಲಿನ ವಿವಿದ ರಾಜ್ಯವಲಯ ಯೋಜನೆಗಳ ಖರ್ಚಿನ ವಿವರ (31.03.2018 ರ ಅಂತ್ಯಕ್ಕೆ)

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೊಜನೆಗಳ ವಿವರ	ವಾರ್ಷಿಕ ಆರ್ಥಿಕ ಗುರಿ	ಬಿಡುಗಡೆಯಾದ ಅನುದಾನ	ಖರ್ಚು	ಷರಾ
1	ನಿರ್ದೇಶನ ಮತ್ತು ಆಡಳಿತ (ಎಸ್-01)	9.80	7.80	7.37720	
2	ಪ.ಜಾ/ಪ.ಪಂ ಉಪಯೋಜನೆಯಡಿ ಉಳಿಕೆ ಅನುದಾನ	30.689	30.689	30.67640	
3	ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ (ಎಸ್-10)	222.348	222.6134	222.50229	
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ (ಎಸ್-11)	23.65	23.65	23.64830	
5	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ (ಅಣಬೆ ಕೃಷಿ ತರಬೇತಿ) (ಎಸ್-14)	2.35	2.35	2.15588	
6	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ (ಎಸ್-15)	7.25	7.25	7.19121	

7	ಮಧುವನ ಹಾಗು ಏನು ಸಾಕನೆ ಯೋಜನೆ (ಎಸ್-21)	6.49	6.49	6.47965	
8	ಕೃಷಿ ಭಾಗ್ಯ ಯೋಜನೆ (ತರಕಾರಿ ಬೀಜಗಳ ಮಿನಿಕಿಟ್ ವಿತರಣೆ ಕಾರ್ಯಕ್ರಮ)	20.00	20.00	19.99150	
ಒಟ್ಟು		**322.577**	**320.8424**	**320.02243**	

2017-18 ನೇ ಸಾಲಿನ ವಿವಿದ ಕೇಂದ್ರವಲಯ ಯೋಜನೆಗಳ ಖರ್ಚಿನ ವಿವರ (31.03.2018 ರ ಅಂತ್ಯಕ್ಕೆ)

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೊಜನೆಗಳ ವಿವರ	ವಾರ್ಷಿಕ ಆರ್ಥಿಕ ಗುರಿ	ಬಿಡುಗಡೆಯಾದ ಅನುದಾನ	ಖರ್ಚು	ಷರಾ
1	(ಎಸ್-04) ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ	175.80792	137.08	137.07765	
2	(ಎಸ್-06) ಉತ್ಪಾದನಾ ಸುದಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ	42.82675	42.73440	42.63553	
3	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ (ಎಸ್-12)	170.599	170.60	170.55162	
4	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	22.88	22.88	22.8799	
5	ರಾಷ್ಟ್ರೀಯ ಆಯುಷ್ ಮಿಷನ್	10.6162	3.102	3.09864	
ಒಟ್ಟು		**422.72987**	**376.3964**	**376.24334**	

ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು, ಉಡುಪಿ ಜಿಲ್ಲೆ, ಉಡುಪಿ.

ಕಿರು ಪರಿಚಯ:

ಉಡುಪಿ ಜಿಲ್ಲೆಯ ಗ್ರಾಮೀಣ ನಿವಾಸಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಪಶು ಸಂಗೋಪನೆಯ ಪಾತ್ರ ಬಹಳ ಇದೆ. ಕರಾವಳಿ ತೀರದ ಜಿಲ್ಲೆಯಾದ ಉಡುಪಿಯಲ್ಲಿ ಮೀನುಗಾರಿಕೆ ಪ್ರಮುಖ ಕಸುಬಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೇವಲ ರೈತರೇ ಅಲ್ಲದೆ ಜಿಲ್ಲೆಯ ಬಹುತೇಕ ಕೃಷಿ ಕಾರ್ಮಿಕ ವರ್ಗದವರೂ ಸಹ ಪಶುಪಾಲನೆಯನ್ನು ಕಸುಬಾಗಿ ಹಲವೆಡೆಗಳಲ್ಲಿ ಮುಖ್ಯ ಕಸುಬಾಗಿಯೇ ನಡೆಸುತ್ತಿರುವುದು ಗ್ರಾಮೀಣ ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಪಶು ಪಾಲನೆಯು ವಹಿಸಿರುವ ಪಾತ್ರಕ್ಕೆ ಸಾಕ್ಷಿಯಾಗಿದೆ. ಈ ನಿಟ್ಟಿನಲ್ಲಿ ಉತ್ತಮ ಗುಣಮಟ್ಟದ ಹಾಲು,ಮೊಟ್ಟೆ, ಮಾಂಸ ಮತ್ತು ಉಣ್ಣೆ ಮುಂತಾದ ಪ್ರಾಣಿ ಜನ್ಯ ಉತ್ಪನ್ನಗಳ ಉತ್ಪಾದನೆಯಲ್ಲಿ ತೊಡಗಿಸಿರುವ ಹೆಚ್ಚುವರಿ ಬಂಡವಾಳ ಪಶು ಸಂಗೋಪನೆಗೆ ಪ್ರಾಮುಖ್ಯತೆ ನೀಡಿದೆ.

ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ಜಿಲ್ಲೆಯ ಪಶು ಸಂಪತ್ತಿನ ಆರೋಗ್ಯ ರಕ್ಷಣೆ, ಜಾನುವಾರು ಅಭಿವೃದ್ಧಿ ಮತ್ತು ಪ್ರಾಣಿ ಕಲ್ಯಾಣ ಕಾರ್ಯಕ್ರಮಗಳನ್ನು ಜಿಲ್ಲೆಯಾದ್ಯಂತೆ ವ್ಯಾಪಕವಾಗಿ ಹಮ್ಮಿಕೊಂಡು ಕರ್ತವ್ಯ ನಿರತವಾಗಿದೆ.

ಜಿಲ್ಲೆಯ ಪಶು ಸಂಪತ್ತು :

19 ನೇ ರಾಷ್ಟ್ರೀಯ ಜಾನುವಾರು ಗಣತಿಯಂತೆ ವಿವರಗಳು ಕೆಳಕಂಡಂತಿವೆ. ಉಡುಪಿ ಜಿಲ್ಲೆಯಲ್ಲಿ 3.62 ಲಕ್ಷ ಜಾನುವಾರುಗಳು ಮತ್ತು 11.94 ಲಕ್ಷ ಕುಕ್ಕುಟಗಳು ಸಂಪತ್ತು ಇದೆ. ತಾಲ್ಲೂಕುವಾರು ವಿವಿಧ ಜಾನುವಾರುಗಳ ಸಂಖ್ಯಾ ವಿವರವನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ	ಜಾನುವಾರು ವಿವರ	ಉಡುಪಿ ತಾ:	ಕುಂದಾಪುರ ತಾ:	ಕಾರ್ಕಳ ತಾ:	ಜಿಲ್ಲೆಯ ಒಟ್ಟು
1	ಸ್ಥಳೀಯ ದನಗಳು	31339	80722	42171	154232
2	ಮಿಶ್ರತಳಿ ದನಗಳು	51059	27246	18012	96317
3	ಎಮ್ಮೆಗಳು	2450	4342	1966	8758
4	ಕುರಿಗಳು	38	53	9	100
5	ಆಡುಗಳು	4251	1293	751	6295

6	ಹಂದಿಗಳು	1672	844	328	2844
7	ನಾಯಿಗಳು	36090	30131	26361	92582
8	ಇತರೆ	421	128	69	618
9	ಒಟ್ಟು	127320	144759	89667	361746
10	ಕುಕ್ಕುಟಗಳು	560870	470123	162779	1193772

ಜಿಲ್ಲೆಯಲ್ಲಿನ ಇಲಾಖಾ ಸಂಸ್ಥೆಗಳು

ಸಂಸ್ಥೆ	ಉಡುಪಿ	ಕುಂದಾಪುರ	ಕಾರ್ಕಳ	ಒಟ್ಟು
ಉಪನಿರ್ದೇಶಕರ ಕಚೇರಿ	1	–	–	1
ಪಶು ವೈದ್ಯಕೀಯ ಪಾಲಿಕ್ಲಿನಿಕ್	1	–	–	1
ತಾಲ್ಲೂಕು ಪಶು ವೈದ್ಯಾಧಿಕಾರಿ (ಆಡಳಿತ) ಕಚೇರಿ	1	1	1	3
ಪಶು ವೈದ್ಯಕೀಯ ಆಸ್ಪತ್ರೆ	3	3	3	9
ಪಶು ಚಿಕಿತ್ಸಾಲಯ	18	12	8	38
ಸಂಚಾರಿ ಪಶು ಚಿಕಿತ್ಸಾಲಯ	1	1	1	3
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	13	11	12	36
ಕುಕ್ಕುಟ ವಿಸ್ತರಣಾ ಕೇಂದ್ರ	–	1	–	1
ಒಟ್ಟು	**38**	**29**	**25**	**92**

ಆಡಳಿತ ವರ್ಗದ ರೇಖಾ ಚಿತ್ರ:

ಉಪ ನಿರ್ದೇಶಕರು			
ಉಪನಿರ್ದೇಶಕರ ಕಚೇರಿ ಸಿಬ್ಬಂದಿ	ತಾಲ್ಲೂಕು ಮಟ್ಟದ ಪಶು ಆಸ್ಪತ್ರೆಗಳು	ಇತರೆ ಪಶು ಆಸ್ಪತ್ರೆಗಳು	ಪಶು ಚಿಕಿತ್ಸಾಲಯಗಳು
1) ಸಹಾಯಕ ನಿರ್ದೇಶಕರು 2) ಆಡಳಿತ ಸಹಾಯಕರು 3) ಜಾನುವಾರು ಅಭಿವೃದ್ಧಿ ಅಧಿಕಾರಿ 4) ಕಚೇರಿ ಅಧೀಕ್ಷಕರು 5) ಪ್ರ.ದ.ಸಹಾಯಕರು 6) ದ್ವಿ.ದ.ಸಹಾಯಕರು 7) ಬೆರಳಚ್ಚುಗಾರರು 8) ವಾಹನ ಚಾಲಕರು 9) ಡಿ' ದರ್ಜೆ ನೌಕರರು	1) ಸಹಾಯಕ ನಿರ್ದೇಶಕರು 2) ಪಶು ವೈದ್ಯಾಧಿಕಾರಿಗಳು (ವಿಸ್ತರಣೆ/ ಸಂಚಾರಿ) 3) ದ್ವಿ.ದ.ಸಹಾಯಕರು 4) ಜಾನುವಾರು ಅಭಿವೃದ್ಧಿ ಅಧಿಕಾರಿ 5) ಹಿರಿಯ ಪಶು ಪರೀಕ್ಷಕರು/ ಪಶು ವೈದ್ಯಕೀಯ ಪರೀಕ್ಷಕರು 6) ಪಶು ವೈದ್ಯಕೀಯ ಸಹಾಯಕರು 7) ವಾಹನ ಚಾಲಕರು 8) ಡಿ' ದರ್ಜೆ ನೌಕರರು	1)ಸಹಾಯಕ ನಿರ್ದೇಶಕರು 2) ಜಾನುವಾರು ಅಧಿಕಾರಿ 3) ಹಿರಿಯ ಪಶು ಪರೀಕ್ಷಕರು/ ಪಶು ವೈದ್ಯಕೀಯ ಪರೀಕ್ಷಕರು 4)ಪಶು ವೈದ್ಯಕೀಯ ಸಹಾಯಕರು 5) ಡಿ' ದರ್ಜೆ ನೌಕರರು	1) ಪಶು ವೈದ್ಯಾಧಿಕಾರಿ 2) ಹಿರಿಯ ಪಶು ಪರೀಕ್ಷಕರು/ ಪಶು ವೈದ್ಯಕೀಯ ಪರೀಕ್ಷಕರು 3) ಡಿ' ದರ್ಜೆ ನೌಕರರು

ಪಾಲಿಕ್ಲಿನಿಕ್, ಉಡುಪಿ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು
1) ಉಪ ನಿರ್ದೇಶಕರು 2) ಮುಖ್ಯ ಪಶು ವೈದ್ಯಾಧಿಕಾರಿ 3) ಲ್ಯಾಬ್/ ಎಕ್ಸರೇ ಟೆಕ್ನೀಶಿಯನ್ 4) ಪ್ರ.ದ.ಸಹಾಯಕರು 5) ಪಶು ವೈದ್ಯಕೀಯ ಪರೀಕ್ಷಕರು 6) ವಾಹನ ಚಾಲಕರು 7) ಡಿ' ದರ್ಜೆ ನೌಕರರು	1) ಹಿರಿಯ ಪಶು ಪರೀಕ್ಷಕರು/ ಪ.ವೈದ್ಯಕೀಯ ಪರೀಕ್ಷಕರು 2) ಪಶು ವೈದ್ಯಕೀಯಸಹಾಯಕರು 3) ಡಿ' ದರ್ಜೆ ನೌಕರರು

31.03.2018 ರಲ್ಲಿದ್ದಂತೆ ಜಿಲ್ಲೆಯ ಸಿಬ್ಬಂದಿ ವಿವರ:

ಕ್ರ. ಸಂ.	ಹುದ್ದೆ	ಒಟ್ಟು ಹುದ್ದೆಗಳು		
		ಮಂಜೂರಾತಿ	ಭರ್ತಿ	ಖಾಲಿ
1	ಉಪನಿರ್ದೇಶಕರು	2	2	0
2	ಸಹಾಯಕ ನಿರ್ದೇಶಕರು	11	11	0
3	ಪಶು ವೈದ್ಯಾಧಿಕಾರಿ	46	28	18
4	ಆಡಳಿತ ಸಹಾಯಕರು	1	0	1

5	ಜಾನುವಾರು ಅಭಿವೃದ್ಧಿ ಅಧಿಕಾರಿ	4	4	0
6	ಕಛೇರಿ ಅಧೀಕ್ಷಕರು	1	1	0
7	ಜಾನುವಾರು ಅಧಿಕಾರಿ	9	4	5
8	ಹಿರಿಯ ಪಶು ವೈದ್ಯಕೀಯ ಪರೀಕ್ಷಕರು	46	25	21
9	ಪ್ರಥಮ ದರ್ಜೆ ಸಹಾಯಕರು	3	1	2
10	ಪಶು ವೈದ್ಯಕೀಯ ಪರೀಕ್ಷಕರು	33	9	24
11	ಲ್ಯಾಬ್ ಟೆಕ್ನಿಷಿಯನ್	1	0	1
12	ದ್ವಿತೀಯ ದರ್ಜೆ ಸಹಾಯಕರು	5	3	2
13	ಬೆರಳಚ್ಚುಗಾರರು	1	1	0
14	ಪಶು ವೈದ್ಯಕೀಯ ಸಹಾಯಕರು	48	7	41
15	ವಾಹನ ಚಾಲಕರು	5	0	5
16	ಡಿ" ದರ್ಜೆ ನೌಕರರು	141	10	131
	ಒಟ್ಟು	357	106	251

ಕಟ್ಟಡಗಳು:

ಇಲಾಖಾ ಲೆಕ್ಕ ಶೀರ್ಷಿಕೆ: 2403–00–101–0–28 ಯೋಜನೆಯಡಿ ಬಿಡುಗಡೆಯಾದ ರೂ.26.00 ಲಕ್ಷಗಳ ಅನುದಾನವನ್ನು ಈ ಕೆಳಕಂಡ ವಿವರದಂತೆ ಬಳಸಿಕೊಳ್ಳಲಾಗಿದೆ.

ಕ್ರ.ಸಂ	ವಿವರ	ರೂ.ಲಕ್ಷಗಳಲ್ಲಿ
1	ಉಪ ನಿರ್ದೇಶಕರ ಕಚೇರಿಯ ಕಿಟಕಿ ಬಾಗಿಲು ಮತ್ತು ಶೌಚಾಲಯ ದುರಸ್ಥಿ ಹಾಗೂ ನವೀಕರಣ	3.70
2	ಉಡುಪಿ ಪಾಲಿ ಕ್ಲಿನಿಕ್ ಹಿಂಭಾಗದಲ್ಲಿನ ವಸತಿ ಗೃಹ ದುರಸ್ಥಿ	2.50
3	ಕಾಪು ಪಶು ಆಸ್ಪತ್ರೆಯ ವಿದ್ಯುತ್ ದುರಸ್ಥಿ ಮತ್ತು ನೀರಿನ ವ್ಯವಸ್ಥೆ	0.50
4	ಕೋಟ ಪಶು ಆಸ್ಪತ್ರೆಯಲ್ಲಿ ಟ್ರೇವೀಸ್ ಶೆಡ್ ನಿರ್ಮಾಣ	0.50
5	ಪ್ರಾ.ಪ.ಚಿ.ಕೇಂದ್ರ, ಕೊಕ್ಕರ್ಣೆ ಕಟ್ಟಡದ ಮೇಲ್ಛಾವಣಿ ರಿಪೇರಿ	0.50
6	ಪ್ರಾ.ಪ.ಚಿ.ಕೇಂದ್ರ, ಮಣಿಪುರ ಕಟ್ಟಡದ ಮೇಲ್ಛಾವಣಿ, ಶೌಚಾಲಯ ರಿಪೇರಿ ಮತ್ತು ಸುಣ್ಣ ಬಣ್ಣ	0.75
7	ಪ್ರಾ.ಪ.ಚಿ.ಕೇಂದ್ರ, ಮುದರಂಗಡಿ ಕಟ್ಟಡದ ಕಿಟಕಿ ಬಾಗಿಲು ರಿಪೇರಿ ಮತ್ತು ಸುಣ್ಣ ಬಣ್ಣ	0.50
8	ಪಶು ಆಸ್ಪತ್ರೆ, ಉಡುಪಿ ಆರಣದಲ್ಲಿರುವ ಗಿರಿರಾಜ ಕೋಳಿ ಶೆಡ್ ಸುತ್ತಮುತ್ತ ಅಭಿವೃದ್ಧಿಗೊಳಿಸುವುದು	0.50
9	ಬೈಂದೂರು ಪಶು ಆಸ್ಪತ್ರೆಗೆ ಆವರಣಗೋಡೆ ನಿರ್ಮಾಣ	2.00
10	ಬಿದ್ಕಲ್‌ಕಟ್ಟೆ ಪಶು ಚಿಕಿತ್ಸಾಲಯಕ್ಕೆ ಶೌಚಾಲಯ ನಿರ್ಮಾಣ	0.50
11	ಅಮಾಸೆಬೈಲು ಪಶು ಚಿಕಿತ್ಸಾಲಯದ ಕಟ್ಟಡದ ಮೇಲ್ಛಾವಣಿ ರಿಪೇರಿ ಮತ್ತು ಸುಣ್ಣ ಬಣ್ಣ	0.75

12	ಪ್ರಾ.ಪ.ಚಿ.ಕೇಂದ್ರ, ಕಂಡ್ಲೂರು ಇಲ್ಲಿನ ನೀರಿನ ವ್ಯವಸ್ಥೆ	0.75
13	ಪ್ರಾ.ಪ.ಚಿ.ಕೇಂದ್ರ, ಕುಂಭಾಶಿಯ ಕಿಟಕಿ ಬಾಗಿಲು ರಿಪೇರಿ ಮತ್ತು ಮೇಲ್ಛಾವಣಿ ರಿಪೇರಿ	0.75
14	ಪ್ರಾ.ಪ.ಚಿ.ಕೇಂದ್ರ, ಮಾಂಡಿಮೂರುಕೈ – ವಿದ್ಯುತ್ ದುರಸ್ಥಿ	0.30
15	ಅಜೆಕಾರು ಪಶು ಆಸ್ಪತ್ರೆಯ ಕಿಟಕಿ ಬಾಗಿಲು ರಿಪೇರಿ ಮತ್ತು ಮೇಲ್ಛಾವಣಿ ರಿಪೇರಿ, ಸುಣ್ಣ ಬಣ್ಣ	1.00
16	ಉಡುಪಿ ಪಾಲಿ ಕ್ಲಿನಿಕ್ ಕಚೇರಿಯ ಕಿಟಕಿ ಬಾಗಿಲು ಮತ್ತು ಇತರ ದುರಸ್ಥಿ ಕಾಮಗಾರಿ	1.00
17	ಪ್ರಾ.ಪ.ಚಿ.ಕೇಂದ್ರ, ಶಿರ್ಲಾಲು – ಕಿಟಕಿ ಬಾಗಿಲು ರಿಪೇರಿ ಮತ್ತು ಮೇಲ್ಛಾವಣಿ ರಿಪೇರಿ	0.50
18	ಪ್ರಾ.ಪ.ಚಿ.ಕೇಂದ್ರ, ಹೊಸ್ಮಾರು – ಕಿಟಕಿ ಬಾಗಿಲು ರಿಪೇರಿ ಮತ್ತು ಮೇಲ್ಛಾವಣಿ ರಿಪೇರಿ	1.50
19	ವಂಡ್ಸೆ ಪಶು ಚಿಕಿತ್ಸಾಲಯದಲ್ಲಿ ಟ್ರೇವಿಸ್ ಶೆಡ್ ನಿರ್ಮಾಣ	0.50
20	ಕಾರ್ಕಳ ಪಶು ಆಸ್ಪತ್ರೆಯ ಆವರಣದಲ್ಲಿರುವ ಗಿರಿರಾಜ ಕೋಳಿ ಸಾಕಾಣಿಕಾ ಕೇಂದ್ರದ ಸಮಗ್ರ ರಿಪೇರಿ	2.50
21	ಉಡುಪಿ ಪಶು ಆಸ್ಪತ್ರೆಗೆ ಸಭಾ ಭವನ ನಿರ್ಮಾಣ (900 ಚ.ಅ.)	4.00
22	ದ್ರವಸಾರಜನಕ ಸೈಲೋ ಸ್ಥಾಪನೆ ಕಾರ್ಯಾರಂಭಕ್ಕೆ ಅಗತ್ಯವಿರುವ ಸಿದ್ದತೆ	0.50
	ಒಟ್ಟು	**26.00**

ದೊಡ್ಡ ರೋಗ ನಿವಾರಣಾ ಯೋಜನೆಯ ಕಾರ್ಯಕ್ರಮಗಳು:

ಜಾನುವಾರುಗಳಲ್ಲಿ ಕಾಣಿಸಿಕೊಳ್ಳಬಹುದಾದ ಭೀಕರ ಸಾಂಕ್ರಮಿಕ ರೋಗವಾದ ದೊಡ್ಡ ರೋಗದ ಬಗ್ಗೆ ತೀವ್ರನಿಗಾ ವಹಿಸಲು ಜಿಲ್ಲೆಯಲ್ಲಿ 2017–18 ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿ ನಿರ್ವಹಿಸಲಾಗಿತ್ತು.

- ಹಳ್ಳಿಗಳಲ್ಲಿ ದೊಡ್ಡ ರೋಗದಂತಹ ಕಾಯಿಲೆಯನ್ನು ಪತ್ತೆಹಚ್ಚುವ ಕಾರ್ಯಕ್ರಮದಲ್ಲಿ ವರ್ಷದಲ್ಲಿ ಒಂದು ಬಾರಿ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿ ದೊಡ್ಡ ರೋಗ/ಪಿಪಿಆರ್ ಕಾಯಿಲೆ ಇಲ್ಲದಿರುವ ಬಗ್ಗೆ ತಾಂತ್ರಿಕ ಸಿಬ್ಬಂದಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿರುತ್ತಾರೆ.
- ಹೆದ್ದಾರಿಗಳಲ್ಲಿ ಬರುವ ಹಳ್ಳಿಗಳಲ್ಲಿ ದೊಡ್ಡ ರೋಗ ಪತ್ತೆ ಹಚ್ಚುವ ಕಾರ್ಯಕ್ರಮದಡಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಅಕ್ಕಪಕ್ಕದ 1 ಕಿ.ಮೀ ವ್ಯಾಪ್ತಿಯ ಹಳ್ಳಿಗಳಲ್ಲಿ ಪ್ರತಿ ತಿಂಗಳೂ ಇಲಾಖೆಯ ತಾಂತ್ರಿಕ ಸಿಬ್ಬಂದಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿರುತ್ತಾರೆ.
- ಪಶು ವೈದ್ಯಕೀಯ ಸಂಸ್ಥೆಗಳಿಗೆ ಬರುವ ರಾಸುಗಳ ಆರೋಗ್ಯ ತಪಾಸಣಾ ಅವಧಿಯಲಿ ದೊಡ್ಡ ರೋಗ/ಪಿಪಿಆರ್ ಕಾಯಿಲೆಯ ಲಕ್ಷಣಗಳು ಕಂಡು ಬಂದಲ್ಲಿ ಅಂತಹ ರಾಸುಗಳನ್ನು ತೀವ್ರ ಪರಿಶೀಲನೆಗೆ ಒಳಪಡಿಸಿ ರಕ್ತದ ಮಾದರಿಗಳ ಪರಿಶೀಲನೆ ಮಾಡಿ ಫಲಿತಾಂಶವನ್ನು ದಾಖಲಿಸಿ ದೊಡ್ಡ ರೋಗ/ಪಿಪಿಆರ್ ಕಾಯಿಲೆ ಇಲ್ಲದ ಬಗ್ಗೆ ಇಲಾಖೆಯ ಅಧಿಕಾರಿಗಳು ಪರಿಶೀಲನಾ ವರದಿ ಸಲ್ಲಿಸಿರುತ್ತಾರೆ.

ಕ್ರ.ಸಂ	ಕಾರ್ಯಕ್ರಮ	ಗುರಿ	ಸಾಧನೆ	ಶೇಕಡಾವಾರು
1	ಹಳ್ಳಿಗಳಲ್ಲಿ ದೊಡ್ಡ ರೋಗ ಪತ್ತೆ	2376	2376	100
2	ಹೆದ್ದಾರಿಗಳಲ್ಲಿ ಹಳ್ಳಿಗಳಲ್ಲಿ ದೊಡ್ಡ ರೋಗ ಪತ್ತೆ	93	93	100
3	ದೈನಂದಿನ ಪುಸ್ತಕದಲ್ಲಿ ದೊಡ್ಡ ರೋಗ ಪತ್ತೆ	156	157	101

ಜಾನುವಾರು ಅಭಿವೃದ್ಧಿ ಕಾರ್ಯಕ್ರಮ:

ಜಿಲ್ಲೆಯ ಪಶು ವೈದ್ಯಕೀಯ ಸಂಸ್ಥೆಗಳ ಮೂಲಕ ಜಾನುವಾರುಗಳ ಚಿಕಿತ್ಸೆ ಹಾಗೂ ಶುಶ್ರೂಷೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಕಾರ್ಯನಿರತ ಸಿಬ್ಬಂದಿ ಲಭ್ಯವಿರುವ ಎಲ್ಲಾ ಔಷಧಿಗಳನ್ನು ಬಳಸಿ ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಿದ್ದಾರೆ. 2017–18ರ ಸಾಲಿನಲ್ಲಿ ಜಿಲ್ಲೆಯಾದ್ಯಂತ ನೀಡಿರುವ ಚಿಕಿತ್ಸಾ ವಿವರ ಕೆಳಗಿನಂತಿದೆ.

ನಂ	ವಿವರ	ದನ	ಎಮ್ಮೆ	ಕುರಿ	ಆಡು	ಹಂದಿ	ನಾಯಿ	ಕೋಳಿ	ಇತರೆ	ಒಟ್ಟು
1	ಚಿಕಿತ್ಸೆ ಮಾಡಿರುವುದು	100428	2122	68	3626	1312	27635	37256	1607	**174054**
2	ಶಸ್ತ್ರ ಚಿಕಿತ್ಸೆ ಮಾಡಿರುವುದು	867	35	–	33	36	602	116	100	**1789**
3	ಜಂತುನಾಶಕ ನೀಡಿರುವುದು	45573	1442	24	1842	2439	19419	5294	737	**76770**
4	ಕಸಿ ಮಾಡಿರುವುದು	139	140	36	8	120	153	–	3	**599**

ಜಿಲ್ಲೆಯಲ್ಲಿನ ಸ್ಥಳೀಯ ತಳಿಯ ಜಾನುವಾರುಗಳಿಂದ ಕೃತಕ ಗರ್ಭಧಾರಣೆಯ ಮೂಲಕ ಉತ್ತಮ ಗುಣಮಟ್ಟದ ಮಿಶ್ರತಳಿ ಜಾನುವಾರುಗಳನ್ನು ಉತ್ಪಾದಿಸುವಲ್ಲಿ ಇಲಾಖೆಯು ಬಹುಮುಖ್ಯ ಪಾತ್ರ ವಹಿಸಿದೆ. ಜಿಲ್ಲೆಯ ಎಲ್ಲಾ ಪಶು ವೈದ್ಯಕೀಯ ಸಂಸ್ಥೆಗಳಲ್ಲೂ ಕೃತಕ ಗರ್ಭಧಾರಣಾ ಕಾರ್ಯವನ್ನು ಸಹ ನಡೆಸಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ **ಕೃತಕ ಗರ್ಭಧಾರಣಾ ಕಾರ್ಯಕ್ರಮದ ಪ್ರಗತಿ** ಈ ಕೆಳಗಿನಂತಿದೆ.

ಕ್ರ.ಸಂ	ಚಟುವಟಿಕೆ	ಪ್ರಗತಿ		
		ಹಸು	ಎಮ್ಮೆ	ಒಟ್ಟು
1	ಕೃತಕ ಗರ್ಭಧಾರಣೆ ಮಾಡಿರುವ ಜಾನುವಾರುಗಳ ಸಂಖ್ಯೆ (ಪುನರಾವರ್ತನೆ ಸೇರಿದೆ)	50349	198	50547
2	ಫಲ ಪರೀಕ್ಷೆ ಮಾಡಿರುವ ಜಾನುವಾರುಗಳ ಸಂಖ್ಯೆ	36251	121	38372
3	ಫಲ ಸಫಲವಾಗಿರುವ ಜಾನುವಾರುಗಳ ಸಂಖ್ಯೆ	21861	58	21919
4	ಪ್ರಸಕ್ತ ವಾರ್ಷಿಕ ಸಾಲಿನಲ್ಲಿ ಜನಿಸಿರುವ ಕರುಗಳ ಸಂಖ್ಯೆ –ಗಂಡು	9353	15	9368
	–ಹೆಣ್ಣು	7987	26	8013
5	ಕೃತಕ ಗರ್ಭಧಾರಣೆಯಿಂದ ವಸೂಲಿ ಮಾಡಲಾಗಿರುವ ಶುಲ್ಕ (ರೂ. ಗಳಲ್ಲಿ)	755235	2970	758205

ಜಿಲ್ಲೆಯಲ್ಲಿ ಪ್ರಸ್ತುತ ವಾರ್ಷಿಕ ಸಾಲಿನಲ್ಲಿ ಯಾವುದೇ ಸಾಂಕ್ರಾಮಿಕ ರೋಗಗಳು ಜಾನುವಾರುಗಳಲ್ಲಿ ಕಂಡು ಬಂದಿಲ್ಲವಾದರೂ ಮುಂಜಾಗೃತಾ ಕ್ರಮವಾಗಿ ಕಾಲಕಾಲಕ್ಕೆ ರೋಗ ನಿರೋಧಕ ಲಸಿಕೆಗಳನ್ನು ಬಳಸಲಾಗಿದೆ. **ವಿವಿಧ ಲಸಿಕೆಗಳ ಬಳಕೆ**ಯ ವಿವರ ಈ ಮುಂದಿನಂತಿದೆ.

ಕ್ರ.ಸಂ	ಲಸಿಕೆಯ ವಿವರ	ದನ	ಎಮ್ಮೆ	ಕುರಿ	ಆಡು	ಹಂದಿ	ನಾಯಿ	ಕೋಳಿ	ಇತರೆ	ಒಟ್ಟು
1	ಕಾಲು ಬಾಯಿ ಜ್ವರ	432694	6177	–	–	2792	–	–	–	441663
2	ಗಳಲೆ ರೋಗ	492	8	–	–	750	–	–	–	1250
3	ಕೊಕ್ಕರೆ ರೋಗ	–	–	–	–	–	–	252884	–	252884
4	ಹುಚ್ಚು ನಾಯಿ ರೋಗ	25	–	–	–	–	25	–	–	50
5	ಕಂದು ರೋಗ	3553	7	–	–	–	–	–	–	3560
6	ಈ.ಟಿ	–	–	–	1599	–	–	–	–	1599
7	ಪಿ.ಪಿ.ಆರ್	–	–	–	585	–	–	–	–	585

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (RKVY) ಮೇವು ಅಭಿವೃದ್ಧಿ ಕಾರ್ಯಕ್ರಮ:

ಹೈನುಗಾರಿಕೆ ಲಾಭದಾಯಕವಾಗಲು ಹಸಿರು ಮೇವು ಪೂರೈಕೆ ಬಹು ಮುಖ್ಯ ಅಂಶ. ಕರಾವಳಿ ಜಿಲ್ಲೆಯಾದ ಉಡುಪಿಯಲ್ಲಿ ಕೃಷಿಗೆ ಲಭ್ಯವಿರುವ ಭೂಮಿಯ ಸರಾಸರಿ ಪ್ರಮಾಣ ಕಡಿಮೆಯಿದ್ದು, ಹಸಿರು ಮೇವು ಪೂರೈಸುವಲ್ಲಿ ಹೈನುಗಾರರಿಗೆ ಸಮಸ್ಯೆಗಳು ಎದುರಾಗುತ್ತಿತ್ತು. ಈ ನಿಟ್ಟಿನಲ್ಲಿ ಇಲಾಖೆಯ ಮೂಲಕ ಉಚಿತವಾಗಿ ನೀಡಲಾದ ಬಹುಪಯೋಗಿ ಮೇವು ಬೆಳೆ ಬೀಜಗಳ 8149 ಕಿರುಪೊಟ್ಟಣಗಳಿಂದ 814 ಹೆಕ್ಟೇರ್‌ಗಳಲ್ಲಿ ಅಂದಾಜು 40700 ಟನ್ ಹಸಿರು ಮೇವು ಬೆಳೆದು ದನ ಕರುಗಳಿಗೆ ನೀಡುವಲ್ಲಿ ಉಪಯೋಗವನ್ನು ಕಂಡುಕೊಂಡಿರುತ್ತಾರೆ.

ವಿಸ್ತರಣಾ ಕಾರ್ಯಕ್ರಮಗಳು:

ಜಿಲ್ಲೆಯ ಹೈನುಗಾರರಿಗೆ ಇಲಾಖೆಯಿಂದ ಲಭಿಸುವಂತಹ ಸೌಲಭ್ಯಗಳ ಬಗ್ಗೆ ಸ್ಪಷ್ಟ ಮಾಹಿತಿಯನ್ನು ದೊರಕಿಸುವ ನಿಟ್ಟಿನಲ್ಲಿ ಹಲವು ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- **ಕಿಸಾನ್ ಸಂಪರ್ಕ ಸಭೆ :–** ಸ್ವ–ಸಹಾಯ ಗುಂಪುಗಳ ಸದಸ್ಯರುಗಳಿಗೆ, ಹಾಲು ಉತ್ಪಾದಕ ಸಂಘದ ಸದಸ್ಯರುಗಳಿಗೆ, ಸ್ವಯಂ ಸೇವಾ ಸಂಘಗಳಿಗೆ, ಮತ್ತಿತರ ರೈತ ಸಮುದಾಯದವರಿಗೆ ಇಲಾಖೆಯ ಅಧಿಕಾರಿಗಳು ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಬಗೆಗಿನ ಸಂಪೂರ್ಣ ಮಾಹಿತಿಯನ್ನು ನೀಡುವುದರೊಂದಿಗೆ ಉದ್ಯಮ ಇತ್ತೀಚಿನ ತಾಂತ್ರಿಕ ಸಂಶೋಧನೆಗಳ ಬಗ್ಗೆ ಸಹ ಮಾಹಿತಿ ನೀಡಿದ್ದಾರೆ.
- **ಗ್ರಾಮ ಸಭೆ/ ಸಂದರ್ಶನ:–** ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಸಲಾಗುವ ಗ್ರಾಮ ಸಭೆ/ ಸಂದರ್ಶನಗಳಲ್ಲಿ ಇಲಾಖೆಯ ಜವಾಬ್ದಾರಿಯುತ ಅಧಿಕಾರಿ/ಸಿಬ್ಬಂದಿ ಪಾಲ್ಗೊಂಡು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿ ಫಲಾನುಭವಿ ಆಧಾರಿತ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ವಿವರವನ್ನು ಸಹ ತಿಳಿಸಿದ್ದಾರೆ.
- **ತಾತ್ಕಾಲಿಕ ಬಂಜೆತನ ನಿವಾರಣಾ ಶಿಬಿರ ಆಯೋಜನೆ :–** ಜಾನುವಾರುಗಳ ತಳಿ ಅಭಿವೃದ್ಧಿ ನೀತಿಯಿಂದ ಹಾಗೂ ವೈಜ್ಞಾನಿಕ ಸಾಕಾಣಿಕಾ ವಿಧಾನಗಳಿಂದ ಜಾನುವಾರುಗಳಲ್ಲಿ ವಿಶೇಷವಾಗಿ ಮಿಶ್ರತಳಿಗಳಲ್ಲಿ ತಾತ್ಕಾಲಿಕ ಬಂಜೆತನ ಸಮಸ್ಯೆ ಎದುರಾಗುತ್ತಿದ್ದು, ಇದನ್ನು ನಿವಾರಿಸುವಲ್ಲಿ ಇಲಾಖೆ ವತಿಯಿಂದ ತಾತ್ಕಾಲಿಕ ಬಂಜೆತನ ನಿವಾರಣಾ ಶಿಬಿರ ಆಯೋಜಿಸಿದ್ದು, ಔಷಧಿಗಳನ್ನು ವಿಶೇಷವಾಗಿ ಬಳಸಿ ಶಿಬಿರಕ್ಕೆ ಹಾಜರಾದ ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಯಿತು.
- **ಮಿಶ್ರತಳಿ ಹಸು/ ಕರು ಪ್ರದರ್ಶನ :–** ಹೈನುಗಾರರಲ್ಲಿ ಮಿಶ್ರತಳಿ ಹಸು ಸಾಕಾಣಿಕೆ ಮತ್ತು ಅಧಿಕ ಹಾಲು ಉತ್ಪಾದನೆಯ ಬಗ್ಗೆ ಅರಿವು ಮೂಡಿಸಿ, ಉದ್ಯಮವನ್ನು ಹೆಚ್ಚು ಪ್ರಚಲಿತವಾಗುವಂತೆ ಮಾಡುವ ಉದ್ದೇಶದಿಂದ ಪ್ರೋತ್ಸಾಹಕರ ರೀತಿಯಲಿ ಮಿಶ್ರತಳಿ ಹಸು/ ಕರು ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು.

ಮೇಲ್ಕಂಡ ವಿಸ್ತರಣಾ ಕಾರ್ಯಕ್ರಮಗಳ ಆಯೋಜನೆಯ ಪ್ರಗತಿ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಕಾರ್ಯಕ್ರಮ	ಪ್ರಗತಿ
1	ಕಿಸಾನ್ ಸಂಪರ್ಕ ಸಭೆ	83
2	ಗ್ರಾಮ ಸಭೆ/ ಸಂದರ್ಶನ	534
3	ತಾತ್ಕಾಲಿಕ ಬಂಜೆತನ ನಿವಾರಣಾ ಶಿಬಿರ ಆಯೋಜನೆ	47
4	ಮಿಶ್ರತಳಿ ಹಸು/ ಕರು ಪ್ರದರ್ಶನ	6

ಕುಕ್ಕುಟ ಅಬಿವೃದ್ಧಿ :–

ಜಿಲ್ಲೆಯ ಗ್ರಾಮೀಣ ಜನರ ಆರ್ಥಿಕ ಸ್ಥಿತಿಯ ಸುಧಾರಣೆಯೊಂದಿಗೆ ಆಹಾರ ಗುಣಮಟ್ಟವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ ಹಿತ್ತಲ ಕೋಳಿ ಸಾಕಾಣಿಕೆಗಾಗಿ ಗಿರಿರಾಜ ತಳಿಯ ಒಂದು ದಿನದ ಕೋಳಿಮರಿಗಳನ್ನು ತಂದು ಉಡುಪಿ, ಕುಂದಾಪುರ, ಕಾರ್ಕಳ ಮತ್ತು ಹೆಬ್ರಿಗಳಲ್ಲಿರುವ ಕುಕ್ಕುಟ ಸಾಕಾಣಿಕಾ ಕೇಂದ್ರಗಳಲ್ಲಿ 6 ವಾರಗಳವರೆಗೆ ಪಾಲನೆ ಮಾಡಿ ನೀಡಬೇಕಾದ ಲಸಿಕೆಗಳನ್ನು ನೀಡಿ ಆಸಕ್ತ ರೈತರಿಗೆ ಪುಸ್ತಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ.

2017–18ರ ಸಾಲಿನಲ್ಲಿ ಜಿಲ್ಲೆಗೆ ಗಿರಿರಾಜ ಕೋಳಿಮರಿಗಳನ್ನು ಸರಬರಾಜು ಮಾಡುತ್ತಿದ್ದ ಸರ್ಕಾರಿ ಕ್ಷೇತ್ರಗಳಿಂದ ಮರಿಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ನಿಗದಿಪಡಿಸಲಾದ ಗುರಿಗನುಗುಣವಾಗಿ ಕೋಳಿ ಮರಿಗಳ ಸಾಕಾಣಿಕೆಯನ್ನು ಮಾಡಲಾಗಲಿಲ್ಲ. ಆದಾಗ್ಯೂ ಲಭ್ಯವಿರುವ ಪ್ರಮಾಣದಲ್ಲಿ ಮರಿಗಳನ್ನು ಪಡೆದು 8922 ಕೋಳಿ ಮರಿಗಳನ್ನು ಸಾಕಾಣಿಕೆ ಮಾಡಿ ರೈತರಿಗೆ ವಿತರಿಸಿದೆ.

ಇಲಾಖಾ ಸಾಕಾಣಿಕಾ ಕೇಂದ್ರ

1. ಕೋಳಿ ಸಾಕಾಣಿಕಾ ಕೇಂದ್ರ, ಉಡುಪಿ
2. ಕುಕ್ಕುಟ ವಿಸ್ತರಣಾ ಕೇಂದ್ರ, ಕುಂದಾಪುರ
3. ಕೋಳಿ ಸಾಕಾಣಿಕಾ ಕೇಂದ್ರ, ಕಾರ್ಕಳ
4. ಕೋಳಿ ಸಾಕಾಣಿಕಾ ಕೇಂದ್ರ, ಹೆಬ್ರಿ

ಖಾಸಗಿ ಸಾಕಾಣಿಕಾ ಕೇಂದ್ರ

1. ಶ್ರೀ ಪಾಂಡುರಂಗ ಅಂಚನ್, ಹೂಡೆ, ಉಡುಪಿ ತಾ.
2. ಶ್ರೀ ಪ್ರಕಾಶ್ ಬಿನ್ ರಾಜು ದೇವಾಡಿಗ, ಮುದ್ರಾಡಿ ಗ್ರಾಮ, ಕಾರ್ಕಳ ತಾ.

FMDCP (ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕಾಲು ಬಾಯಿ ರೋಗ ನಿಯಂತ್ರಣ ಯೋಜನೆ) :–

ವರ್ಷಕ್ಕೆರಡು ಬಾರಿ ಮಾರ್ಗಸೂಚಿಯಂತೆ ಜಿಲ್ಲೆಯ ಎಲ್ಲಾ ಜಾನುವಾರುಗಳಿಗೆ ಉಚಿತವಾಗಿ ಕಾಲು ಬಾಯಿ ಜ್ವರ ನಿರೋಧಕ ಲಸಿಕೆಯನ್ನು ಹಾಕಲಾಗಿದೆ.

ಗೋಶಾಲೆಗಳಿಗೆ ಸಹಾಯಧನ ನೀಡಿಕೆ :–

ಮೈಸೂರಿನ ಪಿಂಜರಾ ಪೋಲ್ ಯೋಜನೆಯಡಿ ದೇಶಿ ತಳಿಯ ಜಾನುವಾರು ನಿರ್ವಹಣಾ ವೆಚ್ಚಕ್ಕಾಗಿ ಗೋವರ್ಧನ ಗಿರಿ ಟ್ರಸ್ಟ್ (ರಿ), ನೀಲಾವರ ಗೋಶಾಲೆ, ನೀಲಾವರಕ್ಕೆ ರೂ. 10,00,000/–, ಶ್ರೀ ವೆಂಕಟರಮಣ ಗೋಶಾಲಾ ಟ್ರಸ್ಟ್, ಕಾರ್ಕಳ ರವರಿಗೆ ರೂ. 4,47,962/– ಮತ್ತು ನಂದಗೋಕುಲ ಚಾರಿಟೇಬಲ್ ಟ್ರಸ್ಟ್ (ರಿ), ಅಮೃತದಾರಾ ಗೋಶಾಲೆ, ಗೋಳಿಗುಂಡಿ, ಶೀರೂರು, ಕುಂದಾಪುರ ತಾ. ರೂ.5,43,775/–ಗಳ ಸಹಾಯಾನುದಾನವನ್ನು ವಿತರಿಸಲಾಗಿದೆ.

ಪಶುಭಾಗ್ಯ ಯೋಜನೆ:

ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗಿರುವ ವಿವಿಧ ಘಟಕಗಳ ವಿವರ ಕೆಳಕಂಡಂತಿದೆ.

ಉಪ ಶೀರ್ಷಿಕೆ	ಭೌತಿಕ		ಆರ್ಥಿಕ		ಘಟಕ ವೆಚ್ಚ	ಸಾಲ	ಸಹಾಯಧನ
	ಗುರಿ	ಸಾಧನೆ	ಗುರಿ	ಸಾಧನೆ			
ಲೆ.ಶೀ. 2401–00–800–1–57 ಆರ್.ಕೆ.ವಿ.ವೈ (ಹಸು ಘಟಕ)							
059	159	159	47.70	47.70	120000/–	90000/–	30000/–
422	14	14	8.40	8.40	120000/–	60000/–	60000/–
423	14	14	8.40	8.40	120000/–	60000/–	60000/–
ಒಟ್ಟು	**187**	**187**	**64.50**	**64.50**			
ಲೆ.ಶೀ. 2401–00–800–1–57 ಆರ್.ಕೆ.ವಿ.ವೈ (10+1 ಮೇಕೆ ಘಟಕ)							
059	15	15	2.52.900/–	2.52.900/–	67440/–	50580/–	16860/–
422	1	1	33720/–	33720/–	67440/–	33720/–	33720/–
423	1	1	33720/–	33720/–	67440/–	33720/–	33720/–
ಒಟ್ಟು	**17**	**17**	**320340/–**	**320340/–**			

ಲೆ.ಶೀ. 2401–00–800–1–57 ಆರ್.ಕೆ.ವಿ.ವೈ (ಮಾಂಸದ ಕೋಳಿ ಘಟಕ)							
059	3	3	63750/–	63750/–	85000/–	63750/–	21250/–
422	1	1	42500/–	42500/–	85000/–	42500	42500/–
ಒಟ್ಟು	**4**	**4**	**106250/–**	**106250/–**			
ಲೆ.ಶೀ. 2401–00–800–1–57 ಆರ್.ಕೆ.ವಿ.ವೈ (ಮೇವು ಕತ್ತರಿಸುವ ಯಂತ್ರ)							
059	5	5	38000/–	38000/–	23218/–	15218/–	8000/–
ಒಟ್ಟು	**5**	**5**	**38000/–**	**38000/–**			
ಲೆ.ಶೀ. 2404–00–191–1–16 ಆರ್.ಕೆ.ವಿ.ವೈ (ಮಹಿಳಾ ಅಮೃತ ಹಸು ಘಟಕ)							
059	17	17	510000/–	510000/–	120000/–	90000/–	30000/–
422	2	2	120000/–	120000/–	120000/–	60000/–	60000/–
423	2	2	120000/–	120000/–	120000/–	60000/–	60000/–
ಒಟ್ಟು	**21**	**21**	**750000/–**	**750000/–**			
ಲೆ.ಶೀ. 2404–00–191–1–16 ಆರ್.ಕೆ.ವಿ.ವೈ (ಮಹಿಳಾ ಅಮೃತ 2+1 ಕುರಿ/ಮೇಕೆ ಘಟಕ)							
059	112	112	840000/–	840000/–	10000/–	2500/–	7500/–
422	22	22	198000/–	198000/–	10000/–	1000/–	9000/–
423	19	19	171000/–	171000/–	10000/–	1000/–	9000/–
ಒಟ್ಟು	**153**	**153**	**1209000/–**	**1209000/–**			

ಭೂ ಸಮೃದ್ಧಿ ಯೋಜನೆ :–

ಕಾರ್ಕಳ ತಾಲ್ಲೂಕಿನ ಅಜೆಕಾರು ಹೋಬಳಿ, ಕುಂದಾಪುರ ತಾಲೂಕಿನ ವಂಡ್ಸೆ ಮತ್ತು ಬೈಂದೂರು ಹೋಬಳಿ ಮತ್ತು ಉಡುಪಿ ತಾಲೂಕಿನ ಬ್ರಹ್ಮಾವರ ಹೋಬಳಿಗಳಲ್ಲಿ ಕೆಳಕಂಡಂತೆ ವಿವಿಧ ಘಟಕಗಳು ಅನುಷ್ಠಾನಗೊಂಡಿರುತ್ತವೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಘಟಕದ ವಿವರ	ಬಿಡುಗಡೆ ಆರ್ಥಿಕ	ಭೌತಿಕ ಗುರಿ	ಸಾಧನೆ	
				ಆರ್ಥಿಕ	ಭೌತಿಕ
ಲೆಕ್ಕ ಶೀರ್ಷಿಕೆ 2401–00–800–1–57 ಯೋಜನೆ ; ಸಹಾಯಧನ 106					
1	ಮಿಶ್ರತಳಿ ಹಸು ಘಟಕ (ಘಟಕ ವೆಚ್ಚ ರೂ. 1.20 ಲಕ್ಷ ಸಹಾಯಧನ ಸಾಮಾನ್ಯ ವರ್ಗ 0.30 ಲಕ್ಷ, ಪ.ಜಾ/ಪ.ಪಂ–0.60 ಲಕ್ಷ)	**30.60**	96	28.80	96
2	10 ಗಿರಿರಾಜ ಕೋಳಿ ಸಾಕಣೆ (5 ರಿಂದ 6 ವಾರದ 10 ಗಿರಿರಾಜ ಕೋಳಿಗಳು) ಸಹಾಯಧನ ಸಾಮಾನ್ಯ ವರ್ಗ 0.006 ಲಕ್ಷ, ಪ.ಜಾ/ಪ.ಪಂ–0.008 ಲಕ್ಷ)		26	0.156	26
3	3 ಆಡು ಘಟಕ – ಸಹಾಯಧನ ಸಾಮಾನ್ಯ ವರ್ಗ 0.075 ಲಕ್ಷ, ಪ.ಜಾ/ಪ.ಪಂ–0.09 ಲಕ್ಷ)		16	1.20	16
4	ಮೇವು ಅಭಿವೃದ್ಧಿ –ಸಹಾಯಧನ ಎಲ್ಲಾ ವರ್ಗಗಳಿಗೆ 0.002 ಲಕ್ಷ		22	0.44	22
	ಒಟ್ಟು	**30.60**	**160**	**30.596**	**160**

ಲೆಕ್ಕ ಶೀರ್ಷಿಕೆ 2401–00–800–1–57 ಯೋಜನೆ ; ಸಹಾಯಧನ 423 (ಪ.ಪಂ.)					
1	ಮಿಶ್ರತಳಿ ಹಸು ಘಟಕ (ಘಟಕ ವೆಚ್ಚ ರೂ. 1.20 ಲಕ್ಷ ಸಹಾಯಧನ ಸಾಮಾನ್ಯ ವರ್ಗ 0.30 ಲಕ್ಷ, ಪ.ಜಾ/ಪ.ಪಂ–0.60 ಲಕ್ಷ)	2.50	3	1.80	3
2	10 ಗಿರಿರಾಜ ಕೋಳಿ ಸಾಕಣೆ –(5 ರಿಂದ 6 ವಾರದ 10 ಗಿರಿರಾಜ ಕೋಳಿಗಳು) ಸಹಾಯಧನ ಸಾಮಾನ್ಯ ವರ್ಗ 0.006 ಲಕ್ಷ, ಪ.ಜಾ/ಪ.ಪಂ–0.008 ಲಕ್ಷ)		8	0.064	8
3	3 ಆಡು ಘಟಕ – ಸಹಾಯಧನ ಸಾಮಾನ್ಯ ವರ್ಗ 0.075 ಲಕ್ಷ, ಪ.ಜಾ/ಪ.ಪಂ–0.09 ಲಕ್ಷ)		3	0.27	3
4	ಮೇವು ಅಭಿವೃದ್ಧಿ –ಸಹಾಯಧನ ಎಲ್ಲಾ ವರ್ಗಗಳಿಗೆ 0.002 ಲಕ್ಷ		6	0.12	6
5	ಸ್ವದೇಶಿ ತಳಿ ಮಲೆನಾಡು ಗಿಡ್ಡ ಹಸು ಸಾಕಾಣೆ (ಕೊರಗ ಜನಾಂಗಕ್ಕೆ)		1	0.05	1
	ಒಟ್ಟು	2.50	21	2.304	21
	ಒಟ್ಟು ಸಂಚಿತ	33.10	181	32.900	181

ಲೆಕ್ಕ ಶೀರ್ಷಿಕೆ 2401–00–109–0–21						
ಕ್ರ. ಸಂ	ಘಟಕದ ವಿವರ	ವಾರ್ಷಿಕ ಗುರಿ		ಆರ್ಥಿಕ ಬಿಡುಗಡೆ	ಸಾಧನೆ	
		ಆರ್ಥಿಕ	ಭೌತಿಕ		ಆರ್ಥಿಕ	ಭೌತಿಕ
2401–00–109–0–21–106						
1	ವಿನೂತನ ಕರ್ಯಕ್ರಮದಡಿ ಹೈಡ್ರೋಪೋನಿಕ್ ಅಳವಡಿಕೆ ಘಟಕ ವೆಚ್ಚ ರೂ.50000/– ಸಹಾಯಧನ 75% ರೂ.37500/– ಫಲಾನುಭವಿ ಪಾಲು 25% ರೂ.12500/–	1.875	5	48.00	1.875	5
2	ಮಿಶ್ರತಳಿ ಹಸು ಘಟಕ (ಘಟಕ ವೆಚ್ಚ ರೂ.1.20 ಲಕ್ಷ, ಸಹಾಯಧನ ರೂ.0.30 ಲಕ್ಷ, ಸಾಲ ರೂ.0.90 ಲಕ್ಷ)	41.10	137		41.10	137
3	ಸಮಗ್ರ ಕೃಷಿ ಪದ್ದತಿಯಡಿ 0.1 ಹೆಕ್ಟೇರ್ ಪ್ರದೇಶದಲ್ಲಿ ಮೇವಿನ ಬೆಳೆ ಬೆಳೆಯುವ ಕಾರ್ಯಕ್ರಮ ಘಟಕ ವೆಚ್ಚ ರೂ.2,500/– ಸಹಾಯಧನ ರೂ.2,000/– ಫಲಾನುಭವಿ ಪಾಲು ರೂ. 500/–	0.28	14		0.28	14
4	ಗಿರಿರಾಜ ಕೋಳಿ ಘಟಕ ವೆಚ್ಚ ರೂ.800/– ಸಹಾಯಧನ ರೂ.600/– ಫಲಾನುಭವಿ ಪಾಲು ರೂ. 200/–	0.048	8		0.048	8
5	3 ಆಡು ಘಟಕ ಘಟಕ ವೆಚ್ಚ ರೂ.10,000/– ಸಹಾಯಧನ ರೂ.7,500/– ಫಲಾನುಭವಿ ಪಾಲು ರೂ. 2,500/–	0.525	7		0.525	7
6	ಕೌ ಮ್ಯಾಟ್ ಘಟಕ ವೆಚ್ಚ ರೂ.3,000/– ಸಹಾಯಧನ 75% ರೂ.2250/– ಫಲಾನುಭವಿ ಪಾಲು 25% ರೂ. 750/–	3.8925	173		3.8925	173
	ಒಟ್ಟು	**47.7205**	**344**	**48.00**	**47.7205**	**344**

2401–00–109–0–21–422 (ಪ.ಜಾ.)						
1	ವಿನೂತನ ಕರ್ಯಕ್ರಮದಡಿ ಹೈಡ್ರೋಪೋನಿಕ್ ಅಳವಡಿಕೆ ಘಟಕ ವೆಚ್ಚ ರೂ.50000/– ಸಹಾಯಧನ 90% ರೂ.45000/– ಫಲಾನುಭವಿ ಪಾಲು 10% ರೂ.5000/–	1.35	3	4.485	1.35	3
2	ಮಿಶ್ರತಳಿ ಹಸು ಘಟಕ (ಘಟಕ ವೆಚ್ಚ ರೂ.1.20 ಲಕ್ಷ, ಸಹಾಯಧನ ರೂ.0.60 ಲಕ್ಷ, ಸಾಲ ರೂ.0.60 ಲಕ್ಷ)	3.00	5		1.80	3
3	10 ಗಿರಿರಾಜ ಕೋಳಿ ಸಾಕಣೆ (ಘಟಕ ವೆಚ್ಚ 5 ರಿಂದ 6 ವಾರದ 10 ಗಿರಿರಾಜ ಕೋಳಿಗಳಿಗೆ ರೂ.800/– ಸಹಾಯಧನ ರೂ.800/–)	–	–		–	–
4	ಕೌ ಮ್ಯಾಟ್ ಘಟಕ ವೆಚ್ಚ ರೂ.3,000/– ಸಹಾಯಧನ 90% ರೂ.2700/– ಫಲಾನುಭವಿ ಪಾಲು 10% ರೂ. 300/–	0.135	5		0.135	5
	ಒಟ್ಟು	**4.485**	**13**	**4.485**	**3.285**	**11**
2401–00–109–0–21–423 (ಪ.ಪಂ.)						
1	ಮಿಶ್ರತಳಿ ಹಸು ಘಟಕ (ಘಟಕ ವೆಚ್ಚ ರೂ.1.20 ಲಕ್ಷ, ಸಹಾಯಧನ ರೂ.0.60 ಲಕ್ಷ, ಸಾಲ ರೂ.0.60 ಲಕ್ಷ)	4.80	8	5.00	4.80	8
2	ಕೌ ಮ್ಯಾಟ್ ಘಟಕ ವೆಚ್ಚ ರೂ.3,000/– ಸಹಾಯಧನ 80% ರೂ.2400/– ಫಲಾನುಭವಿ ಪಾಲು20% ರೂ. 600/–	0.192	8		0.192	8
	ಒಟ್ಟು	**4.992**	**16**	**5.00**	**4.992**	**16**
	ಒಟ್ಟು ಸಂಚಿತ	**55.9975**	**373**	**57.485**	**55.9975**	**371**

ರೂ.89.0975 ಲಕ್ಷಗಳ ಸಹಾಯಧನದಲ್ಲಿ 42 ಫಲಾನುಭವಿಗಳಿಗೆ ಮೇವು ಪ್ರಾತ್ಯಕ್ಷಿಕೆ, 1 ಫಲಾನುಭವಿಗಳಿಗೆ ಕರು ಸಾಕಣೆ, 42 ಗಿರಿರಾಜ ಕೋಳಿಗಳು, 247 ಫಲಾನುಭವಿಗಳಿಗೆ ಮಿಶ್ರತಳಿ ಹಸು ಘಟಕ, 186 ಫಲಾನುಭವಿಗಳ ಹಸುಗಳಿಗೆ ಮಲಗುವ ನೆಲಹಾಸು, 26 ಫಲಾನುಭವಿಗಳಿಗೆ 2+1 ಆಡು ಘಟಕ, 8 ಫಲಾನುಭವಿಗಳಿಗೆ ಹೈಡ್ರೋಫೋನಿಕ್ ಘಟಕಗಳನ್ನು ಅಂದರೆ ಒಟ್ಟು 552 ಫಲಾನುಭವಿಗಳಿಗೆ ವಿವಿಧ ಘಟಕಗಳನ್ನು ವಿತರಿಸಲಾಗಿದೆ.

ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು :–

- **ವಿಶೇಷ ಘಟಕ ಯೋಜನೆ (ಜಿಲ್ಲಾ ವಲಯ) :–** ಈ ಯೋಜನೆಯಡಿಯಲ್ಲಿ ಗ್ರಾಮಸಭೆಯಲ್ಲಿ ಆಯ್ಕೆಗೊಂಡ ಪರಿಶಿಷ್ಠ ಜಾತಿಯ ಫಲಾನುಭವಿಗಳಿಗೆ ಮಿಶ್ರತಳಿ ಹಸು, ಎಮ್ಮೆ, ಕುರಿ, ಹಂದಿ ಘಟಕಗಳನ್ನು 50% ರ ಸಹಾಯಧನ ಮತ್ತು 50% ರ ರಾಷ್ಟ್ರೀಕೃತ ಬ್ಯಾಂಕಿನ ಸಾಲದೊಂದಿಗೆ ನೀಡಲಾಗಿದೆ.
- **ಗಿರಿಜನ ಉಪಯೋಜನೆ (ಜಿಲ್ಲಾ ವಲಯ) :–** ಈ ಯೋಜನೆಯಡಿಯಲ್ಲಿ ಗ್ರಾಮಸಭೆಯಲ್ಲಿ ಆಯ್ಕೆಗೊಂಡ ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಮಿಶ್ರತಳಿ ಹಸುಗಳನ್ನು 50% ರ ಸಹಾಯಧನ ಮತ್ತು 50% ರ ರಾಷ್ಟ್ರೀಕೃತ ಬ್ಯಾಂಕಿನ ಸಾಲದೊಂದಿಗೆ ಜಿಲ್ಲಾವಲಯ ಮತ್ತು ರಾಜ್ಯವಲಯದಡಿ ನೀಡಲಾಗಿದೆ.

ಕ್ರ. ಸಂ	ಯೋಜನೆ	ವಿತರಿಸಿರುವ ಘಟಕ	ಫಲಾನುಭವಿಗಳ ಸಂಖ್ಯೆ
1	ವಿಶೇಷ ಘಟಕ ಯೋಜನೆ (ಜಿಲ್ಲಾ ವಲಯ) ಘಟಕ ವೆಚ್ಚ ರೂ.1,20,000/–, ಸಹಾಯಧನ ರೂ.60,000/–	2 ಮಿಶ್ರತಳಿ ಹಸು	3
2	ಗಿರಿಜನ ಉಪಯೋಜನೆ (ಜಿಲ್ಲಾ ವಲಯ) ಘಟಕ ವೆಚ್ಚ ರೂ.1,20,000/–, ಸಹಾಯಧನ ರೂ.60,000/–	2 ಮಿಶ್ರತಳಿ ಹಸು	8
3	ವಿಶೇಷ ಘಟಕ ಯೋಜನೆ (ರಾಜ್ಯ ವಲಯ) ಘಟಕ ವೆಚ್ಚ ರೂ.1,20,000/–, ಸಹಾಯಧನ ರೂ.60,000/–	2 ಮಿಶ್ರತಳಿ ಹಸು	32
4	ಗಿರಿಜನ ಉಪಯೋಜನೆ (ರಾಜ್ಯ ವಲಯ) ಘಟಕ ವೆಚ್ಚ ರೂ.1,20,000/–, ಸಹಾಯಧನ ರೂ.60,000/–	2 ಮಿಶ್ರತಳಿ ಹಸು	1

ತಾಂತ್ರಿಕ ಪರಿಶೋಧನೆ :–

ಜಿಲ್ಲೆಯ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಕೆಲಸ ಕಾರ್ಯಗಳ ನಿರ್ವಹಣೆಯ ಮೇಲೆ ನಿಗಾ ಇಡಲು ಹಮ್ಮಿಕೊಂಡಿರುವ ಈ ಕಾರ್ಯಕ್ರಮದಡಿಯಲಿ ಸಹಾಯಕ ನಿರ್ದೇಶಕರು, ಪಶು ವೈದ್ಯಾಧಿಕಾರಿಗಳು, ಮತ್ತು ವಿಸ್ತರಣಾಧಿಕಾರಿಗಳು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ಕೈಗೊಂಡು

ಪರಿಶೀಲನಾ ಸಮಯದಲ್ಲಿ ಕಂಡು ಬರಬಹುದಾದ ತಾಂತ್ರಿಕ ಲೋಪದೋಷಗಳನ್ನು ಸರಿಪಡಿಸುವ ಮಾರ್ಗೋಪಾಯ ಸೂಚಿಸುವರು. ಜಿಲ್ಲೆಯಲ್ಲಿನ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ 2017–18 ರ ವಾರ್ಷಿಕ ಸಾಲಿನಲ್ಲಿ 81 ತಾಂತ್ರಿಕ ಪರಿಶೋಧನೆಯನ್ನು ನಡೆಸಲಾಗಿದೆ.

ವಿಸ್ತರಣಾ ಚಟುವಟಿಕೆಗಳು :–

ಪಶು ಪಾಲನೆಯಲ್ಲಿ ಆಸಕ್ತಿ ಹೊಂದಿರುವ ಗ್ರಾಮೀಣ ಪ್ರದೇಶದ ಜನರಿಗೆ ಜಿಲ್ಲೆಯಲ್ಲಿನ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ತರಬೇತಿ ಕೇಂದ್ರಗಳಲ್ಲಿ ಪಶು ಪಾಲನಾ ವಿಷಯಗಳ ಕುರಿತು ತರಬೇತಿಯನ್ನು ವೇಳಾ ಪಟ್ಟಿಯಂತೆ ಹಮ್ಮಿಕೊಳ್ಳಲಾಗುತ್ತಿದ್ದು, ಇಲಾಖೆಯ ಪಶು ವೈದ್ಯರು ತರಬೇತಿಗಳಲ್ಲಿ ಶ್ರವ್ಯ ದೃಷ್ಟಿಕ ಮಾದ್ಯಮ ಬಳಸಿ ಅರ್ಥಪೂರ್ಣ ಉಪನ್ಯಾಸ ನೀಡಿರುವುದು ಗಮನಾರ್ಹ ವಿಷಯವಾಗಿದೆ.

ಅರೆತಾಂತ್ರಿಕ ಸಿಬ್ಬಂದಿಗೆ ಸೇವಾ ನಿರತ ಪುನಶ್ಚೇತನ ತರಬೇತಿ :–

ಪಶು ಪಾಲನೆಯಲ್ಲಿ ಸಮಕಾಲಿನ ನಿರ್ವಹಣಾ ಕ್ರಮಗಳ ಬಗ್ಗೆ ಅರೆತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ಇಲಾಖೆಯ ತರಬೇತಿ ಸಂಸ್ಥೆಗಳಲ್ಲಿ ಒಂದು ವಾರದ ಪುನಶ್ಚೇತನ ತರಬೇತಿಯನ್ನು ನೀಡಲಾಗುತ್ತದೆ. ಪ್ರಸಕ್ತ ವಾರ್ಷಿಕ ಸಾಲಿನಲ್ಲಿ ಜಿಲ್ಲೆಯ 48 ಸೇವಾ ನಿರತ ಅರೆತಾಂತ್ರಿಕ ಸಿಬ್ಬಂದಿಗೆ ಪುನಶ್ಚೇತನ ತರಬೇತಿ ನೀಡುವ ಗುರಿಯನ್ನು ನಿಗದಿಪಡಿಸಲಾಗಿತ್ತು. 47 ಸೇವಾ ನಿರತ ಅರೆತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ಹಾಸನದ ಪಶು ವೈದ್ಯಕೀಯ ಪರೀಕ್ಷಕರ ತರಬೇತಿ ಸಂಸ್ಥೆಯಲ್ಲಿ ತರಬೇತಿಗೆ ನಿಯೋಜಿಸಲಾಗಿದೆ.

ಕೊನೆಯ ಮಾತು :–

2017–18ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಇಲಾಖೆಯ ಒಟ್ಟು ಮಂಜೂರಾದ ಹುದ್ದೆಗಳಲ್ಲಿ ಶೇಕಡಾ 70 ಹುದ್ದೆಗಳು ತೆರವಾಗಿದ್ದು, ತೀವ್ರ ಸಿಬ್ಬಂದಿ ಕೊರತೆಯನ್ನು ಎದುರಿಸುತ್ತಿದ್ದರೂ ಸಹ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಸಂಘಟಿತ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಪ್ರಸಕ್ತ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಶ್ರೇಣಿ ನೀಡಿಕೆಯಲ್ಲಿ ರಾಜ್ಯಕ್ಕೆ ಜಿಲ್ಲೆಯು 3ನೇ ಸ್ಥಾನ ಪಡೆದಿರುತ್ತದೆ.

ಆಯ–ವ್ಯಯ :–

ಉಡುಪಿ ಜಿಲ್ಲೆಯ 2017–18 ನೇ ಸಾಲಿನ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮವಾರು ಹಣಕಾಸು ಹಂಚಿಕೆ ಮತ್ತು ಸಾಧನೆ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮದ ಹೆಸರು	ಲೆಕ್ಕ ಶೀರ್ಷಿಕೆ	ವಾರ್ಷಿಕ ಅನುದಾನ	ಬಿಡುಗಡೆಯಾದ ಅನುದಾನ	ಖರ್ಚಾದ ಅನುದಾನ
1	ಔಷಧಿಗಳು, ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು	2403–00–101–0–27	44.48	44.48	44.48
2	ಕಟ್ಟಡಗಳು	2403–00–101–0–28	26.00	26.00	25.84
3	ವಿಸ್ತರಣಾ ಘಟಕಗಳ ಬಲಪಡಿಸುವಿಕೆ	2403–00–101–0–30	7.00	7.00	7.00
4	ಗಿರಿರಾಜ ಹಾಗೂ ಇತರ ಹಕ್ಕಿಗಳ ಸಾಕಣೆ	2403–00–103–0–31	7.20	7.20	7.08
5	ಪ್ರಾಥಮಿಕ ಪಶು ಚಿಕಿತ್ಸಾ ಶಾಲೆಗಳನ್ನು ತೆರೆಯುವುದು ಮತ್ತು ಅವುಗಳನ್ನು ಮೇಲ್ದರ್ಜೆಗೇರಿಸುವುದು	2403–00–101–0–61	552.69	588.69	553.34
6	ಜೀವವೈದ್ಯ ತ್ಯಾಜ್ಯಗಳ ವಿಲೇವಾರಿ	2403–00–101–0–63	3.30	3.29	3.04
7	ಗೊಡ್ಡು / ಬಂಜೆ ಜಾನುವಾರುಗಳ ಶಿಬಿರಗಳ ವ್ಯವಸ್ಥೆ	2403–00–101–0–64	3.90	3.90	3.89
8	ಕಾರ್ಯ ನಿರ್ವಾಹಕ ಸಿಬ್ಬಂದಿ	2403–00–101–0–26	140.63	140.63	113.20
9	"ಡಿ"ದರ್ಜೆ ಹೊರಗುತ್ತಿಗೆ ನೌಕರರ ವೇತನ	2403–00–001–0–01	–	75.43	75.43
10	ವಿಶೇಷ ಘಟಕ ಯೋಜನೆ (ಜಿಲ್ಲಾವಲಯ)	2225–00–101–0–64	1.80	1.80	1.80
11	ಗಿರಿಜನ ಉಪಯೋಜನೆ (ಜಿಲ್ಲಾವಲಯ)	2225–00–102–0–70	4.80	4.80	4.80

ಮೀನುಗಾರಿಕೆ ಇಲಾಖೆ, ಉಡುಪಿ ಜಿಲ್ಲೆ

1. **ಪರಿಚಯ:** ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್.ಡಿ.42 ಎಲ್.ಆರ್.ಡಿ.87 (ಭಾಗ-3) ದಿನಾಂಕ: 02.08.1997 ರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 7 ಹೊಸ ಜಿಲ್ಲೆಗಳು ರಚನೆಗೊಂಡಿದ್ದು, ಅದರಲ್ಲಿ ಉಡುಪಿ ಜಿಲ್ಲೆಯು ಒಂದಾಗಿದೆ. ಹೊಸದಾದ ಉಡುಪಿ ಜಿಲ್ಲೆಯು ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳನ್ನು ಹೊಂದಿರುತ್ತದೆ. ಈ ಜಿಲ್ಲೆಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ದಿನಾಂಕ: 01.08.1998 ರಿಂದ ಒದಗಿಸಲಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ:210:ಮೀ.ಇ.ಸೇ:2011 ರಲ್ಲಿ ಉಡುಪಿ ಜಿಲ್ಲೆಗೆ ಜಿಲ್ಲಾ ಮಟ್ಟದ ಕಛೇರಿ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಮೇಲ್ಕಂಡ 7 ಹೊಸ ಜಿಲ್ಲಾ ಮಟ್ಟದ ಕಛೇರಿಗಳಿಗೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಮೀನು/ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಯ ಹುದ್ದೆಗಳನ್ನು ಸ್ಥಳಾಂತರಿಸಲಾಗಿರುತ್ತದೆ. ತದನಂತರ ಉಡುಪಿ ಜಿಲ್ಲೆಯಲ್ಲಿ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ ಇವರ ಕಛೇರಿಯನ್ನು ಹೊಸದಾಗಿ ಜಿಲ್ಲಾ ಮಟ್ಟದ ಕಛೇರಿಯನ್ನಾಗಿ ತೆರೆದು, ಇದಕ್ಕೆ 9 ಮಂದಿ ಸಿಬ್ಬಂದಿಗಳನ್ನು ಮಂಜೂರು ಮಾಡಲಾಗಿರುತ್ತದೆ. ಪ್ರಸ್ತುತ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು ದಿನಾಂಕ: 09.10.2014 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಪಸಂಮೀ:201:ಮೀ.ಇ.ಸೇ:2011 ದಿನಾಂಕ: 30.06.2011 ರ ಮೇರೆಗೆ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ ಕಛೇರಿಯನ್ನು ತನ್ನ ಮೂಲ ಕರ್ತವ್ಯದೊಂದಿಗೆ ಉಡುಪಿ ಜಿಲ್ಲಾ ಕಛೇರಿಯ ಕಾರ್ಯಾಭಾರ ನೋಡಿಕೊಳ್ಳಲು ಮತ್ತು ಉಸ್ತುವಾರಿ ಅಧಿಕಾರಿಯನ್ನಾಗಿ ಮಾಡಲಾಗಿರುತ್ತದೆ. ಸದ್ರಿ ಕಛೇರಿಯಡಿ 3 ತಾಲೂಕು ಮಟ್ಟದ ಕಛೇರಿಗಳು ಮತ್ತು ಒಂದು ಜಿಲ್ಲಾ ಮಟ್ಟದ ಕಛೇರಿ ಇರುತ್ತದೆ. ತಾಲೂಕು ಮಟ್ಟದಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) "ಬಿ" ಗುಂಪಿನ ಅಧಿಕಾರಿಗಳು ಮೀನುಗಾರಿಕೆಗೆ ಸಂಬಂಧಿಸಿದ ಕೇಂದ್ರ ವಲಯ ಮತ್ತು ರಾಜ್ಯ ವಲಯ, ಜಿಲ್ಲಾ ವಲಯದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಈ ಕಛೇರಿ ಅಧೀನದಲ್ಲಿ ಕಾರ್ಕಳ ಒಳನಾಡು ಮೀನುಗಾರಿಕೆಗೆ ಉಡುಪಿ ಮತ್ತು ಕುಂದಾಪುರ ಕರಾವಳಿ ಮೀನುಗಾರಿಕೆಗೆ ಸಂಬಂಧಪಟ್ಟ ತಾಲೂಕುಗಳಾಗಿವೆ. ಮೀನುಗಾರಿಕಾ ತಂಗುದಾಣ ಕೇಂದ್ರಗಳಿಗೆ ಸಂಪರ್ಕಿಸಲು ಅನುಕೂಲವಾಗುವಂತೆ ಮೀನುಗಾರಿಕಾ ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆ ಇತ್ಯಾದಿ, ಪ್ರಾಕೃತಿಕ ವಿಕೋಪಕ್ಕೆ ಒಳಗಾಗಿ ಮೃತ ಪಡುವ ಮೀನುಗಾರರ ಕುಟುಂಬದವರಿಗೆ ಹಾಗೂ ಮೀನುಗಾರಿಕೆ ಮಾಡುತ್ತಿರುವಾಗ ನಾಶ ಹೊಂದಿದ ಬಲೆ, ದೋಣಿ, ಇಂಜಿನ್ ಇತ್ಯಾದಿ ಸೊತ್ತುಗಳಿಗೆ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಸಹಾಯಧನ ನೀಡಿಕೆ, ಮೀನುಗಾರರ ಸಹಕಾರಿ ಸಂಘಗಳ ಚಟುವಟಿಕೆಗಳನ್ನು ಹೆಚ್ಚಿಸಿ, ವಿವಿಧ ಯೋಜನೆಗಳಲ್ಲಿ ಆರ್ಥಿಕ ನೆರವು ಒದಗಿಸುವುದು. ವೃತ್ತಿನಿರತ ಮೀನುಗಾರರು ಆಕಸ್ಮಿಕವಾಗಿ ಮೃತಪಟ್ಟಲ್ಲಿ, ಅಂಗವಿಕಲರಾದಲ್ಲಿ ಅವರ ಕುಟುಂಬಕ್ಕೆ ಮೀನುಗಾರರ ಜನತಾ ಸಾಮೂಹಿಕ ಅಪಘಾತ ವಿಮಾ ಯೋಜನೆಯ ಸೌಲಭ್ಯವನ್ನು ದೊರಕಿಸಿಕೊಡುವುದು. ಕಡಲ ಮತ್ತು ಒಳನಾಡು ಮೀನು ಉತ್ಪಾದನೆಯ ಅಂಕಿ ಅಂಶಗಳನ್ನು ಪಡೆಯುವುದು.

ಅಲ್ಲದೆ ಹಿನ್ನೀರು ಮೀನು/ಸಿಗಡಿ ಕೃಷಿ ಮತ್ತು ಅದರ ಅಭಿವೃದ್ಧಿ, ಮೀನು ಅತೀ ಶೀಘ್ರವಾಗಿ ಕೆಡುವ ವಸ್ತುವಾದುದರಿಂದ ಸ್ಥಳೀಯ ಪ್ರದೇಶಗಳಲ್ಲಿ ಕೂಡಲೇ ಮಾರಾಟ ಮಾಡಲು ಅನುಕೂಲವಾಗುವಂತೆ ಗ್ರಾಮ ಪಂಚಾಯತ್, ಪುರಸಭಾ ವಲಯಗಳಲ್ಲಿ ಸುಸಜ್ಜಿತ ಮೀನು ಮಾರುಕಟ್ಟೆಗಳ ನಿರ್ಮಾಣಕ್ಕೆ ಸಹಾಯಧನ ನೀಡುವುದು. ವೈಜ್ಞಾನಿಕ ರೀತಿಯಲ್ಲಿ ಮೀನು ಸಾಕಣೆಗೆ ಪ್ರೋತ್ಸಾಹ ನೀಡಿ ತಾಲೂಕು ಮಟ್ಟದಲ್ಲಿ ತರಬೇತಿ ಮೂಲಕ ತಾಂತ್ರಿಕ ಸಲಹೆಗಳನ್ನು ನೀಡುವುದು. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಹಾಗೂ ಹುಡ್ಕೋ ನೆರವಿನಿಂದ ಮೀನುಗಾರರಿಗೆ ವಸತಿ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡುವುದು. ಮೀನು ಮಾರಾಟ ಮಾಡುವ ಪುರುಷ/ಮಹಿಳೆಯರಿಗೆ ಮೀನು ಸಾಗಾಟಕ್ಕೆ ಅನುಕೂಲವಾಗುವಂತೆ ಅವರಿಗೆ ಬೇಕಾದ ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರ ವಾಹನಕ್ಕೆ ಸಹಾಯಧನ ನೀಡುವುದು. ಹಾಗೂ ಇಲಾಖಾ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದು.

ಒಳನಾಡು ಮೀನುಗಾರಿಕಾ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಇಲಾಖಾ ಮೀನು ಮರಿ ಉತ್ಪಾದನಾ ಕೇಂದ್ರಗಳಿಂದ ಶೀಘ್ರವಾಗಿ ಬೆಳೆಯುವ ವಿವಿಧ ತಳಿಯ ಮೀನು ಮರಿಗಳನ್ನು ತರಿಸಿ, ಇಲಾಖೆಯ ಮೀನು ಮರಿ ಪಾಲನಾ ಕೇಂದ್ರದಲ್ಲಿ ಪಾಲನೆ ಮಾಡಿ, ಇಲಾಖಾ ಕೆರೆಗಳಿಗೆ, ಗ್ರಾಮ ಪಂಚಾಯತ್ ಕೆರೆಗಳಿಗೆ, ನದಿಗಳಲ್ಲಿ ಖಾಸಗಿಯವರ ಕೆರೆಗಳಿಗೆ ಮೀನು ಮರಿಗಳನ್ನು ಸರಬರಾಜು ಮಾಡುವುದು. ಹಾಗೂ ಒಳನಾಡು ಮೀನುಗಾರಿಕೆಯ ಬಗ್ಗೆ ಮಾಹಿತಿ, ತರಬೇತಿ ಕಾರ್ಯಾಗಾರ ನಡೆಸುವುದು.

2. <u>ಆಡಳಿತ:</u>

2.1 ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಉಡುಪಿ ಇವರು ಜಿಲ್ಲಾ ಮಟ್ಟದ ಮೀನುಗಾರಿಕೆ ಉಸ್ತುವಾರಿ ಅಧಿಕಾರಿಯಾಗಿದ್ದು, ಇಲಾಖಾ ಮತ್ತು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲೆಯ ಮೂರು ತಾಲೂಕು (ಉಡುಪಿ, ಕುಂದಾಪುರ, ಕಾರ್ಕಳ) ಅಧೀನಾಧಿಕಾರಿಗಳಾದ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ರವರ ಮೂಲಕ ಅನುಷ್ಠಾನಗೊಳಿಸಲಾಗಿರುತ್ತದೆ. ಉಡುಪಿ ಜಿಲ್ಲೆಗೆ ಹಾಗೂ ದ.ಕ. ಜಿಲ್ಲೆಗೆ ಬೇಕಾದ ಮೀನು ಮರಿಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣೀ-2), ಕಾರ್ಕಳ ಅವರು ಕಾರ್ಕಳದಲ್ಲಿರುವ ಮೀನು ಮರಿ ಪಾಲನಾ ಕೇಂದ್ರದ ಮೂಲಕ ಸರಬರಾಜು ಮಾಡುತ್ತಿದ್ದಾರೆ.

2.2 <u>2017-18 ನೇ ಸಾಲಿನಲ್ಲಿ ಈ ಕೆಳಗೆ ಕಂಡ ಅಧಿಕಾರಿಗಳು ವರದಿ ವರ್ಷದಲ್ಲಿ ಕಾರ್ಯನಿರ್ವಹಿಸುತ್ತಿದ್ದರು:</u>

1. ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು ಮತ್ತು ಜಿಲ್ಲಾ ಉಸ್ತುವಾರಿ ಅಧಿಕಾರಿ: ಪಿ. ಪಾರ್ಶ್ವನಾಥ್ ಇವರು ದಿನಾಂಕ: 01.04.2016 ರಿಂದ ದಿನಾಂಕ: 31.03.2018 ರವರೆಗೆ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಯ ಕಾರ್ಯನಿರ್ವಹಿಸುತ್ತಿದ್ದಾರೆ.

2. **ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1), ತಾಂತ್ರಿಕ, ಉಡುಪಿ:** ದಿನಾಂಕ: 01.04.2017 ರಿಂದ ದಿನಾಂಕ: 31.03.2018 ರವರೆಗೆ ಶ್ರೀ ಚಂದ್ರಶೇಖರ್, ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕುಂದಾಪುರರವರು ಪ್ರಭಾರದಲ್ಲಿರುತ್ತಾರೆ.

3. **ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2):** ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಶ್ರೀಮತಿ ಸವಿತಾ ಖಾದ್ರಿ ಎಸ್.ಕೆ., ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ರವರು ದಿನಾಂಕ: 01.04.2017 ರಿಂದ ದಿನಾಂಕ: 31.03.2018 ರವರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ.

4. ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1) ಕಛೇರಿಯಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಸದ್ರಿ ಹುದ್ದೆಯು ಸರ್ಕಾರಿ ಆದೇಶದ ಪ್ರಕಾರ ಮೀನುಗಾರಿಕೆ ಉಪನಿರ್ದೇಶಕರು, ಮಲ್ಪೆ ಈ ಕಛೇರಿಗೆ ಸ್ಥಳಾಂತರವಾಗಿದೆ.

5. **ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಉಡುಪಿ ಕಛೇರಿ:** ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:12:ಸಿಬ್ಬಂದಿ(01):2017 ದಿನಾಂಕ: 15.07.2017 ರಂತೆ ಶ್ರೀ ಕಿರಣ್ ಬಿ.ಡಿ., ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣೀ-2) ರವರು ಸದ್ರಿ ಹುದ್ದೆಯ ಕರ್ತವ್ಯಕ್ಕೆ ದಿನಾಂಕ: 31.10.2017 ರಂದು ಹಾಜರಾಗಿ ದಿನಾಂಕ: 31.03.2018 ರ ವರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ.

6. **ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕುಂದಾಪುರ ಕಛೇರಿ:** ಶ್ರೀ ಚಂದ್ರಶೇಖರ್ ಇವರು ದಿನಾಂಕ: 01.04.2017 ರಿಂದ 31.03.2018 ರ ವರೆಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಕುಂದಾಪುರ ಹುದ್ದೆಯ ಕಾರ್ಯನಿರ್ಹಿಸುತ್ತಿದ್ದಾರೆ.

7. **ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣೀ-2), ಕಾರ್ಕಳ:** ಶ್ರೀ ಚಂದನ್ ಸಿ. ಇವರು ದಿನಾಂಕ: 01.04.2017 ರಿಂದ 31.03.2018 ರ ವರೆಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಕಾರ್ಕಳ ಹುದ್ದೆಯ ಕಾರ್ಯನಿರ್ಹಿಸುತ್ತಿದ್ದಾರೆ.

2.3 **ವರ್ಗಾವಣೆ, ನೇಮಕಾತಿ ಮತ್ತು ನಿವೃತ್ತಿ:**

ನೇಮಕಾತಿ: 1) ಶ್ರೀಮತಿ ಶೃತಿ ನಿಂಬಾಳೆ, ಮೀನುಗಾರಿಕೆ ಕ್ಷೇತ್ರಪಾಲಕರಾಗಿ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:75:ಸಿಬ್ಬಂದಿ(2):2012-13 ದಿನಾಂಕ: 26.07.2017 ಆದೇಶ ಪ್ರಕಾರ ಸದ್ರಿ ಸಿಬ್ಬಂದಿಯು ದಿನಾಂಕ: 10.08.2017 ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕುಂದಾಪುರ ಕಛೇರಿಯಲ್ಲಿ ಖಾಲಿ ಇರುವ ಮೀನುಗಾರಿಕೆ ಕ್ಷೇತ್ರಪಾಲಕರ ಹುದ್ದೆಗೆ ಹಾಜರಾಗಿರುತ್ತಾರೆ.

2) ಕುಮಾರಿ ರಾಜಶ್ರೀ ತಿಗಡಿ, ಮೀನುಗಾರಿಕೆ ಕ್ಷೇತ್ರಪಾಲಕರಾಗಿ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:75:ಸಿಬ್ಬಂದಿ(2):2012-13 ದಿನಾಂಕ: 26.07.2017 ಆದೇಶ ಪ್ರಕಾರ ಸದ್ರಿ ಸಿಬ್ಬಂದಿಯು ದಿನಾಂಕ: 07.08.2017 ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕಾರ್ಕಳ ಕಛೇರಿಯಲ್ಲಿ ಖಾಲಿ ಇರುವ ಮೀನುಗಾರಿಕೆ ಕ್ಷೇತ್ರಪಾಲಕರ ಹುದ್ದೆಗೆ ಹಾಜರಾಗಿರುತ್ತಾರೆ.

3) ಶ್ರೀ ರವಿ ಹೆಚ್. ಪ್ರಥಮ ದರ್ಜೆ ಸಹಾಯಕರು, ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ ಇವರನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:236(52)ಸಿಬ್ಬಂದಿ(2):2017 ದಿನಾಂಕ: 15.06.2017 ರಂತೆ ಸದ್ರಿ ಸಿಬ್ಬಂದಿಯನ್ನು ಮೀನುಗಾರಿಕೆ ಉಪನಿರ್ದೇಶಕರ ಕಛೇರಿ, ಉಡುಪಿಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಲಾಗಿದೆ. ಸದ್ರಿ ಸಿಬ್ಬಂದಿಯು ದಿನಾಂಕ: 24.06.2017 ರಿಂದ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

<u>ವರ್ಗಾವಣೆ:</u>

1. ಶ್ರೀ ಎಸ್.ಎಸ್. ಗೋಳಸಂಗಿ, ಮೀನುಗಾರಿಕೆ ಮೇಲ್ವಿಚಾರಕರು ಇವರು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:46: ಸಿಬ್ಬಂದಿ(2):2016 ದಿನಾಂಕ: 20.12.2017 ರಲ್ಲಿ ಮೀನುಗಾರಿಕೆ ಕ್ಷೇತ್ರಪಾಲಕರ ಹುದ್ದೆಯಿಂದ ಮೀನುಗಾರಿಕೆ ಮೇಲ್ವಿಚಾರಕರ ಹುದ್ದೆಗೆ ಪದೋನ್ನತಿ ನೀಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕಾರ್ಕಳ ಕಛೇರಿಯ ಮೀನುಗಾರಿಕೆ ಮೇಲ್ವಿಚಾರಕರ ಖಾಲಿ ಹುದ್ದೆಗೆ ದಿನಾಂಕ: 03.01.2018 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

2. ಶ್ರೀ ಜೆ.ಎಂ ವಿಶ್ವನಾಥಯ್ಯ, ಮೀನುಗಾರಿಕೆ ಮೇಲ್ವಿಚಾರಕರು ಇವರು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:46:ಸಿಬ್ಬಂದಿ(2):2016 ದಿನಾಂಕ: 20.12.2017 ರಲ್ಲಿ ಮೀನುಗಾರಿಕೆ ಕ್ಷೇತ್ರಪಾಲಕರ ಹುದ್ದೆಯಿಂದ ಮೀನುಗಾರಿಕೆ ಮೇಲ್ವಿಚಾರಕರ ಹುದ್ದೆಗೆ ಪದೋನ್ನತಿ ನೀಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕುಂದಾಪುರ ಕಛೇರಿಯ ಮೀನುಗಾರಿಕೆ ಮೇಲ್ವಿಚಾರಕರ ಖಾಲಿ ಹುದ್ದೆಗೆ ದಿನಾಂಕ: 06.01.2018 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

3. ಶ್ರೀ ಮಾಳಪ್ಪ ಬಿ. ಪೂಜಾರಿ, ಮೀನುಗಾರಿಕೆ ಮೇಲ್ವಿಚಾರಕರು ಇವರು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:46:ಸಿಬ್ಬಂದಿ(2):2016 ದಿನಾಂಕ: 20.12.2017 ರಲ್ಲಿ ಮೀನುಗಾರಿಕೆ ಕ್ಷೇತ್ರಪಾಲಕರ ಹುದ್ದೆಯಿಂದ ಮೀನುಗಾರಿಕೆ ಮೇಲ್ವಿಚಾರಕರ ಹುದ್ದೆಗೆ ಪದೋನ್ನತಿ ನೀಡಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಉಡುಪಿ ಕಛೇರಿಯ ಮೀನುಗಾರಿಕೆ ಮೇಲ್ವಿಚಾರಕರ ಖಾಲಿ ಹುದ್ದೆಗೆ ದಿನಾಂಕ: 22.03.2018 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

4. ಶ್ರೀಮತಿ ನಳಿನಾಕ್ಷಿ, ಮೀನುಗಾರಿಕೆ ಕ್ಷೇತ್ರಪಾಲಕಿ, ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಕುಂದಾಪುರರವರ ಕಛೇರಿ ಇವರನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:220(35): ಸಿಬ್ಬಂದಿ(2): 2017 ದಿನಾಂಕ: 15.07.2017 ರ ಪ್ರಕಾರ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1), ಮಲ್ಪೆ ಕಛೇರಿಗೆ ವರ್ಗಾವಣೆಯಾಗಿರುವುದರಿಂದ ಸದ್ರಿಯವರನ್ನು ದಿನಾಂಕ: 01.08.2017 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

5. ಶ್ರೀ ಸಚಿನ್ ಆರ್. ಪುತ್ರನ್, ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು, ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಉಡುಪಿರವರ ಕಛೇರಿ ಇವರನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:220(35): ಸಿಬ್ಬಂದಿ(2):2017 ದಿನಾಂಕ: 15.07.2017 ರ ಪ್ರಕಾರ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1), ಮಲ್ಪೆ ಕಛೇರಿಗೆ ವರ್ಗಾವಣೆಯಾಗಿರುವುದರಿಂದ ಸದ್ರಿಯವರನ್ನು ದಿನಾಂಕ: 21.08.2017 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

6. ಶ್ರೀ ನಾರಾಯಣ ಪಿ. ಕಾಪಡಾಸ್ಕರ್, ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು, ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1), ಮಲ್ಪೆರವರನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:220(35):ಸಿಬ್ಬಂದಿ(2):2017 ದಿನಾಂಕ: 15.07.2017 ರ ಪ್ರಕಾರ ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2), ಉಡುಪಿರವರ ಕಛೇರಿಗೆ ವರ್ಗಾವಣೆಯಾಗಿರುವುದರಿಂದ ಸದ್ರಿಯವರು ದಿನಾಂಕ: 22.08.2017 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

7. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರ ಆದೇಶ ಸಂಖ್ಯೆ:ಮೀನಿ:62: ಸಿಬ್ಬಂದಿ(1):2016 ದಿನಾಂಕ: 03.04.2017 ರ ಆದೇಶದಲ್ಲಿ ಶ್ರೀ ಉಮೇಶ್ ಸಿ., ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-2) ಮತ್ತು ಶ್ರೀ ತೇಜಪಾಲ ಎಸ್. ಬಂಗೇರ, ''ಡಿ'' ಗ್ರೂಪ್, ಇವರನ್ನು ಹುದ್ದೆಯೊಂದಿಗೆ ಮೀನುಗಾರಿಕೆ ಉಪನಿರ್ದೇಶಕರು, ಉಡುಪಿ ಕಛೇರಿಗೆ ವರ್ಗಾಯಿಸಲಾಗಿದೆ.

2.4 **ಅಧಿಕಾರಿ/ನೌಕರರಿಗೆ ವಿಧಿಸಿದ ದಂಡನೆ ಮತ್ತು ಮೇಲ್ಮನವಿ ಮಾಹಿತಿ:** ಪ್ರಸ್ತುತ ಸಾಲಿನಲ್ಲಿ ಈ ಕಛೇರಿಯ ಹಾಗೂ ಅಧೀನ ಕಛೇರಿಯ ಅಧಿಕಾರಿ/ನೌಕರರಿಗೆ ಯಾವುದೇ ದಂಡನೆ ವಿಧಿಸಿರುವುದಿಲ್ಲ.

2.5 ಅಧಿಕಾರಿ/ಸಿಬ್ಬಂದಿಗಳ ಮಾಹಿತಿ ತಖ್ತೆ ಲಗತ್ತಿಸಲಾಗಿದೆ. ಅನುಬಂಧ-1 (ದಿನಾಂಕ: 31.03.2018 ರ ಅಂತ್ಯಕ್ಕೆ ಇದ್ದಂತೆ)

3. **ಹಣಕಾಸಿನ ತಖ್ತೆ:**

2.6 ತಖ್ತೆಯನ್ನು ಲಗತ್ತಿಸಲಾಗಿದೆ. (ಅನುಬಂಧ-2) 2017-18 ನೇ ಸಾಲಿನಲ್ಲಿ ಸಾಧಿಸಲಾದ ಜಮೆಯನ್ನು ಹಿಂದಿನ 2 ವರ್ಷಗಳಿಗೆ ಹೋಲಿಸಿದ ತುಲನಾತ್ಮಕ ವಿವರಗಳ ತಖ್ತೆ.

2.7 ತಖ್ತೆಯನ್ನು ಲಗತ್ತಿಸಲಾಗಿದೆ. (ಅನುಬಂಧ-3 ಮತ್ತು 4) 2017-18 ನೇ ಸಾಲಿನಲ್ಲಿ ವ್ಯಯವಾದ ಹಣದ ಲೆಕ್ಕಕ್ಕೆ (ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗೆ) ಹಿಂದಿನ 2 ವರ್ಷಗಳಿಗೆ ಹೋಲಿಸಿದ ತುಲನಾತ್ಮಕ ವಿವರಗಳ ತಖ್ತೆ.

4. ಅಭಿವೃದ್ಧಿ ಕಾರ್ಯಕ್ರಮ:

a. ಕರ್ನಾಟಕ ಕಡಲ ಮೀನುಗಾರಿಕೆ ಕಾಯ್ದೆ 1986 ರ ಅನುಷ್ಠಾನ ಕರ್ನಾಟಕ ಕಡಲ ಮೀನುಗಾರಿಕೆ ಕಾಯ್ದೆ ಮತ್ತು ಎಂ.ಎಸ್. ಆಕ್ಟ್ ಪ್ರಕಾರ ಮೀನುಗಾರಿಕಾ ದೋಣಿಗಳ ನೋಂದಣಿಯನ್ನು ಪ್ರಸ್ತುತ ಮೀನುಗಾರಿಕೆ ಇಲಾಖೆ ನಿರ್ವಹಿಸುತ್ತಿದೆ.

b. ಮೀನುಗಾರಿಕಾ ತಂಗುದಾಣ ಕೇಂದ್ರಗಳು: ಉಡುಪಿ ಜಿಲ್ಲೆಯಲ್ಲಿ 10 ಮುಖ್ಯ ಮೀನುಗಾರಿಕಾ ತಂಗುದಾಣ ಕೇಂದ್ರಗಳಿದ್ದು, ಸದ್ರಿ ಕೇಂದ್ರಗಳಲ್ಲಿ ಸಮುದ್ರ ಮೀನುಗಾರಿಕೆಯನ್ನು ಮಾಡಿ, ಹಿಡಿದು ತಂದ ಮೀನಿನ ಅಂಕಿ-ಅಂಶಗಳನ್ನು ಸಂಗ್ರಹಿಸುವುದು. ಮತ್ತು ಇಲಾಖೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಸಂಗ್ರಹಿಸುವುದು. ಮೀನುಗಾರರಿಗೂ ಇಲಾಖೆಗೂ ನೇರ ಸಂಪರ್ಕವಿಟ್ಟುಕೊಳ್ಳುವ ದೃಷ್ಟಿಯಲ್ಲಿ ಈ ಕೇಂದ್ರಗಳಲ್ಲಿರುವ ನೌಕರರ ಸೇವೆಯನ್ನು ಬಳಸಲಾಗುತ್ತದೆ.

c. **ಸಮುದ್ರ ಮೀನುಗಾರಿಕೆ:** 2017-18 ನೇ ಸಾಲಿನಲ್ಲಿ ಈ ಜಿಲ್ಲೆಯಲ್ಲಿ ಒಟ್ಟು 129159 ಮೆಟ್ರಿಕ್ ಟನ್ ಗಳಷ್ಟು ಪ್ರಮಾಣದ ವಿವಿಧ ಮೀನುಗಳನ್ನು ವಿವಿಧ ಯಾಂತ್ರೀಕೃತ ಮತ್ತು ಯಾಂತ್ರೀಕೃತವಲ್ಲದ ಮೀನುಗಾರಿಕಾ ನಾಡದೋಣಿಗಳಿಂದ ಹಿಡಿಯಲಾಗಿದೆ.

d. **ಮೀನುಗಾರರ ಸಹಕಾರಿ ಸಂಘಗಳು:**ವರದಿ ವರ್ಷದಲ್ಲಿ ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನಲ್ಲಿ 37 ಮೀನುಗಾರಿಕಾ ಸಹಕಾರಿ ಸಂಘಗಳಿದ್ದು, ಅದರಲ್ಲಿ 10 ಮೀನುಗಾರರ ಮಹಿಳಾ ಸಹಕಾರಿ ಸಂಘಗಳೂ ಒಳಗೊಂಡಿರುತ್ತದೆ. ಮತ್ತು 1 ಪರಿಶಿಷ್ಟ ಜಾತಿ ಮೀನುಗಾರ ಮಹಿಳೆಯರ ಸಹಕಾರಿ ಸಂಘ ಒಳಗೊಂಡಿರುತ್ತದೆ.

ಕುಂದಾಪುರ ತಾಲೂಕಿನಲ್ಲಿ 16 ಮೀನುಗಾರರ ಸಹಕಾರಿ ಸಂಘಗಳಿದ್ದು, 5 ಮಹಿಳಾ ಮೀನುಗಾರರ ಸಹಕಾರಿ ಸಂಘಗಳಿವೆ. ಹೀಗೆ ಒಟ್ಟು 53 ಮೀನುಗಾರರ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಮೀನುಗಾರರ ಶ್ರೇಯೋಭಿವೃದ್ಧಿಯಲ್ಲಿ ತೊಡಗಿರುತ್ತವೆ. ಅಲ್ಲದೇ ಮಹಾಮಂಡಳಿಯ ಶಾಖೆಗಳು ಎಲ್ಲಾ ಮೀನುಗಾರಿಕಾ ತಂಗುದಾಣಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

e. **ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಬಳಸುವ ಡೀಸಿಲ್ ಮೇಲಿನ ಮಾರಾಟ ತೆರಿಗೆ ಮರು ಪಾವತಿ ಯೋಜನೆ: (ಯೋಜನೇತರ):**ಈ ಬಗ್ಗೆ ಸರ್ಕಾರವು ನೇರವಾಗಿ ಸಂಸ್ಥೆಯ ಬಂಕುಗಳ ಮೂಲಕ ಮಾರಾಟಕರ ಕಡಿತಗೊಳಿಸಿ, 2105 ಬೋಟುಗಳಿಗೆ ಸರಬರಾಜು ಮಾಡಲಾಗುತ್ತಿದೆ.

f. **ಸಂಸ್ಕರಣೆ ಮತ್ತು ಸಲಕರಣೆ ಮಾರುಕಟ್ಟೆ ಮತ್ತು ಮತ್ಸ್ಯ ವಾಹಿನಿಗೆ ಸಹಾಯಧನ ಯೋಜನೆ:**ವರದಿ ವರ್ಷದಲ್ಲಿ ಈ ಯೋಜನೆಯಡಿ ರೂ. 7.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 700000/- ನ್ನು ಈ ಕೆಳಗಿನಂತೆ ಸಹಾಯಧನ ನೀಡಲಾಗಿದೆ.

ಕುಂದಾಪುರ ತಾಲೂಕು: ಕುಂದಾಪುರ ತಾಲೂಕಿನ 7 ಫಲಾನುಭವಿಗಳಿಗೆ ನಾಲ್ಕು ಚಕ್ರ/ತ್ರಿಚಕ್ರ/ದ್ವಿಚಕ್ರದ ವಾಹನ ಖರೀದಿ ಬಗ್ಗೆ ಒಟ್ಟು ರೂ. 240000/- ಸಹಾಯಧನ ಹಂಚಿಕೆ ಮಾಡಲಾಗಿದೆ.

ಉಡುಪಿ ತಾಲೂಕು: ಉಡುಪಿ ತಾಲೂಕಿನ 10 ಫಲಾನುಭವಿಗಳಿಗೆ ನಾಲ್ಕು ಚಕ್ರ/ತ್ರಿ ಚಕ್ರ ವಾಹನ ಖರೀದಿಗಾಗಿ ಒಟ್ಟು ರೂ. 325000/- ಸಹಾಯಧನ ನೀಡಲಾಗಿದೆ.

ಕಾರ್ಕಳ ತಾಲೂಕು: ಕಾರ್ಕಳ ತಾಲೂಕಿನ 4 ಫಲಾನುಭವಿಗಳಿಗೆ ನಾಲ್ಕು ಚಕ್ರ ವಾಹನ ಖರೀದಿಗೆ ಒಟ್ಟು ರೂ. 13500/- ಸಹಾಯಧನ ಮಂಜೂರು ಮಾಡಲಾಗಿದೆ.

g. **ಮೀನು ಮರಿ ಉತ್ಪಾದನೆ ಮತ್ತು ಹಂಚಿಕೆ:** ಪ್ರಸಕ್ತ ಸಾಲಿನಲ್ಲಿ 600000 ಮೀನು ಮರಿಗಳನ್ನು ಪಾಲನೆ ಮಾಡಿ, ಬಿತ್ತನೆ ಮೀನು ಮರಿಗಳನ್ನು ಖಾಸಗಿ ಮೀನು ಕೃಷಿಕರಿಗೆ ಮತ್ತು ಗ್ರಾಮ ಪಂಚಾಯತ್ ಕೆರೆಗಳಲ್ಲಿ ಬಿತ್ತನೆ ಮಾಡಲಾಗಿದೆ.

h. **ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆ:** ವರದಿ ವರ್ಷದಲ್ಲಿ ಮೀನುಗಾರರು ಮೀನುಗಾರಿಕೆಯಲ್ಲಿ ನಿರತರಾಗಿದ್ದಾಗ ಮೃತಪಟ್ಟ, ಅಂಗವಿಕಲರಾದ ಹಾಗೂ ಮೀನುಗಾರಿಕೆ ಸಲಕರಣೆಗಳಾದ ದೋಣಿ, ಇಂಜಿನ್ ಇತ್ಯಾದಿಗಳು ನಷ್ಟಗೊಂಡಾಗ ಸಂತ್ರಸ್ತರಿಗೆ ಪರಿಹಾರ ನೀಡುವ ಯೋಜನೆಯಡಿ 2017-18 ನೇ ಸಾಲಿನಲ್ಲಿ ಉಡುಪಿ ಜಿಲ್ಲೆಯ 28 ಮಂದಿ ಸಂತ್ರಸ್ತರಿಗೆ ಒಟ್ಟು ರೂ. 56.00 ಲಕ್ಷ ಪರಿಹಾರಧನವನ್ನು ನೀಡಲಾಗಿದೆ.

i. **ಮೀನುಗಾರರ ಜನತಾ ಸಾಮೂಹಿಕ ಅಪಘಾತ ವಿಮಾ ಯೋಜನೆ:** 2017-18 ನೇ ಸಾಲಿಗೆ ಈ ಯೋಜನೆಯಡಿ ಉಡುಪಿ ಜಿಲ್ಲೆಯ 8 ಫಲಾನುಭವಿಗಳಿಗೆ ರೂ. 16.00 ಲಕ್ಷ ವಿಮಾ ಪರಿಹಾರಧನವನ್ನು ವಿತರಿಸಲಾಗಿರುತ್ತದೆ.

j. **ವಿಶೇಷ ಘಟಕ ಯೋಜನೆ:**

ತಾಲೂಕು ಪಂಚಾಯತ್ ಯೋಜನೆ:

ಈ ಯೋಜನೆಯಡಿ ಉಡುಪಿ ಜಿಲ್ಲೆಯ ಪರಿಶಿಷ್ಟ ಜಾತಿ/ಪಂಗಡಗಳ 67 ಮಂದಿ ಮೀನುಗಾರ ಮಹಿಳೆಯರಿಗೆ ಮೀನು ಸಂಸ್ಕರಣೆಗೆ ಬೇಕಾದ ಮೀನು ಸಲಕರಣೆ ಕೊಳ್ಳುವ ಬಗ್ಗೆ ತಲಾ ರೂ. 3000/- ರಂತೆ ಸಹಾಯಧನ ರೂ. 2.01 ಲಕ್ಷ ಸಹಾಯಧನ ಮಂಜೂರು ಮಾಡಲಾಗಿದೆ.

2.8 **ಮೀನು ಮರಿಗಳ ಮಾರಾಟ:**2017-18 ನೇ ಸಾಲಿನಲ್ಲಿ 236000 ಲಕ್ಷ ಬಿತ್ತನೆ ಮೀನು ಮರಿಗಳನ್ನು ಮೀನು ಕೃಷಿಕರಿಗೆ ವಿತರಿಸಲಾಗಿದೆ. ಹಾಗೂ ರೂ. 41601/- ಆದಾಯ ಪಡೆಯಲಾಗಿದೆ.

2.9 **ವಸ್ತು ಪ್ರದರ್ಶನ ಮತ್ತು ತರಬೇತಿ:** 2017-18 ನೇ ಸಾಲಿನಲ್ಲಿ ಬಿಡುಗಡೆಯಾದ ರೂ. 2.00 ಲಕ್ಷ ಅನುದಾನದಲ್ಲಿ ಬೆಂಗಳೂರಿನಲ್ಲಿ ನಡೆದ ಮತ್ಸ್ಯಮೇಳ ಕಾರ್ಯಕ್ರಮಕ್ಕೆ ಮೀನುಗಾರರನ್ನು ಕರೆದುಕೊಂಡು ಹೋಗಿ, ಮಾಹಿತಿ ಒದಗಿಸಲಾಗಿದೆ. ಮತ್ತು ದೊಡ್ಡಣಗುಡ್ಡೆ ಫಲಪುಷ್ಪ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕೆಗೆ ಸಂಬಂಧಿಸಿದ ಪ್ರದರ್ಶನ ಆಯೋಜಿಸಲಾಗಿತ್ತು. ಹಾಗೂ ಕೈಪಿಡಿ ಮುದ್ರಣ, ಮೀನುಗಾರಿಕೆಗೆ ಸಂಬಂಧಿಸಿದ ಮಾಹಿತಿ ಕಾರ್ಯಾಗಾರ ಹಮ್ಮಿಕೊಂಡು ಯೋಜನೆಯನ್ನು ಯಶಸ್ವಿಗೊಳಿಸಲಾಗಿದೆ.

ಅನುಬಂಧ-1

ಮೀನುಗಾರಿಕೆ ಇಲಾಖೆ, ಉಡುಪಿ ಜಿಲ್ಲೆ ದಿನಾಂಕ: 31.03.2018 ರ ಅಂತ್ಯಕ್ಕೆ ಇದ್ದ ಸಿಬ್ಬಂದಿಗಳ ತಖ್ತೆ

ಕ್ರ.ಸಂ.	ವರ್ಗ	ಮಂಜೂರಾದ ಹುದ್ದೆ	ಭರ್ತಿಯಾ ಹುದ್ದೆ	ಗಂಡಸರು	ಹೆಂಗಸರು	ಎಸ್.ಸಿ.	ಎಸ್.ಟಿ.	ಖಾಲಿ ಹುದ್ದೆ	ಷರಾ
1	ಎ	1	1	1	0	0	0	0	
2	ಬಿ	5	4	3	1	2	0	1	
3	ಸಿ	19	8	6	2	1	0	10	

4	ಡಿ	8	1	1	0	0	0	7	
	ಒಟ್ಟು	**33**	**14**	**11**	**3**	**3**	**0**	**18**	

ರಾಜ್ಯ ವಲಯದಡಿ ಮಂಜೂರಾದ ಹುದ್ದೆಗಳು:

1	ಸಿ	4	1	1	0	0	0	3	
	ಒಟ್ಟು	**4**	**1**	**1**	**0**	**0**	**0**	**3**	

ಅನುಬಂಧ-2

2017-18 ನೇ ಸಾಲಿನಲ್ಲಿ ಸಾಧಿಸಲಾದ ಜಮೆ

ಲೆಕ್ಕ ಶೀರ್ಷಿಕೆ	**2015-16**		**2016-17**		**2017-18**	
	ಗುರಿ	ಜಮೆ	ಗುರಿ	ಜಮೆ	ಗುರಿ	ಜಮೆ
001 ಬಾಡಿಗೆ	-	870785	-	1178303	-	968224
02 ಮೀನು ಮರಿ ಮಾರಾಟದಿಂದ	-	74890	-	40067	-	41601
04 ಇತರ ಬಾಬ್ತುಗಳು	-	2341019	-	2008670	-	2334749
01 ಮುದ್ರಾಂಕ ಶುಲ್ಕ	-	-	-	12203	-	11180
ಒಟ್ಟು		3286694		3239243		3355754

ಅನುಬಂಧ-3

ಉಡುಪಿ ಜಿಲ್ಲೆ 2017-18 ರ ಸಾಲಿನಲ್ಲಿ ನೀಡಲಾದ ಅನುದಾನ ಮತ್ತು ವ್ಯಯವಾದ ಖರ್ಚನ್ನು 2015-16, 2016-17, 2017-18 ರ ಸಾಲಿನಲ್ಲಿ ಒದಗಿಸಲಾದ ಅನುದಾನ ಮತ್ತು ವೆಚ್ಚಕ್ಕೆ ಹೋಲಿಸಿದ ತುಲನಾತ್ಮಕ ತಖ್ತೆ (ರೂ. ಲಕ್ಷಗಳಲ್ಲಿ)

ಲೆಕ್ಕ ಶೀರ್ಷಿಕೆ	2015-16		2016-17		2017-18	
	ಅನುದಾನ (ಲಕ್ಷಗಳಲ್ಲಿ)	ವೆಚ್ಚ	ಅನುದಾನ (ಲಕ್ಷಗಳಲ್ಲಿ)	ವೆಚ್ಚ	ಅನುದಾನ (ಲಕ್ಷಗಳಲ್ಲಿ)	ವೆಚ್ಚ
2405-00-101-0-26	56.41	54.58	68.00	55.98	68.21	55.97

ಅನುಬಂಧ - 4

ಉಡುಪಿ ಜಿಲ್ಲೆ 2015-16, 2016-17, 2017-18 ನೇ ಸಾಲಿನಲ್ಲಿ ವ್ಯಯವಾದ ಹಣದ ಲೆಕ್ಕ (ಯೋಜನೆ) ದ ತಾಳೆ ತಖ್ತೆ

ಕ್ರ.ಸಂ.	ಲೆಕ್ಕ ಶೀರ್ಷಿಕೆ	2015-16	2016-17	2017-18
1	2405-00-101-0-28	544930	738684	836148
2	2405-00-101-0-31	0	0	0
3	2405-00-101-0-32	199039	198232	199797
4	2405-00-101-0-27	449315	536994	638508
5	2405-00-102-0-01	0	0	0
6	2405-00-104-0-02	5998775	720000	0
7	2405-00-101-0-30	695000	695000	700000
8	2405-00-101-0-29	0	0	0

ಸಾಮಾಜಿಕ ಅರಣ್ಯ ವಿಭಾಗ

ಉಡುಪಿ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಬರುವ ಸರಕಾರಿ ಬಂಜರು ಭೂಮಿ, ಪಂಚಾಯತ್ ಭೂಮಿ, ಶಾಲಾ ಆವರಣದ ಖಾಲಿ ಜಾಗಗಳಲ್ಲಿ, ಮತ್ತು ರಸ್ತೆಬದಿಯಲ್ಲಿರುವ ಖಾಲಿ ಜಾಗಗಳಲ್ಲಿ ಅರಣ್ಯ ಇಲಾಖೆಯ ನಿಯಮಾವಳಿಯಂತೆ ನೆಡುತೋಪುಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗಿರಿಜನ ಉಪಯೋಜನೆ (T.S.P.) ಅಡಿ ಗಿರಿಜನರ ಜಮೀನುಗಳಲ್ಲಿ ಅವರಿಗೆ ಬೇಕಾದ ಸಸಿಗಳನ್ನು ನೆಟ್ಟು ಸಾಮಾಜಿಕ ಭದ್ರತಾ ನೆಡುತೋಪುಗಳನ್ನು ಬೆಳೆಸಲಾಗುತ್ತದೆ. ಮತ್ತು ಸೋಲಾರ್ ದೀಪವನ್ನು ವಿತರಿಸಲಾಗುತ್ತಿದೆ. ಉತ್ತಮ ಜಾತಿಯ ಒಳ್ಳೆಯ ಗುಣಮಟ್ಟದ ಸಸಿಗಳನ್ನು ಬೆಳೆಸಿ, ಸರಕಾರ ನಿಗದಿಪಡಿಸಿದ ರಿಯಾಯತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ವಿಭಾಗದ ಮೂರು ತಾಲೂಕುಗಳಲ್ಲಿ 3 ಕೇಂದ್ರಿಯ ಸಸ್ಯಕ್ಷೇತ್ರಗಳಿರುತ್ತವೆ. ಅವುಗಳು :–

1. ಉಡುಪಿ ತಾಲೂಕು : ಪೆರ್ಡೂರು ಕೇಂದ್ರಿಯ ಸಸ್ಯಕ್ಷೇತ್ರ
2. ಕಾರ್ಕಳ ತಾಲೂಕು : ಮಾಳಾ ಕೂಡಿಗೆ ಕೇಂದ್ರಿಯ ಸಸ್ಯಕ್ಷೇತ್ರ
3. ಕುಂದಾಪುರ ತಾಲೂಕು : ಹಾಲಾಡಿ ಕೇಂದ್ರಿಯ ಸಸ್ಯಕ್ಷೇತ್ರ

ನೆಡುತೋಪುಗಳಿಗೆ ಬೇಕಾದ ವಿವಿಧ ಜಾತಿಯ ಸಸಿಗಳನ್ನು ಈ ಸಸ್ಯಕ್ಷೇತ್ರಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಬೆಳೆಸಲಾಗುತ್ತದೆ.

ಸಾಮಾಜಿಕ ಅರಣ್ಯ ವಿಭಾಗದ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಮುಖ್ಯ ಯೋಜನೆಗಳು.

1. 2406–00–101–0–26 ಸಾಮಾಜಿಕ ಅರಣ್ಯೀಕರಣ (ಯೋಜನೇತರ)
2. 2406–00–101–0–27 ಸಾಮಾಜಿಕ ಅರಣ್ಯ (ಯೋಜನೆ)
3. 2406–00–101–0–28 ಕಟ್ಟಡಗಳು (ಯೋಜನೆ)
4. 2225–00–102–070ಗಿರಿಜನ ಉಪಯೋಜನೆ (ತಾ.ಪಂ.)
5. 2251–01–001–01–059 ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ (ಸಿ.ಎಸ್.ಎಸ್.)
6. 2406-01-102-2-22 PV 139 ಸಾರ್ವಜನಿಕರಿಗೆ ಸಸಿ ವಿತರಣೆ (ಆರ್.ಎಸ್.ಪಿ.ಡಿ.)
7. RSP 2406-01-101-2-83-139 ರಸ್ತೆಬದಿ ನೆಡುತೋಪು ಬೆಳೆಸುವುದು (ಆರ್.ಎಸ್.ಪಿ.)
8. 2406–01–102–1– KFDF–03–ಇತರೆ ನೆಡುತೋಪು ಯೋಜನೆ
9. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ)
10. 2401–00–109–0–21–059– ಮತ್ತು 2406–00–800–1–57 ಭೂ ಸಮೃದ್ಧಿ ಯೋಜನೆ

1. ಸಾಮಾಜಿಕ ಅರಣ್ಯೀಕರಣ (ಯೋಜನೇತರ):–

2017–18 ನೇ ಸಾಲಿಗೆ ಈ ಯೋಜನೆಯಡಿ ಬಿಡುಗಡೆಯಾದ ರೂ. 81.61 ಲಕ್ಷ ಅನುದಾನದಲ್ಲಿ ವೇತನ, ವೇತನೇತರ ವೆಚ್ಚ ರೂ. 61.66 ಲಕ್ಷ ಅನುದಾನ ಖರ್ಚಾಗಿರುತ್ತದೆ. ಈ ವಿಭಾಗದಲ್ಲಿ 3 ಉಪ ವಲಯ ಅರಣ್ಯ ಅಧಿಕಾರಿ, 1 ಅಧೀಕ್ಷಕರ ಹುದ್ದೆಗಳು ಖಾಲಿ ಇರುತ್ತದೆ.

2. ಸಾಮಾಜಿಕ ಅರಣ್ಯ (ಯೋಜನೆ):–

2017–18 ನೇ ಸಾಲಿಗೆ ಈ ಯೋಜನೆಯಡಿ ರೂ. 56.00 ಲಕ್ಷ ಗುರಿ ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ರೂ. 56.00 ಲಕ್ಷ ಅನುದಾನ ಬಿಡುಗಡೆಗೊಂಡಿದ್ದು, ಸಂಪೂರ್ಣ ಖರ್ಚು ಭರಿಸಲಾಗಿದೆ. 2017–18 ನೇ ಸಾಲಿನಲ್ಲಿ ಸದರಿ ಅನುದಾನದಲ್ಲಿ 8.00 ಹೆ. ಬ್ಲಾಕ್ ನೆಡುತೋಪು ಹಾಗೂ 23.00 ಕಿ.ಮೀ. ರಸ್ತೆಬದಿ ನೆಡುತೋಪು ಬೆಳೆಸಲಾಗಿದೆ. 22.00 ಹೆ. ಬ್ಲಾಕ್ ನೆಡುತೋಪು ಮತ್ತು 28.00ಕಿಮೀ. ರಸ್ತೆಬದಿ ನೆಡುತೋಪು ಪೋಷಣೆ ಮಾಡಲಾಗಿದೆ. ಅಲ್ಲದೆ 25.00 ಹೆ. ಬ್ಲಾಕ್ ನೆಡುತೋಪು ಮುಂಗಡ ಕಾಮಗಾರಿ, 10.50ಕಿ.ಮೀ. ರಸ್ತೆಬದಿ ನೆಡುತೋಪು ಮುಂಗಡ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಅಲ್ಲದೆ 0.296 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ.

3. ಗಿರಿಜನ ಉಪಯೋಜನೆ (ತಾ.ಪಂ) :–

ಈ ಯೋಜನೆಯಲ್ಲಿ 2017–18 ನೇ ಸಾಲಿಗೆ ರೂ. 3.75 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ 45 ಗಿರಿಜನ ಫಲಾನುಭವಿಗಳಿಗೆ ತಲಾ 1ರಂತೆ 45 ಸೋಲಾರ್ ದೀಪವನ್ನು ಅಳವಡಿಸಲಾಗಿದೆ. ಮತ್ತು 46 ಫಲಾನುಭವಿಗಳಿಗೆ 46 ಸೋಲಾರ್ ಲ್ಯಾಂಪನ್ನು ವಿತರಿಸಲಾಗಿದೆ. ಈ ಯೋಜನೆಯಡಿ ಬಿಡುಗಡೆಯಾದ ರೂ. 3.75ಲಕ್ಷ ಅನುದಾನವನ್ನು ಸಂಪೂರ್ಣ ಉಪಯೋಗಿಸಿಕೊಳ್ಳಲಾಗಿದೆ.

4. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ:–

2017–18ನೇ ಸಾಲಿಗೆ ಈ ವಿಭಾಗಕ್ಕೆ ನಿಗದಿಪಡಿಸಿದ ರೂ. 6.00 ಲಕ್ಷ ಅನುದಾನದ ಗುರಿ ಇದ್ದು, 6.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಪೂರ್ತಿ ಅನುದಾನವನ್ನು ಖರ್ಚು ಭರಿಸಲಾಗಿದೆ. ಈ ಯೋಜನೆಯಡಿ 10.00 ಕಿ.ಮೀ ರಸ್ತೆಬದಿ ನೆಡುತೋಪು ಮುಂಗಡ ಕಾಮಗಾರಿ ಮತ್ತು 2.00 ಹೆ.ಬ್ಲಾಕ್ ನೆಡುತೋಪು, 4.00 ಕಿ.ಮೀ. ರಸ್ತೆಬದಿ ನೆಡುತೋಪು ಪೋಷಣೆ ಕಾಮಗಾರಿ ಮಾಡಲಾಗಿದೆ.

5. ಕಟ್ಟಡ :

2017–18 ನೇ ಸಾಲಿಗೆ ಕಟ್ಟಡಗಳು ಈ ಯೋಜನೆಯಡಿ ಈ ವಿಭಾಗಕ್ಕೆ ರೂ.10.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ವಲಯ ಅರಣ್ಯ ಅಧಿಕಾರಿ, ಕುಂದಾಪುರರವರ ವಸತಿಗೃಹ ಕಟ್ಟಡದ ಮುಂದುವರಿದ ಕಾಮಗಾರಿಗಾಗಿ ರೂ. 1.25 ಲಕ್ಷ. ಹಾಗೂ ವಲಯ ಅರಣ್ಯ ಅಧಿಕಾರಿ, ಕುಂದಾಪುರರವರ ಕಚೇರಿ ಕಟ್ಟಡದ ನಿರ್ಮಾಣ ಕಾಮಗಾರಿಗೆ ರೂ. 8.75 ಲಕ್ಷ ಅನುದಾನವನ್ನು ಭರಿಸಲಾಗಿದೆ.

6.ಸಾರ್ವಜನಿಕರಿಗೆ ಸಸಿ ವಿತರಣೆ (ಆರ್‌ಎಸ್‌ಪಿಡಿ):–

ಈ ಯೋಜನೆಯಡಿ 2017–18 ನೇ ಸಾಲಿಗೆ ರೂ. 7.716 ಲಕ್ಷ ಅನುದಾನ ಗುರಿ ಇದ್ದು, ಅನುದಾನ ಬಿಡುಗಡೆಯಾಗಿರುತ್ತದೆ. ಈ ವಿಭಾಗದ ವಿವಿಧ ನರ್ಸರಿಗಳಲ್ಲಿ ಹಿಂದಿನ ಸಾಲಿನಲ್ಲಿ ಬೆಳೆಸಿದ 0.83 ಲಕ್ಷ ಸಸಿಗಳನ್ನು ಪ್ರಸಕ್ತ ಸಾಲಿನಲ್ಲಿ ಪೋಷಣೆ ಮಾಡಿ 0.83 ಲಕ್ಷ ಸಸಿಗಳನ್ನು ಸಾರ್ವಜನಿಕರಿಗೆ ಹಾಗೂ ರೈತರಿಗೆ ವಿತರಿಸಲಾಗಿದೆ. ಹಾಗೂ ಪ್ರಸಕ್ತ ಸಾಲಿನಲ್ಲಿ 0.65 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ. ಈ ಯೋಜನೆಯಡಿ ರೂ. 7.716 ಲಕ್ಷ ಅನುದಾನವನ್ನು ಸಂಪೂರ್ಣ ವೆಚ್ಚ ಭರಿಸಲಾಗಿದೆ.

7. **ರಸ್ತೆಬದಿ ನೆಡುತೋಪು ಬೆಳೆಸುವುದು (ಆರ್.ಎಸ್.ಪಿ.) :–**

ಈ ಯೋಜನೆಯಡಿ 2017–18 ನೇ ಸಾಲಿಗೆ ರೂ. 7.35163 ಲಕ್ಷ ಅನುದಾನ ಗುರಿ ಇದ್ದು, ಅನುದಾನ ಬಿಡುಗಡೆಯಾಗಿರುತ್ತದೆ. ಈ ಯೋಜನೆಯಡಿ 12.00 ಕಿ.ಮೀರಸ್ತೆಬದಿ ನೆಡುತೋಪು ಮುಂಗಡ ಕಾಮಗಾರಿ ಕೈಗೊಳ್ಳಲಾಗಿ ರೂ. 7.35163 ಲಕ್ಷ ಅನುದಾನವನ್ನು ಸಂಪೂರ್ಣ ವೆಚ್ಚ ಭರಿಸಲಾಗಿದೆ.

8. ಕೆಎಫ್‌ಡಿಎಫ್ 03 ಇತರೆ ನೆಡುತೋಪು ಯೋಜನೆ:–

ಈ ಯೋಜನೆಯಡಿ 2017–18 ಸಾಲಿನಲ್ಲಿ 33.25 ಹೆ. ಉರುವಲು ನೆಡುತೋಪು ಬೆಳೆಸುವ ಕಾಮಗಾರಿ, 21.70 ಹೆ. ಶಾಲಾವನ ಮತ್ತು ಸಂಘ–ಸಂಸ್ಥೆಯಲ್ಲಿ ನೆಡುತೋಪು ಬೆಳೆಸುವ ಕಾಮಗಾರಿಯನ್ನು ಕೈಗೊಳ್ಳಲ್ಲಾಗಿದೆ. ಈ ಯೋಜನೆಯಡಿ 19.520 ಲಕ್ಷ ಅನುದಾನದ ಗುರಿ ಇದ್ದು, ಅನುದಾನ ಬಿಡುಗಡೆಯಾಗಿರುತ್ತದೆ. ಹಾಗೂ ಅನುದಾನವನ್ನು ಸಂಪೂರ್ಣ ವೆಚ್ಚ ಭರಿಸಲಾಗಿದೆ.

9 ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ನರೇಗಾ):–

ಈ ಯೋಜನೆಯಡಿ 2017–18ನೇ ಸಾಲಿನಲ್ಲಿ 8.00 ಕಿ.ಮೀ ರಸ್ತೆ ಬದಿ ನೆಡುತೋಪು ಬೆಳೆಸಲಾಗಿದೆ. ಫಲಾನುಭವಿ ಜಾಗದಲ್ಲಿ 0.24 ಲಕ್ಷ ಸಸಿ ಬೆಳೆಸಲಾಗಿದೆ, 14.00 ಕಿ.ಮೀ ರಸ್ತೆ ಬದಿ ನೆಡುತೋಪು ಮುಂಗಡ ಕಾಮಗಾರಿ ಕೈಗೊಳ್ಳಲ್ಲಾಗಿ, 0.36860 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ. ಈ ಯೋಜನೆಯಡಿ 20.24138 ಲಕ್ಷ ಅನುದಾನ ವೆಚ್ಚ ಭರಿಸಿ ಪ್ರಗತಿ ಸಾಧಿಸಲಾಗಿದೆ.

10. ಭೂ ಸಮೃದ್ಧಿ ಯೊಜನೆ:–

ಈ ಯೋಜನೆಯಡಿ 2017–18ನೇ ಸಾಲಿನಲ್ಲಿ 21.84 ಲಕ್ಷ ಅನುದಾನದ ಗುರಿ ಇರುತ್ತದೆ. ಈ ಯೋಜನೆಯಡಿ 105.00 ಹೆ. ಫಲಾನುಭವಿ ಜಾಗದಲ್ಲಿ ನೆಡುತೋಪು ಬೆಳೆಸಲಾಗಿದೆ. 17.00 ಕಿ.ಮೀ. ರಸ್ತೆಬದಿ ನೆಡುತೋಪು 5.00 ಹೆ. ಉರುವಲು ನೆಡುತೋಪು ಬೆಳೆಸಲಾಗಿದೆ. ಹಾಗೂ 7.50ಹೆ. ಉರುವಲು ನೆಡುತೋಪಿನ ಪೋಷಣೆ ಕಾಮಗಾರಿ ಕೈಗೊಂಡು ಪ್ರಗತಿ ಸಾಧಿಸಿ ಪೂರ್ಣ ವೆಚ್ಚ ಭರಿಸಲಾಗಿದೆ.

ಭೂ ಸಮೃದ್ಧಿ(IFS)ಯೋಜನೆಯಡಿ 2017–18ನೇ ಸಾಲಿನಲ್ಲಿ 2.35 ಲಕ್ಷ ಅನುದಾನದ ಗುರಿ ಇರುತ್ತದೆ. ಈ ಯೋಜನೆಯಡಿ ಫಲಾನುಭವಿ ಜಾಗದಲ್ಲಿ 0.1564 ಲಕ್ಷ ಸಸಿ ಬೆಳೆಸಲಾಗಿದೆ. ಈ ಯೋಜನೆಯಡಿ 2.35 ಲಕ್ಷ ಅನುದಾನ ವೆಚ್ಚ ಭರಿಸಿ ಪ್ರಗತಿ ಸಾಧಿಸಲಾಗಿದೆ.

ಭೂಸಮೃದ್ಧಿ ಯೋಜನೆಯಡಿ NRLMತರಬೇತಿ ಕಾರ್ಯಕ್ರಮಕ್ಕಾಗಿ ಈ ವಿಭಾಗಕ್ಕೆ 76,000 ಅನುದಾನ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ಬ್ರಹ್ಮಾವರ ಕೃಷಿ ಕೇಂದ್ರದಲ್ಲಿ ದಿನಾಂಕ: 26–03–2018 ರಿಂದ 28–03–2017ರ ವರೆಗೆ 3ದಿನ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಅನುದಾನವನ್ನು ಸಂಪೂರ್ಣ ವೆಚ್ಚ ಭರಿಸಲಾಗಿದೆ.

2017–18 ನೇ ಸಾಲಿನಲ್ಲಿ ವಿಭಾಗದ ಪ್ರಗತಿ

ಕ್ರ.ಸಂ.	ಕೆಲಸದ ವಿವರಗಳು	ಗುರಿ	ಸಾಧನೆ
1	ನೆಡುತೋಪು ಬೆಳೆಸುವುದು. ರಸ್ತೆಬದಿ ನೆಡುತೋಪು ಬೆಳೆಸುವುದು. ಫಲಾನುಭವಿ ಜಾಗದಲ್ಲಿ ನೆಡುತೋಪು ಬೆಳೆಸುವುದು.	67.95 ಹೆ. + 48.00 ಕಿ.ಮೀ. 105.00 ಹೆ.	67.95 ಹೆ. + 48.00 ಕಿ.ಮೀ. 105.00 ಹೆ.
2	ಮುಂಗಡ ಕಾಮಗಾರಿ ರಸ್ತೆಬದಿ ಮುಂಗಡ ಕಾಮಗಾರಿ.	25.00 ಹೆ.+ 46.50 ಕಿ.ಮೀ.	25.00 ಹೆ. + 46.50 ಕಿ.ಮೀ.
3	ಪಾಲಿತೀನ್ ಚೀಲದಲ್ಲಿ ಸಸಿಗಳನ್ನು ಬೆಳೆಸುವುದು.	1.13547 ಲಕ್ಷ	1.13547 ಲಕ್ಷ
4	ನೆಡುತೋಪು ಪೋಷಣೆ ರಸ್ತೆಬದಿ ನೆಡುತೋಪು ಪೋಷಣೆ.	37.50 ಹೆ. + 26.00 ಕಿ.ಮೀ.	37.50 ಹೆ. + 26.00 ಕಿ.ಮೀ.
5	ಸಸಿ ಪೋಷಣೆ.	ಸಂಖ್ಯೆ 0.83 ಲಕ್ಷ	ಸಂಖ್ಯೆ 0.83ಲಕ್ಷ

ಉಡುಪಿ ಜಿಲ್ಲೆಯು ಪಶ್ಚಿಮ ಘಟ್ಟದ ಒಂದು ಭಾಗವಾಗಿರುವುದರಿಂದ ಇದು ವಿಶ್ವದ ಜೀವವೈವಿಧ್ಯ ನೆಲೆಗಳಲ್ಲೊಂದಾಗಿರುತ್ತದೆ. ಇಂತಹ ಭೂ ಪ್ರದೇಶದಲ್ಲಿ ಕನಿಷ್ಟ 1500 ಸ್ಥಳೀಯ ಸಸ್ಯ ಪ್ರಭೇಧಗಳು ಆಶ್ರಯ ಪಡೆದಿರುತ್ತವೆ. ಅದುದರಿಂದ ನಮ್ಮ ಜಿಲ್ಲೆಯ ಅರಣ್ಯ ಪ್ರದೇಶವನ್ನು ಕಾಪಾಡಿ ಬಂಜರು ಭೂಮಿಯನ್ನು ಅರಣ್ಯಗೊಳಿಸಿ ಅಮೂಲ್ಯ ಸಸ್ಯ ಮತ್ತು ಜೀವಿವೈವಿಧ್ಯಗಳನ್ನು ಕಾಪಾಡಲು ಗ್ರಾಮ ಪಂಚಾಯತ್‌ಗಳ ಪಾತ್ರ ಮಹತ್ವದಾಗಿರುತ್ತದೆ. ಮತ್ತು ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯೊಂದಿಗೆ ಸಹಕರಿಸಿ ಉಡುಪಿ ಜಿಲ್ಲೆಯನ್ನು ನಿಸರ್ಗ ಪ್ರವಾಸೋದ್ಯಮವಾಗಿ (Eco-Tourism) ಬೆಳೆಸಲು ಮಹತ್ವದ ಪಾತ್ರ ವಹಿಸಬಹುದಾಗಿದೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (ಜಿಲ್ಲಾ ಪಂಚಾಯತ್)

ಉಡುಪಿ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಿಲ್ಲಾ ಕಛೇರಿಯು ಜಿಲ್ಲಾ ಸಂಕೀರ್ಣ, 'ಬಿ ಬ್ಲಾಕ್' 1ನೇ ಮಹಡಿ, ರಜತಾದ್ರಿ, ಮಣಿಪಾಲ, ಉಡುಪಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಪ ನಿರ್ದೇಶಕರು (ಖಾಗ್ರಾ) ಇವರು ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ 03 ಕೈಗಾರಿಕಾ ವಿಸ್ತರಣಾಧಿಕಾರಿಗಳ ಹುದ್ದೆ ಮಂಜೂರು ಆಗಿರುತ್ತದೆ. ಆದರೆ ಉಪ ನಿರ್ದೇಶಕರು (ಖಾಗ್ರಾ), ಹಾಗೂ ಕಛೇರಿ ಸಿಬ್ಬಂದಿ ವರ್ಗ ಹಾಗೂ 02 ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳು ಖಾಲಿ ಇರುತ್ತದೆ. ಮತ್ತು ಈ ಕಛೇರಿಯ ಅಧೀನ ಕಛೇರಿಯಾದ ಕುಶಲಕರ್ಮಿ ತರಬೇತಿ ಸಂಸ್ಥೆಯು ಇದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಇದರಲ್ಲಿ 02 ಹುದ್ದೆ ಮಂಜೂರಾಗಿದ್ದು 02 ಹುದ್ದೆಗಳೂ ಸಹ ಭರ್ತಿಯಾಗಿರುತ್ತದೆ.

ಅನುಬಂಧ–1

ಜಿಲ್ಲಾ ಮಟ್ಟ:

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಅಧಿಕಾರಿಯ ಹೆಸರು
1	ಉಪ ನಿರ್ದೇಶಕರು (ಖಾಗ್ರಾ) ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ	ಶ್ರೀ ಜಿ. ವಾಮನ ನಾಯ್ಕ (ಪ್ರಭಾರ)

ಅನುಬಂಧ–2

<u>ತಾಲೂಕು ಮಟ್ಟ:</u>

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಅಧಿಕಾರಿಯ ಹೆಸರು
1	ಉಪ ನಿರ್ದೇಶಕರು (ಖಾಗ್ರಾ) ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ	ಶ್ರೀ ಸತೀಶ ಬಸಗೌಡರ ಕೈಗಾರಿಕಾ ವಿಸ್ತರಣಾಧಿಕಾರಿ, ಉಡುಪಿ
2	–ಅದೇ–	ಶ್ರೀ ಕೆ. ವಿಕ್ರಂ, ಕೈಗಾರಿಕಾ ವಿಸ್ತರಣಾಧಿಕಾರಿ, ಕುಂದಾಪುರ (ಪ್ರಭಾರ)
3	ಉಪ ನಿರ್ದೇಶಕರು (ಖಾಗ್ರಾ) ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ	ಶ್ರೀ ಕೆ. ವಿಕ್ರಂ, ಕೈಗಾರಿಕಾ ವಿಸ್ತರಣಾಧಿಕಾರಿ, ಕಾರ್ಕಳ (ಪ್ರಭಾರ)
4	–ಅದೇ–	ಪ್ರಥಮದರ್ಜೆ ಸಹಾಯಕರು, ಉಡುಪಿ –ಹುದ್ದೆ ಖಾಲಿ–
5	–ಅದೇ–	ಬೆರಳಚ್ಚುಗಾರರು –ಹುದ್ದೆ ಖಾಲಿ–
6	–ಅದೇ–	ಗ್ರೂಪ್ 'ಡಿ' –ಹುದ್ದೆ ಖಾಲಿ–
7	ಸಹಾಯಕ ನಿರ್ದೇಶಕರು ಕುಶಲಕರ್ಮಿ ತರಬೇತಿ ಸಂಸ್ಥೆ, ಉಡುಪಿ	ಶ್ರೀ ಜಿ. ವಾಮನ ನಾಯ್ಕ ಸಹಾಯಕ ನಿರ್ದೇಶಕರು
8	–ಅದೇ–	ಶ್ರೀ ನಾಗಿನಿ ತಾಯಿ ಲಕ್ಷ್ಮೀ ಸಹಾಯಕ ಬೋಧಕರು

ಅನುಬಂಧ–3

ಜಿಲ್ಲೆ ಹಾಗೂ ತಾಲೂಕು:

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಇರುವ ಹುದ್ದೆ
1	ಉಪ ನಿರ್ದೇಶಕರು (ಖಾಗ್ರಾ) ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ	07	01	06
2	ಸಹಾಯಕ ನಿರ್ದೇಶಕರು ಕುಶಲಕರ್ಮಿ ತರಬೇತಿ ಸಂಸ್ಥೆ, ಉಡುಪಿ	02	02	0

ಅನುಬಂಧ–4

ಜಿಲ್ಲೆ ಹಾಗೂ ತಾಲೂಕು:

ಕ್ರಮ ಸಂಖ್ಯೆ	ಸ್ವಂತ ವಾಹನ	ಬಾಡಿಗೆ ವಾಹನ	ಬಾಡಿಗೆ ವಾಹನ ವಾಗಿದ್ದಲ್ಲಿ ತಿಂಗಳ ಬಾಡಿಗೆ ಮೊತ್ತ	ಕಾರು	ಜೀಪು	ವ್ಯಾನ್	ಒಟ್ಟು
1	ಇಲ್ಲ	ಇಲ್ಲ	–	–	–	–	–

ಅನುಬಂಧ–5

ಜಿಲ್ಲೆ ಹಾಗೂ ತಾಲೂಕು:

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಕಟ್ಟಡದ ವಿಸ್ತೀರ್ಣ	ಸ್ವಂತ ಯಾ ಬಾಡಿಗೆ	ಬಾಡಿಗೆಯಾಗಿದ್ದಲ್ಲಿ ತಿಂಗಳ ಬಾಡಿಗೆ ಮೊತ್ತ
1	ಉಪ ನಿರ್ದೇಶಕರು (ಖಾಗ್ರಾ) ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ	860.58ಚ.ಅಡಿ	ಬಾಡಿಗೆ (ವಿದ್ಯುತ್ ವೆಚ್ಚ ಹಾಗೂ ನಿರ್ವಹಣಾ ವೆಚ್ಚ)	ರೂ. 7,746/– ಮಾಸಿಕ

2017–18ನೇ ಸಾಲಿನಲ್ಲಿ ಉಪ ನಿರ್ದೇಶಕರು (ಖಾಗ್ರಾ), ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ ಕಛೇರಿಯ ವತಿಯಿಂದ ಅನುಷ್ಠಾನಗೊಳಿಸಿರುವ ಯೋಜನೆಗಳ ವಿವರ ಕೆಳಗಿನಂತಿದೆ:–

ಜಿಲ್ಲಾ ಪಂಚಾಯತ್ ಯೋಜನೆಗಳು:

ಎ. **ಜಿಲ್ಲಾ ಔದ್ಯಮಿಕ ಕೇಂದ್ರಗಳು (ಆರ್‌ಐಪಿ/ಆರ್‌ಎಪಿ):**

ಉಡುಪಿ ಜಿಲ್ಲೆಯ ಗ್ರಾಮೀಣ ಪ್ರದೇಶದ ವೃತ್ತಿ ನಿರತ ಕುಶಲಕರ್ಮಿಗಳಿಗೆ ಬಡಗಿ, ಕಮ್ಮಾರಿಕೆ, ಕ್ಷೌರಿಕ, ದೋಬಿ, ಹೊಲಿಗೆ ಯಂತ್ರ, ಬ್ಯೂಟಿಪಾರ್ಲರ್ ಹಾಗೂ ಗಾರೆ ಕೆಲಸದವರಿಗೆ ಗರಿಷ್ಟ ರೂ.5,000/– ಮೌಲ್ಯದ ಸುಧಾರಿತ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ:–

ಗುರಿ		ಸಾಧನೆ	
ಆರ್ಥಿಕ (ಲಕ್ಷ ರೂ)	ಭೌತಿಕ	ಆರ್ಥಿಕ (ಲಕ್ಷ ರೂ)	ಭೌತಿಕ
7.00	140	6.99	141

ಬಿ. **ವಿಚಾರಗೋಷ್ಠಿಗಳು, ಕ್ಷೇತ್ರೋತ್ಸವ ಮತ್ತು ವಸ್ತುಪ್ರದರ್ಶನ:**

ಈ ಯೋಜನೆಯಡಿ ಮೈಸೂರು ದಸರಾ ಮಹೋತ್ಸವದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ಸ್ತಬ್ಧಚಿತ್ರ ಹಾಗೂ ಮೈಸೂರಿನಲ್ಲಿ ಕೈಗಾರಿಕಾ ವಸ್ತುಪ್ರದರ್ಶನ ಏರ್ಪಡಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ.

ಗುರಿ		ಸಾಧನೆ	
ಆರ್ಥಿಕ (ಲಕ್ಷ ರೂ)	ಭೌತಿಕ	ಆರ್ಥಿಕ (ಲಕ್ಷ ರೂ)	ಭೌತಿಕ
8.00	2	8.00	2

ಸಿ. ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ:

ಗ್ರಾಮಾಂತರ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ ಹಾಗೂ ಅತಿ ಸಣ್ಣ ಕೈಗಾರಿಕೆಗಳಿಗೆ (ತಲಾ ರೂ.5.00ಲಕ್ಷ ಯೋಜನಾ ವೆಚ್ಚ ಮೀರಿರದವರಿಗೆ) ಹಣಕಾಸು ಸಂಸ್ಥೆಗಳಿಂದ ವಿಧಿಸುವ ಬಡ್ಡಿಯ ಮೇಲೆ ಗರಿಷ್ಟ ಶೇ.5 ರಷ್ಟು ಬಡ್ಡಿ ಸಹಾಯಧನವನ್ನಾಗಿ ನೀಡಲಾಗಿದೆ. ಸದ್ರಿ ಯೋಜನೆಯಡಿ ಸಾಧಿಸಿರುವ ವಿವರ ಕೆಳಕಂಡಂತಿವೆ:–

ಗುರಿ		ಸಾಧನೆ	
ಆರ್ಥಿಕ (ಲಕ್ಷ ರೂ)	ಭೌತಿಕ	ಆರ್ಥಿಕ (ಲಕ್ಷ ರೂ)	ಭೌತಿಕ
1.00	50	1.00	83

ಡಿ. ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣ ವಿತರಣೆ:

ಗ್ರಾಮೀಣ ಪ್ರದೇಶದ ವೃತ್ತಿ ನಿರತ ಕುಶಲಕರ್ಮಿಗಳಿಗೆ ಬಡಗಿ, ಕಮ್ಮಾರಿಕೆ, ಕ್ಷೌರಿಕ, ದೋಬಿ, ಹೊಲಿಗೆ ಯಂತ್ರ, ಬ್ಯೂಟಿಪಾರ್ಲರ್ ಹಾಗೂ ಗಾರೆ ಕೆಲಸದವರಿಗೆ ಗರಿಷ್ಟ ರೂ.5,000/– ಮೌಲ್ಯದ ಉಪಕರಣಗಳನ್ನು ಉಚಿತವಾಗಿ ನೀಡುವ ಕಾರ್ಯಕ್ರಮ ಇದಾಗಿರುತ್ತದೆ. ಸದ್ರಿ ಯೋಜನೆಯಡಿ ಸಾಧಿಸಿರುವ ವಿವರ ಕೆಳಕಂಡಂತಿದೆ:–

ಗುರಿ		ಸಾಧನೆ	
ಆರ್ಥಿಕ (ಲಕ್ಷ ರೂ)	ಭೌತಿಕ	ಆರ್ಥಿಕ (ಲಕ್ಷ ರೂ)	ಭೌತಿಕ
5.00	100	4.96	100

2. ತಾಲೂಕು ಪಂಚಾಯತ್ ಕಾರ್ಯಕ್ರಮಗಳು:

ಎ. ವಿಶೇಷ ಘಟಕ ಯೋಜನೆ (ರಾಜ್ಯ):

ಪರಿಶಿಷ್ಟ ಜಾತಿಯ ಗ್ರಾಮೀಣ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ ರೂ.5,000/– ಮೌಲ್ಯದ ಹೊಲಿಗೆ ಯಂತ್ರ ಹಾಗೂ ಗಾರೆ ಕೆಲಸದ ಸುಧಾರಿತ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗಿದೆ. ವಿವರ ಕೆಳಕಂಡಂತಿದೆ:–

ಗುರಿ		ಸಾಧನೆ	
ಆರ್ಥಿಕ (ಲಕ್ಷ ರೂ)	ಭೌತಿಕ	ಆರ್ಥಿಕ (ಲಕ್ಷ ರೂ)	ಭೌತಿಕ
1.80	36	1.80	36

ಬಿ. <u>ಗಿರಿಜನ ಉಪಯೋಜನೆ (ರಾಜ್ಯ):</u>

ಪರಿಶಿಷ್ಟ ಪಂಗಡದ ಗ್ರಾಮೀಣ ಪ್ರದೇಶದ ವೃತ್ತಿನಿರತ ಕುಶಲಕರ್ಮಿಗಳಿಗೆ ರೂ.5,000/–ಮೌಲ್ಯದ ಹೊಲಿಗೆ ಯಂತ್ರ ಹಾಗೂ ಗಾರೆ ಕೆಲಸದ ಸುಧಾರಿತ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗಿದೆ. ವಿವರ ಕೆಳಕಂಡಂತಿದೆ:–

ಗುರಿ		ಸಾಧನೆ	
ಆರ್ಥಿಕ (ಲಕ್ಷ ರೂ)	ಭೌತಿಕ	ಆರ್ಥಿಕ (ಲಕ್ಷ ರೂ)	ಭೌತಿಕ
4.00	80	3.98	80

ರೇಷ್ಮೆ ಇಲಾಖೆ ಉಡುಪಿ

ಉಡುಪಿ ಜಿಲ್ಲೆಯ 1997ರ ಆಗಸ್ಟ್ 24ರಿಂದ ಆಸ್ತಿತ್ವಕ್ಕೆ ಬಂದಿದ್ದು, ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳನ್ನು ಒಳಗೊಂಡಿದೆ. ಉಡುಪಿ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರೇಷ್ಮೆ ಇಲಾಖೆ ಜಿಲ್ಲಾ ಆಡಳಿತ ಸಂಕೀರ್ಣ ಕಟ್ಟಡದ 'ಬಿ' ಬ್ಲಾಕ್ 1ನೇ ಮಹಡಿ ರಜತಾದ್ರಿ ಮಣಿಪಾಲದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು **ಸಹಾಯಕ** ನಿರ್ದೇಶಕರು ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ತಾಲೂಕು ಮಟ್ಟದಲ್ಲಿ ಒಬ್ಬ ಸಹಾಯಕ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಅನುಬಂಧ –1

ಜಿಲ್ಲಾ ಮಟ್ಟ

ಕ್ರ.ಸಂ	ಇಲಾಖೆಯ ಹೆಸರು	ಅಧಿಕಾರಿ ಹೆಸರು
1	ರೇಷ್ಮೆ ಸಹಾಯಕನಿರ್ದೇಶಕರು ಜಿಲ್ಲಾ ಪಂಚಾಯತ್ ಉಡುಪಿ	ಶ್ರೀ ಕೆ.ಪದ್ಮನಾಭ ಭಟ್ (ಪ್ರಭಾರ)

ಅನುಬಂಧ –11

ತಾಲೂಕು ಮಟ್ಟ

ಕ್ರ.ಸಂ	ಇಲಾಖೆಯ ಹೆಸರು	ಅಧಿಕಾರಿ ಹೆಸರು
1	ರೇಷ್ಮೆ ಸಹಾಯಕ ನಿರ್ದೇಶಕರು ಕಾರ್ಕಳ	ಶ್ರೀ ಕೆ.ಪದ್ಮನಾಭ ಭಟ್
2	ತಾಂತ್ರಿಕ ಸೇವಾ ಕೇಂದ್ರ ಕುಂದಾಪುರ	ಹುದ್ದೆ ಖಾಲಿ
3	ರೇಷ್ಮೆ ವಿಸ್ತರಣಾ ಕೇಂದ್ರ ಉಡುಪಿ	ಹುದ್ದೆ ಖಾಲಿ

ಮಂಜೂರಾದ ಹುದ್ದೆಗಳು: ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ ಉಡುಪಿ ವ್ಯಾಪ್ತಿಯ ವಿವರ

ಕ್ರ.ಸಂ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಇರುವ ಹುದ್ದೆ
1	16	5	11

ಕ್ರ.ಸಂ	ಕಾರ್ಯಕ್ರಮಗಳು	ವಂಟನೆ	ಬಿಡುಗಡೆ	ಸಾಧನೆ	ಶೇಕಡಾ
1	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	1.50	1.50	1.50	100%
2	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು	3.00	2.99	2.99	100%
3	ಗಿರಿಜನ ಉಪಯೋಜನೆ(ರಾಜ್ಯ)	0.70	0.70	0.70	100%
	ಒಟ್ಟು	5.20	5.19	5.19	100%
	1. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು: ರೇಷ್ಮೆ ಬೆಳೆಗಾರರಿಗೆ ಸಹಾಯ:-ಲೆಕ್ಕಶೀರ್ಷಿಕೆ: 2851-00-104-0-30 ಹಿಪ್ಪುನೇರಳೆ ನಾಟಿ ಮಾಡುವ/ ತೋಟ ವಿಸ್ತರಿಸುವ/ಹೆಚ್ಚಿನ ಇಳುವರಿ ನೀಡುವ ಹೊಸ ತಳಿ ತೋಟ ನಿರ್ವಹಣೆ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ ಒದಗಿಸುವುದು.1ಎಕ್ರೆ ಹಿಪ್ಪುನೇರಳೆ ನಾಟಿಗೆ ರೂ: 14000/ ಘಟಕ ದರ ನಿಗದಿಪಡಿಸಿದ್ದು ಇದರಲ್ಲಿ ಶೇ ರೂ: 10500/ ನೀಡಲಾಗುವುದು. ಒಬ್ಬ ಫಲಾನುಭವಿಗೆ ಗರಿಷ್ಠ 2ಹೆಕ್ಟೇರ್ ವರೆಗೆ ಸಹಾಯಧನ ಪಡೆಯಲು	1.50	1.50	1.50	100%

	ಅವಕಾಶವಿರುತ್ತದೆ. ರೇಷ್ಮೆ ಹುಳು ಸಾಕಾಣಿಕೆಗೆ ಬೇಕಾದ ಸೋಂಕು ನಿವಾರಕಗಳನ್ನು ರೈತರಿಗೆ ಉಚಿತವಾಗಿ ನೀಡಲು ಬಳಸಲಾಗಿದೆ. ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಸುವ ವಸ್ತುಪ್ರದರ್ಶನ ಹಾಗೂ ಕಾರ್ಯಾಗಾರದಲ್ಲಿ ಪ್ರಚಾರ ಕೈಪಿಡಿಗಳನ್ನು ನೀಡಲಾಗಿದೆ.				
	2) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು: ಲೆಕ್ಕಶೀರ್ಷಿಕೆ : 2851-104-0-61 ಉತ್ಪಾದನೆ/ಉತ್ಪಾದಕತೆ ಆಧಾರಿತ ಪ್ರೋತ್ಸಾಹಧನ 100-ಧನ ಸಹಾಯ/ಪರಿಹಾರ ಕಾರ್ಕಳ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗಾರರು ಬೆಳೆದ ಗೂಡು ಖರೀದಿ. ವಿದ್ಯುತ್, ರೀಲಿಂಗ್, ಕೂಲಿ,ಇಂದನ ವೆಚ್ಚ ನಿರ್ವಹಣೆಗೆ ಅನುದಾನ ಬಳಸಲಾಯಿತು	3.00	2.99	2.99	100%
	3)ಗಿರಿಜನ ಉಪಯೋಜನೆ(ರಾಜ್ಯ) ಲೆಕ್ಕಶೀರ್ಷಿಕೆ: 2225–00–102–0–70 ರೇಷ್ಮೆ ಹುಳು ಸಾಕುವ ಮನೆ ಮತ್ತು ನೀರಾವರಿ ಪಂಪುಸೆಟ್ ಗೆ ಬ್ಯಾಂಕನ ಮೂಲಕ ಸಾಲಕ್ಕೆ ಶೇ60ರ ಸಹಾಯಧನ ನೀಡಲು ಅನುದಾನ ಬಳಸಲಾಯಿತು.	0.70	0.70	0.70	100%
		3.70	3.69	3.69	100%

1) 2017–18ನೇ ಸಾಲಿನಲ್ಲಿ ರೇಷ್ಮೆ ಉಪನಿರ್ದೇಶಕರ ಹುದ್ದೆಯು ರದ್ದಾಗಿದ್ದು ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯಾಗಿದ್ದು ಈ ಕಚೇರಿಯಲ್ಲಿ 6ಹುದ್ದೆಗಳು ಮಂಜೂರಾಗಿದ್ದು 6ಹುದ್ದೆಗಳು ಖಾಲಿಯಾಗಿರುತ್ತದೆ.

ಮಂಜೂರಾದ ಹುದ್ದೆ.....6

ಭರ್ತಿಯಾದ ಹುದ್ದೆ.....ಇಲ್ಲ

ಖಾಲಿಯಾದ ಹುದ್ದೆ.....6

ಕೈಮಗ್ಗ ಮತ್ತು ಜವಳಿ ಇಲಾಖೆ

1. **ಜಿಲ್ಲಾ ವಲಯ ಯೋಜನೆ**

1) ಕೈಮಗ್ಗ ಉದ್ದಿಮೆಗಳಿಗೆ ಸಹಾಯ

ಈ ಯೋಜನೆಯ ಲೆಕ್ಕ ಶೀರ್ಷಿಕೆ : 2851-00-107-0-31 ಅಡಿಯಲ್ಲಿ ಒಟ್ಟು ರೂ. 2.00 ಲಕ್ಷಗಳ ಅನುದಾನ ಹಂಚಿಕೆಯಾಗಿತ್ತು. ಇದರಲ್ಲಿ ರೂ.2.00 ಲಕ್ಷಗಳು ಜಿಲ್ಲಾ ಪಂಚಾಯತ್ ನಿಂದ ಬಿಡುಗಡೆಯಾಗಿರುತ್ತದೆ. ಈ ಹಣವನ್ನು ಜಿಲ್ಲೆಯಲ್ಲಿರುವ 3 ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಿಗೆ ದುಡಿಮೆ ಬಂಡವಾಳ ಮತ್ತು ಮಗ್ಗದ ಸಲಕರಣೆಗಳನ್ನು ಖರೀದಿಸಿ ನೇಕಾರರ ಸದಸ್ಯರಿಗೆ ವಿತರಿಸಲು ಹಾಗು ಸಂಘಕ್ಕೆ ಮೂಲಭೂತ ಸೌಲಭ್ಯಕ್ಕಾಗಿ ಮಂಜೂರಾತಿ ನೀಡಲಾಗಿದೆ.

ರೂ. ಲಕ್ಷಗಳಲ್ಲಿ

ಕ್ರ.ಸಂ	ಸಂಘದ ಹೆಸರು	ಕೈಮಗ್ಗ ಆಧುನೀಕರಣ	ರೂ. ಲಕ್ಷಗಳಲ್ಲಿ
1	ಉಡುಪಿ ಪ್ರಾಥಮಿಕ ನೇಕಾರರ ಸಹಾಕಾರ ಸಂಘ ನಿ.,ಉಡುಪಿ	0.40	0.40
2	ಶಿವಳ್ಳಿ ಪ್ರಾಥಮಿಕ ನೇಕಾರರ ಸಹಾಕಾರ ಸಂಘ ನಿ. ಆದಿಉಡುಪಿ	0.20	0.40
3	ಬ್ರಹ್ಮಾವರ ಪ್ರಾಥಮಿಕ ನೇಕಾರರ ಸಹಾಕಾರ ಸಂಘ ನಿ. ಬ್ರಹ್ಮಾವರ	0.20	0.40
	ಒಟ್ಟು	0.80	1.20

2. ರಾಜ್ಯ ವಲಯದ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಕೆಳಗೆ ನಮೂದಿಸಿರುವ ಯೋಜನೆ ಗಳನ್ನು ಪ್ರಾಥಮಿಕ ನೇಕಾರರ ಸೇವಾ ಸಹಾಕಾರ ಸಂಘಗಳ ಮೂಲಕ ಅನುಷ್ಠಾನಗೊಳಿಸಲಾಗಿದೆ.

1) ರಾಜ್ಯ ಸರಕಾರದ ಶೇ.20ರ ರಿಯಾಯಿತಿ ಯೋಜನೆ ಅಡಿ ನೇಕಾರರ ಸಹಕಾರ ಸಂಘಗಳು ಬಟ್ಟೆಗಳನ್ನು ಮಾರಾಟ ಮಾಡಿ ಗ್ರಾಹಕರಿಗೆ ನೀಡಿದ ರಿಯಾಯಿತಿ ಮೊತ್ತ ರೂ.655857/- ಗಳನ್ನು ಜಿಲ್ಲೆಯಲ್ಲಿರುವ 4 ನೇಕಾರರ ಸಹಾಕರ ಸಂಘಗಳಿಗೆ ಮಂಜೂರು ಮಾಡಿ ಬಿಡುಗಡೆ ಮಾಡುವಂತೆ ಕೋರಿ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ ಒಟ್ಟು ರೂ.655857/- ಗಳಿಗೆ ಮಂಜೂರಾತಿ ಪಡೆದು 4 ಪ್ರಾಥಮಿಕ ನೇಕಾರರ ಸೇವಾ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ.

2) ನೂತನ ಜವಳಿ ನೀತಿ ಯೋಜನೆಯಡಿ 50 ಜನರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಗಾಗಿ ರೂ.4.75 ಲಕ್ಷಗಳು ಮಂಜೂರಾಗಿರುತ್ತದೆ. ಮತ್ತು ಅದರಲ್ಲಿ 50 ಜನರಿಗೆ ತರಬೇತಿ ನೀಡಿ ರೂ.4.75 ಲಕ್ಷಗಳು ಖರ್ಚಾಗಿರುತ್ತದೆ.

ಸಹಕಾರ ಇಲಾಖೆ

2017–18 ನೇ ಸಾಲಿನ ವಾರ್ಷಿಕ ಸಾಧನೆ

ಜಿಲ್ಲಾ ಪಂಚಾಯತ್ ಯೋಜನೆ :–

ವಿವಿಧ ಸಹಕಾರ ಸಂಘಗಳಿಗೆ ಸಹಾಯ/ಎನ್‌ಸಿಡಿಸಿ ಯೋಜನೆ :– 2425–00–101–0–28 :–

ಸಹಕಾರ ಸಂಘಗಳು ಉಪನಿಯಮಗಳಲ್ಲಿನ ಉದ್ದೇಶಗಳಿಗೆ ಅನುಗುಣವಾಗಿ ಕೈಗೊಳ್ಳುವ ಕಾರ್ಯಕ್ರಮಗಳಿಗೆ ಪೂರಕವಾದಂತಹ ಆಸ್ತಿ ನಿರ್ಮಾಣಕ್ಕಾಗಿ ಸಹಾಯಧನ ಮಂಜೂರಾತಿ ಇದರಿಂದ ಸಂಘದ ಕಾರ್ಯಕ್ರಮಗಳು ಅಭಿವೃದ್ಧಿ ಹೊಂದಿ ಸ್ವಸಾಮರ್ಥ್ಯ ಹೆಚ್ಚಿಸಿಕೊಂಡು ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡಲು ಈ ಯೋಜನೆಯಡಿಯಲ್ಲಿ 2017–18ನೇ ಸಾಲಿಗೆ ಭೌತಿಕ 06 ಸಹಕಾರ ಸಂಘಗಳಿಗೆ (ತಲಾ 0.25 ಲಕ್ಷ) ರೂ 1.50 ಲಕ್ಷ ಮಂಜೂರಾಗಿರುತ್ತದೆ.

ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು – 2425–00–101–0–30 :– ಸಹಾಯಧನ

ಈ ಯೋಜನೆಯಲ್ಲಿ ಹಾಲು ಉತ್ಪಾದಕರ ಕಾರ್ಯದಲ್ಲಿ ತೊಡಗಿರುವ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಕ್ಕಾಗಿ ಸದರಿ ಕೆಲಸಗಳು ತನ್ನ ದಿನನಿತ್ಯದ ಕಾರ್ಯನಿರ್ವಹಣೆಗಾಗಿ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಲು ಸಹಾಯಧನ ರೂಪದಲ್ಲಿ 5 ಸಹಕಾರ ಸಂಘಗಳಿಗೆ (ತಲಾ ರೂ.0.50ಲಕ್ಷ) ರೂ.2.50 ಲಕ್ಷ ಆರ್ಥಿಕ ನೆರವು ಮಂಜೂರು ಮಾಡಲಾಗಿರುತ್ತದೆ.

2017–18ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆಯ ವಿವರ

ಇಲಾಖೆ:– ಸಹಕಾರ (ರೂ. ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆ:ಲೆಕ್ಕಶೀರ್ಷಿಕೆ	ಫಲಾನುಭವಿ ಸಹಕಾರ ಸಂಘಗಳ ಹೆಸರು	ಯೋಜನಾ ವೆಚ್ಚ		ಷರಾ
			ಭೌತಿಕ	ಆರ್ಥಿಕ	
2	ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯ 2425–00–101–0–30	**ಸಹಕಾರ ಸಂಘಗಳು:–** 1. ಹಟ್ಟಿಯಂಗಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ(ನಿ)ಹಟ್ಟಿಯಂಗಡಿ, ಕುಂದಾಪುರತಾಲೂಕು	01	0.50	

	D-2	2. ಹಾಯ್ಕಾಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ(ನಿ)ಹಾಯ್ಕಾಡಿ, ಕುಂದಾಪುರತಾಲೂಕು	01	0.50	
		3. ಪಡುಮುಂಡು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ(ನಿ)ಪಡುಮುಂಡು, ಉಡುಪಿ ತಾಲೂಕು	01	0.50	
		4. ಕಾರ್ತಟ್ಟು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ(ನಿ)ಕಾರ್ತಟ್ಟು, ಉಡುಪಿ ತಾಲೂಕು	01	0.50	
		5. ಬೋಳ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ(ನಿ)ಬೋಳ, ಕಾರ್ಕಳ ತಾಲೂಕು	01	0.50	
			01	0.50	
			05	2.50	
3	ವಿವಿಧ ಸಹಕಾರ ಸಂಘಗಳಿಗೆ ಸಹಾಯ/ಎನ್ ಸಿಡಿಸಿ ಯೋಜನೆ 2425–00–101–0–28 D-12	**<u>ಸಹಕಾರ ಸಂಘಗಳು:–</u>**			
		1. ಕಿರಿಮಂಜೇಶ್ವರ ಮೀನುಗಾರರ ಸಹಕಾರ ಸಂಘ(ನಿ)ಕೊಡೇರಿ, ಕುಂದಾಪುರತಾಲೂಕು	01	0.25	–
		2. ಟೆಂಪೋ, ಟ್ಯಾಕ್ಸಿ, ರಿಕ್ಷಾ ಮಾಲಕರ ಮತ್ತು ಚಾಲಕರ ವಿವಿದೋದ್ದೇಶ ಸಹಕಾರ ಸಂಘ ನಿ., ಬೈಂದೂರು , ಕುಂದಾಪುರ ತಾಲೂಕು	01	0.25	–
		3. ನಾವುಂದ ಮೂರ್ತೆದಾರರ ಸೇವಾ ಸಹಕಾರ ಸಂಘ(ನಿ)ನಾವುಂದ, ಕುಂದಾಪುರತಾಲೂಕು	01	0.25	–
		4. ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ(ನಿ)ಕೋಟೆ, ಕಟಪಾಡಿ, ಉಡುಪಿ ತಾಲೂಕು	01	0.25	–
		5. ಶ್ರೀ ಮಲ್ಲಿಕಾರ್ಜುನ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ(ನಿ)ಶಿರೂರು ಮೂರುಕೈ, ಉಡುಪಿ ತಾಲೂಕು	01	0.25	
		6. ಕಾರ್ಕಳ ತಾಲೂಕುಗ್ರಾಹಕರ ವಿವಿಧೋದ್ದೇಶ ಸಹಕಾರ ಸಂಘ(ನಿ)ಕಾರ್ಕಳ	01	0.25	–
			06	1.50	
					–
		ಒಟ್ಟು	11	4.00	–

ನಮೂನೆ–1

ಸದಸ್ಯರು

ಉಡುಪಿ ಜಿಲ್ಲಾ ಪಂಚಾಯತ್

ವರ್ಷ	ಜನಸಂಖ್ಯೆ 2011 ರ ಜನಗಣತಿ ಯಂತೆ	ಕ್ಷೇತ್ರಗಳ ಸಂಖ್ಯೆ	ಮಂಜೂರಾದ ಮೀಸಲು ಕ್ಷೇತ್ರಗಳ ಸಂಖ್ಯೆ		ಮೀಸಲಾತಿ ಇಲ್ಲದ್ದು	ಒಟ್ಟು	ವರ್ಷ	31 ನೇ ಮಾರ್ಚ್ 2018 ರಲ್ಲಿ ಸದಸ್ಯರ ಸಂಖ್ಯೆ			ಒಟ್ಟು	ಜಿಲ್ಲಾ ಪಂಚಾಯತಿಗೆ ಮಕಾನಿಅ ಇದ್ದಾರೆಯೇ
			ಪ.ಜಾತಿ/ ಪ.ಪಂಗಡ	ಮಹಿಳೆಯರು				ಪ.ಜಾತಿ/ ಪ.ಪಂ.	ಮಹಿಳೆಯರು	ಇತರರು		
2017–18	1177361	26	3	13	10	26	2016–17	3	13	13	26	ಹೌದು

ನಮೂನೆ –2

ಚುನಾವಣೆಗಳು

	ಒಟ್ಟು ಚುನಾವಣೆಗಳ ಸಂಖ್ಯೆ		ಸ್ಪರ್ಧೆ ಇರದ ಚುನಾವಣೆಗಳ ಸಂಖ್ಯೆ		ಹುದ್ದೆಗಳ ಸಂಖ್ಯೆ		ಅಭ್ಯರ್ಥಿಗಳ ಸಂಖ್ಯೆ	ಒಟ್ಟು ಮತಗಳ ಸಂಖ್ಯೆ	ಚಲಾವಣೆಯಾದ ಸಂಖ್ಯೆ	ಶೇಕಡಾವಾರು (9–10) ನೇ ಅಂಕಣದ ಮೇಲೆ	ಷರಾ
	ಮೀಸಲಿರಿಸಿದ್ದು	ಮೀಸಲಿರಿಸದಿದ್ದದ್ದು	ಮೀಸಲಿರಿಸಿದ್ದು	ಮೀಸಲಿರಿಸದಿದ್ದದ್ದು	ಮೀಸಲಿರಿಸಿದ್ದು	ಮೀಸಲಿರಿಸದಿದ್ದದ್ದು					
1	2	3	4	5	6	7	8	9	10	11	12
2017–18	–	–	–	–	–	–	–	–	–	–	–
2016–17	–	–	–	–	–	–	–	–	–	–	–

ನಮೂನೆ –3

ಸಭೆಗಳು

ಉಡುಪಿ ಜಿಲ್ಲಾ ಪಂಚಾಯತಿ

ಸಭೆಗಳ ಸಂಖ್ಯೆಗಳು					ಮಂಜೂರಾದ ಸಂಖ್ಯೆಗೆ ಪ್ರತಿಯಾಗಿ ಪ್ರತಿ ಸಭೆಯಲ್ಲಿ ಸದಸ್ಯರ ಸರಾಸರಿ ಶೇಕಡಾವಾರು		ಷರಾ	
ವರ್ಷ	ಕರೆದದ್ದು		ಕೋರಂ ಕೊರತೆಯಿಂದ ಮುಂದೂಡಲ್ಪಟ್ಟದ್ದು	ಕಾಲಾವಕಾಶ ಅಥವಾ ಇತರೆ ಕಾರಣಗಳಿಗಾಗಿ ಮುಂದೂಡಲ್ಪಟ್ಟದ್ದು				
	ಸಾಮಾನ್ಯ	ವಿಶೇಷ			ಅಧಿಕಾರಿಗಳು	ಅಧಿಕಾರೇತರರು		
2017–18	6	2	–	–	86	69	–	–
2016–17	5	1	–	–	93	92	–	–

ನಮೂನೆ–4
ಸಮಿತಿಗಳು
ಉಡುಪಿ ಜಿಲ್ಲಾ ಪಂಚಾಯತಿ 2017–18

ಕ್ರ.ಸಂ.	ಸಮಿತಿಯ ಹೆಸರು	ಸಮಿತಿ ಸ್ಥಾಪನೆಯಾದ ಉದ್ದೇಶ	ಸದಸ್ಯರ ಸಂಖ್ಯೆ		ಹಾಜರಾತಿಯ ಸರಾಸರಿ		ಷರಾ
			ಅಧಿಕಾರೇತರರರು	ನಡೆದ ಸಭೆಗಳ ಸಂಖ್ಯೆ	ಅಧಿಕಾರಿಗಳು	ಅಧಿಕಾರೇತರರು	
1	2	3	4	5	6	7	8
1	ಸಾಮಾನ್ಯ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	72	77	
2	ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	84	86	
3	ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	88	69	
4	ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	6	98	81	
5	ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	86	74	

ನಮೂನೆ–4

ಸಮಿತಿಗಳು

ಉಡುಪಿ ಜಿಲ್ಲಾ ಪಂಚಾಯತಿ 2016–17

ಕ್ರ.ಸಂ.	ಸಮಿತಿಯ ಹೆಸರು	ಸಮಿತಿ ಸ್ಥಾಪನೆಯಾದ ಉದ್ದೇಶ	ಸದಸ್ಯರ ಸಂಖ್ಯೆ		ಹಾಜರಾತಿಯ ಸರಾಸರಿ		ಷರಾ
			ಅಧಿಕಾರೇತರರು	ನಡೆದ ಸಭೆಗಳ ಸಂಖ್ಯೆ	ಅಧಿಕಾರಿಗಳು	ಅಧಿಕಾರೇತರರು	
1	2	3	4	5	6	7	8
1	ಸಾಮಾನ್ಯ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	98	94	
2	ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	96	89	
3	ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	87	86	
4	ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	97	94	
5	ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 187ರಲ್ಲಿ ತಿಳಿಸಿದಂತೆ	7	5	98	88	

ನಮೂನೆ–5
ರಸ್ತೆಗಳು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ವರ್ಷದ ಅ0ತ್ಯದಲ್ಲಿದ್ದ ಉದ್ದ							ವರ್ಷದಲ್ಲಿ ಆಗಿರುವ ವೆಚ್ಚಗಳು									
							ನಿರ್ವಹಣೆ ಕಾಮಗಾರಿ ಉದ್ದ				ನಿರ್ವಹಣೆ ಕಾಮಗಾರಿ ವೆಚ್ಚ					
1	2	3	4	5	6	7	8	9	10	11	12	13	14	15	16	17
ವರ್ಷ	ಹೊಸದಾಗಿ ಪ್ರಾರಂಭ ಗೊಂಡ ರಸ್ತೆ (ಕಿ.ಮೀ)	ಜಿಲ್ಲಾ ಕೆಲ್ಲನ ಸಿಮೆಂಟ್ ಮಿಶ್ರಣ ರಸ್ತೆ (ಕಿ.ಮೀ)	ಡಾಂಬರೀಕರಣ(ಕಿ.ಮೀ)	ಜಿಲ್ಲಾ ಕೆಲ್ಲನ ಜಲಬದ್ಧ ಮತ್ತು ಕಲ್ಲು ಮತ್ತು ಇಟ್ಟಿಗೆಗಳಿಂದ ಕಲ್ಲು ಹಾಸಿನ ದಾರಿ(ಕಿ.ಮೀ)	ಮತ್ತಿತರ ವಿಧಾನದಿಂದ (ಕಿ.ಮೀ)	ಒಟ್ಟು ಕಾಲಂ (3) ರಿಂದ (6)	ಜಿಲ್ಲಾ ಕೆಲ್ಲನ ಸಿಮೆಂಟ್ ಮಿಶ್ರಣ ರಸ್ತೆ (ಕಿ.ಮೀ)	ಡಾಂಬರೀಕರಣ (ಕಿ.ಮೀ)	ಜಿಲ್ಲಾ ಕೆಲ್ಲನ ಜಲಬದ್ಧ ಮತ್ತು ಕಲ್ಲು ಮತ್ತು ಇಟ್ಟಿಗೆಗಳಿಂದ ಕಲ್ಲು ಹಾಸಿನ ದಾರಿ(ಕಿ.ಮೀ)	ಮತ್ತಿತರ ವಿಧಾನ ದಿಂದ (ಕಿ.ಮೀ)	ಸಿಮೆಂಟೀಕರಣ (ಜಿಲ್ಲಾ ಕೆಲ್ಲನ ಸಿಮೆಂಟ್ ಮಿಶ್ರಣ)	ಡಾಂಬರೀಕರಣ	ಜಿಲ್ಲಾ ಕೆಲ್ಲನ ಜಲಬದ್ಧ ಮತ್ತು ಕಲ್ಲು ಮತ್ತು ಇಟ್ಟಿಗೆಗಳಿಂದ ಕಲ್ಲು ಹಾಸಿನ ದಾರಿ	ಮತ್ತಿತರ ವಿಧಾನ ದಿಂದ	ಒಟ್ಟೂ ನಿರ್ವಹಣಾ ವೆಚ್ಚ ಕಾಲಂ	ಒಂದು ಕಿ.ಮೀ ರಗಳ ನಿರ್ವಹಣಾ ವೆಚ್ಚ
1	2	3	4	5	6	7	8	9	10	11	12	13	14	15	16	17
ಉಡುಪಿ																
2017-18	21		1223	72.23	1431.1	2726.77	0	52.41	0	0	0	401.41	0	0	401.41	7.66
2016-17	0.95	3.91	1037	68.42	990.83	2099.67	5.158	15.1	1.1	1.18	51.39	130.5	9.9	4.4	196.19	8.7
ಕುಂದಾಪುರ																
2017-18	0	0	861	90.79	1973	2924.81	0	52.49	3.275	42.39	0	264.14	25.57	179.3	468.98	4.78
2016-17		14.76	785.3	113.81	1743	2656.86	0	34.00	0.77	27.27	0	70.32	4.4	60.35	135.07	2.18
ಕಾರ್ಕಳ																
2017-18	0	0	659.5	2624	1012.6	1698.37	0	55.48	0	5.17	0	215.04	0	8316	298.2	5.37
2016-17	38.39	13.69	652.9	20.06	1010.6	1697.28	0	53.20	0	13.86	0	214.9	0	67.25	282.18	4.21

ನಮೂನೆ–6

ಸೇತುವೆಗಳು, ಕಾಲುದಾರಿ ಮತ್ತು ಅಡಿಗಾಲುವೆಗಳು

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ.

ವರ್ಷ	ನಿರ್ಮಾಣ ಮತ್ತು ಸುಧಾರಣೆಗಾಗಿ ಆದ ವೆಚ್ಚ			ಯಾವ ಮೂಲದಿಂದ ವೆಚ್ಚ ಮಾಡಲಾಗಿದೆ		
	ಸೇತುವೆಗಳು ಮತ್ತು ಕಾಲುದಾರಿ	ಅಡಿಗಾಲುವೆಗಳು	ಒಟ್ಟು	ಕೊಡುಗೆ ಮತ್ತು ದಾನಗಳಿಂದ	ಸರ್ಕಾರದ ಅನುದಾನ	ಸಾಲ
1	2	3	4	5	6	7
ಉಡುಪಿ ತಾಲೂಕು:–						
2017	1	3	4	–	20.00 ಲಕ್ಷ	–
2016	———————— ನದಾರದು ————————					
ಕುಂದಾಪುರ ತಾಲೂಕು:–						
2017	———————— ನದಾರದು ————————					
2016	———————— ನದಾರದು ————————					
ಕಾರ್ಕಳ ತಾಲೂಕು:–						
2017	———————— ನದಾರದು ————————					
2016	———————— ನದಾರದು ————————					

ನಮೂನೆ–7
ಮನೆಗಳು ಹಾಗೂ ಛತ್ರಗಳು
ಉಡುಪಿ ಜಿಲ್ಲಾ ಪಂಚಾಯತ್

ವಿಶ್ರಾಂತಿ ಧಾಮಗಳು				ಛತ್ರಗಳು
		ವಸೂಲಾತಿಯಾದ ಶುಲ್ಕಗಳು		
		ಮೊತ್ತ (ರೂ.ಗಳಲ್ಲಿ)	ಸಂಖ್ಯೆ	ವಸೂಲಾತಿಯಾದ ಶುಲ್ಕಗಳು (ರೂ.ಗಳಲ್ಲಿ)
1	2	3	4	5
2017–18	–	–	–	–
2016–17	–	–	–	–

ನಮೂನೆ–8

ಪ್ರಾಥಮಿಕ/ಪ್ರೌಢಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ: 2017–18

ವರ್ಷ	ಶಾಲೆಗಳು	ಶಾಲೆಗಳ ಸಂಖ್ಯೆ		ಜಿಲ್ಲಾ ಪಂಚಾಯತ್ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ		ಇತರೆ ಶಾಲೆಗಳಲ್ಲಿನ ಮಕ್ಕಳ ಶಾಲೆಗಳ ಸಂಖ್ಯೆ		ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ	
		ಸರ್ಕಾರಿ	ಇತರೆ	ಹುಡುಗರು	ಹುಡುಗಿಯರು	ಹುಡುಗರು	ಹುಡುಗಿಯರು	ಹುಡುಗರು	ಹುಡುಗಿಯರು
1	2	3	4	5	6	7	8	9	10
2017–18	ಪ್ರಾ. ಶಾಲೆಗಳು	803	164	29920	29039	29222	25603	59142	54642
	ಪ್ರೌ. ಶಾಲೆಗಳು	188	110	10197	9663	6362	5679	16559	15342
	ಒಟ್ಟು	991	274	40117	38702	35584	31282	75701	69984
2016–17	ಪ್ರಾ. ಶಾಲೆಗಳು	817	151	29742	29046	26571	23264	56313	52310
	ಪ್ರೌ. ಶಾಲೆಗಳು	186	106	16060	15180	9448	8412	25508	23592
	ಒಟ್ಟು	1003	257	45802	44226	36019	31676	81821	75902

ನಮೂನೆ–9 (2017–18)

ಜಿಲ್ಲಾ ಪಂಚಾಯತ್ ವೈದ್ಯಕೀಯ ಸಂಸ್ಥೆಗಳಲ್ಲಿ ಶುಶ್ರೂಷೆ ನೀಡಲಾದ ರೋಗಿಗಳ ಸಂಖ್ಯೆ, ವೆಚ್ಚ ಹಾಗೂ ವಿವರಗಳು

ಜಿಲ್ಲಾ ಪಂಚಾಯತ್

ಕ್ರಮ ಸಂಖ್ಯೆ	ವೈದ್ಯಕೀಯ ಸಂಸ್ಥೆಯ ಹೆಸರು	ಅನುದಾನದ ವೆಚ್ಚ ಮಾಡಲಾದ ಅಥವಾ							ಶುಶ್ರೂಷೆ ನೀಡಲಾದ ರೋಗಿಗಳ ಸಂಖ್ಯೆ									ಸ್ಥಳೀಯ ಸಂಸ್ಥೆಗಳ ಖಾತೆಯಲ್ಲಿ ವೆಚ್ಚ		ಪ್ರತಿ ರೋಗಿಗೆ ತಗಲುವ ವೆಚ್ಚ		ಷರಾ
									ದೇಶೀಯ ಔಷಧ		ಒಳರೋಗಿಗಳು		ಹೊಪರೋಗಿ ಗಳು		ಒಟ್ಟು							
		ಸಿಬ್ಬಂದಿ ವೆಚ್ಚ	ಬಾಡಿಗೆ	ಪೀಠೋಪಕರಣ	ರೋಗಿಗಳ ಆಹಾರ	ಹಾಸಿಗೆ ಮತ್ತು ಹೊದಿಕೆ	ಸಾದಿಲ್ವಾರು	ಕಟ್ಟಡ ಔಷಧಾಲಯಗಳ ನಿರ್ಮಾಣ ಮತ್ತು ದುರಸ್ತಿ ಇತ್ಯಾದಿ	ಒಳರೋಗಿ	ಒಟ್ಟು	ಹಿಂದಿನ ವರ್ಷ	ಪರದಿ ಮಾಡಲಾದ ವರ್ಷ	ಹಿಂದಿನ ವರ್ಷ	ಪರದಿ ಮಾಡಲಾದ ವರ್ಷ	ಹಿಂದಿನ ವರ್ಷ	ಪರದಿ ಮಾಡಲಾದ ವರ್ಷ	ಸರಾಸರಿ ದಿನಂಪ್ರತಿ ಶುಶ್ರೂಷೆ	ಪರದಿ ಮಾಡಲಾದ ವರ್ಷ	ಹಿಂದನ ವರ್ಷ	ಪರದಿ ಮಾಡಲಾದ ವರ್ಷ	ಹಿಂದನ ವರ್ಷ	
1	2	3	4	5	6	7	8	9	10	11	12	13	14	15	16	17	18	19	20	21	22	23
1	ಉಡುಪಿ ತಾಲೂಕು	128111874	468778	243900	0	4000	47625268	5838864	32	26944	18227	19656	469351	518580	538268	565180	1548	581350	30000	322.54	175.00	
2	ಕುಂದಾಪುರ ತಾಲೂಕು	104047729	0	868355	1470187	98000	14395288	516712	0	64271	13176	21044	429218	528229	549273	613544	1681	298590	0	197.86	160.00	
3	ಕಾರ್ಕಳ ತಾಲೂಕು	57297866	0	0	0	0	8674084	656000	0	17633	8399	7199	316089	314404	321603	339236	929	7482770	0	196.41	135.00	
	ಒಟ್ಟು	**289457469**	**468778**	**1112255**	**1470187**	**102000**	**70694640**	**7011576**	**32**	**108848**	**39802**	**47899**	**1214658**	**1361213**	**1409144**	**1517960**	**4159**	**8362710**	**30000**	**243.96**	**470.00**	**0**

ನಮೂನೆ – 10
ಮೊಕದ್ದಮೆಗಳು
ಜಿಲ್ಲಾ ಪಂಚಾಯತ್ ಉಡುಪಿ 2017–18

ಕ್ರ. ಸಂ.	ಆರಂಭದ ಶಿಲ್ಕು	ಸ್ವೀಕೃತಿಗಳು	ಒಟ್ಟು	ರಾಜಿ ಮಾಡಿಕೊಂಡ ಪ್ರಕರಣಗಳು	ಮೊತ್ತ	ಶಿಕ್ಷೆಯಾದ ಪ್ರಕರಣಗಳು	ಮೊತ್ತ	ಸಕಾಲದಲ್ಲಿ ವಿಲೇಯಾದ ಪ್ರಕರಣಗಳು	ಬಾಕಿ ಇರುವ ಪ್ರಕರಣಗಳು	ದೋಷ ಮುಕ್ತವಾದ ಪ್ರಕರಣಗಳು	ವಿಲೆಯಾದ ಒಟ್ಟು ಪ್ರಕರಣಗಳು	ಮೊತ್ತ	ಷರಾ
1	2	3	4	5	6	7	8	9	10	11	12	13	14
1	4	10	14	–	–	–	–	1	13	–	1	–	–

ನಮೂನೆ – 10
ಮೊಕದ್ದಮೆಗಳು
ಜಿಲ್ಲಾ ಪಂಚಾಯತ್ ಉಡುಪಿ. 2016–17

ಕ್ರ. ಸಂ.	ಆರಂಭದ ಶಿಲ್ಕು	ಸ್ವೀಕೃತಿಗಳು	ಒಟ್ಟು	ರಾಜಿ ಮಾಡಿಕೊಂಡ ಪ್ರಕರಣಗಳು	ಮೊತ್ತ	ಶಿಕ್ಷೆಯಾದ ಪ್ರಕರಣಗಳು	ಮೊತ್ತ	ಸಕಾಲದಲ್ಲಿ ವಿಲೇಯಾದ ಪ್ರಕರಣಗಳು	ಬಾಕಿ ಇರುವ ಪ್ರಕರಣಗಳು	ದೋಷ ಮುಕ್ತವಾದ ಪ್ರಕರಣಗಳು	ವಿಲೆಯಾದ ಒಟ್ಟು ಪ್ರಕರಣಗಳು	ಮೊತ್ತ	ಷರಾ
1	2	3	4	5	6	7	8	9	10	11	12	13	14
1	18	–	18	–	–	8	–	6	4	–	14	–	–

ನಮೂನೆ-11 - ಮೊಕದ್ದಮೆಗಳು.

ದಿನಾಂಕ: 01-04-2017 ರಿಂದ 31-03-2018 ರವರೆಗೆ : 2017-18 ನೇ ಸಾಲಿನ ಆಡಳಿತ ವರದಿಗೆ ಮಾಹಿತಿ.

ಕ್ರ. ಸಂ.	ಮೊಕದ್ದಮೆಗಳ ಸಂಖ್ಯೆ	ನ್ಯಾಯಲಯದ ಹೆಸರು	ವಿವಾದಿತ ಪಕ್ಷಗಳು	
			ವಾದಿ	ಪ್ರತಿವಾದಿ
1	2	3	4	5
1	8072/2015	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ , ಬೆಂಗಳೂರು	ಶ್ರೀ ಬಿ.ನರಸಿಂಹ, ಗ್ರೇಡ್-1 ಕಾರ್ಯದರ್ಶಿ, ಪೆರ್ಡೂರು ಗ್ರಾಮ ಪಂಚಾಯತ್ , ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
2	8279/2014	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀಮತಿ ಬೆನ್ನಿ ಕ್ವಾಡ್ರಸ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೆಳ್ಳೆ ಗ್ರಾಮ ಪಂಚಾಯತ್, ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
3	6297/2015	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀಮತಿ ಎಸ್.ಕೆ. ಚಂದ್ರಿಕಾ, ಕಾರ್ಯದರ್ಶಿ ಗ್ರೇಡ್-2, ಮಜೂರು ಗ್ರಾಮ ಪಂಚಾಯತ್, ಉಡುಪಿ ತಾಲೂಕು (ನಿಯೋಜನೆ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಗೆ ದ್ವಿ.ದ.ಸಹಾಯಕರಾಗಿ)	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4	4224/2016	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಉಮಾಶಂಕರ ಚ್, ಕಾರ್ಯದರ್ಶಿ ಗ್ರೇಡ್-2, ಕಲ್ಯಾಣಪುರ ಗ್ರಾಮ ಪಂಚಾಯತ್ , ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
5	3296/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಅಪ್ಪು ಶೇರಿಗಾರ, ಕಾರ್ಯದರ್ಶಿ, ಪ್ರಭಾರ ಪಿಡಿಓ ಬೆಳಪು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
6	10581/2016	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಸದಾಶಿವ ಸೇರಿಗಾರ್, ಕಾರ್ಯದರ್ಶಿ, ವರಂಗ, ಕಾರ್ಕಳ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
7	5972/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಮಂಜುನಾಥ, ಪಿಡಿಓ, ಶಿರೂರು ಗ್ರಾಮ ಪಂಚಾಯತ್, ಕುಂದಾಪುರ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ

ಪ್ರಕರಣ ದಾಖಲಾದ ದಿನಾಂಕ	ಪ್ರಕರಣದ ಸ್ವರೂಪ	ಸದರಿ ವರ್ಷದಲ್ಲಿ ಪ್ರಕರಣವು ವಿಲೇಗೊಂಡಿದ್ದ ತೀರ್ಪಿನ ಸ್ವರೂಪ	ವಿಲೇಗೊಂಡಿರದಿದ್ದಲ್ಲಿ ಪ್ರಕರಣದ ಪ್ರಸ್ತುತ ಹಂತ.
6	7	8	9
20-10-2015	ಲೋಕಾಯುಕ್ತ ಪ್ರಕರಣದಲ್ಲಿ ಸೇವೆಯಿಂದ ವಜಾಗೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ.	ಮೇಲ್ಮನವಿ ಅರ್ಜಿ ಸ್ವೀಕೃತಗೊಂಡಿರುತ್ತದೆ.	ದಿ: 23-08-18 ರ ಮಾನ್ಯ KAT ಆದೇಶದಲ್ಲಿ ಪ್ರಕರಣವು ಮುಕ್ತಾಯಗೊಂಡಿರುತ್ತದೆ.
13-10-2014	ವರ್ಗಾವಣೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುತ್ತದೆ.	ಸರ್ಕಾರದ ಹಂತದಿಂದ ಜಿಲ್ಲೆಯೊಳಗೆ ವರ್ಗಾವಣೆಗೊಳಿಸಿದ ಆದೇಶದ ಮೇಲೆ ದಾಖಲಿಸಿದ ಅರ್ಜಿ ವಿಲೇಗೊಳಿಸಲಾಗಿದೆ.	ದಿ: 26-07-2017 ರ ಮಾನ್ಯ KAT ಆದೇಶದಲ್ಲಿ ಪ್ರಕರಣವು ಮುಕ್ತಾಯಗೊಂಡಿರುತ್ತದೆ.
21-07-2015	ಸರ್ಕಾರದ ಆದೇಶದಂತೆ ರಾಮನಗರ ಜಿಲ್ಲಾ ಪಂಚಾಯತ್ ಸದ್ರಿ ನೌಕರರಿಗೆ ವೇತನ ವ್ಯತ್ಯಾಸದ ಬಾಕಿಯನ್ನು ನಿಯಮಾನುಸಾರ ಪಾವತಿಸಲು ಪ್ರಕರಣ ದಾಖಲಾಗಿರುತ್ತದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
11-04-2016	ಸರ್ಕಾರದ ನಡವಳಿ ಸಂಖ್ಯೆ: ಗ್ರಾಅಪ/320/ಗ್ರಾಪಂಕಾ/2014 ಬೆಂಗಳೂರು ದಿನಾಂಕ: 6-2015 ರ ಆದೇಶವನ್ನು ರದ್ದುಪಡಿಸುವ ಬಗ್ಗೆ ಪ್ರಕರಣ ದಾಖಲಾಗಿರುತ್ತದೆ	ಸರ್ಕಾರದ ಆದೇಶವನ್ನು ರದ್ದುಪಡಿಸಲು ದಾಖಲಿಸಿರುವ ಅರ್ಜಿ ತಿರಸ್ಕೃತಗೊಂಡಿರುತ್ತದೆ.	ದಿ: 11-06-2018 ರ ಮಾನ್ಯ KAT ಆದೇಶದಲ್ಲಿ ಪ್ರಕರಣವು ಮುಕ್ತಾಯಗೊಂಡಿರುತ್ತದೆ.
19-06-2017	ಶ್ರೀ ಅಪ್ಪು ಶೇರಿಗಾರ, ಗ್ರಾಮ ಪಂಚಾಯತ್ ಕಾರ್ಯದರ್ಶಿ, ಪ್ರಭಾರ ಪಿಡಿಓ, ಬೆಳಪು, ಇವರು ದಿನಾಂಕ: 18-05-2017 ರಲ್ಲಿ ಸರ್ಕಾರಿ ಸೇವೆಯಿಂದ ವಜಾ ಮಾಡಿದ ಆದೇಶದ ಮೇಲೆ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
02-11-2016	ಶ್ರೀ ಸದಾಶಿವ ಸೇರಿಗಾರ್, ಗ್ರಾ. ಪಂ. ಕಾರ್ಯದರ್ಶಿ, ವರಂಗ, ಕಾರ್ಕಳ ತಾಲೂಕು, ಇವರು ಸರ್ಕಾರದಿಂದ ದಿನಾಂಕ: 29-07-2016 ರ ವರ್ಗಾವಣೆ ಆದೇಶದಂತೆ ಈ ಕಛೇರಿಯ ಆದೇಶ ದಿನಾಂಕ: 18-10-2016 ರಲ್ಲಿ ಕುಂದಾಪುರ ತಾಲೂಕಿನ ಖಾಲಿ ಇರುವ ಪಂಚಾಯತಿಗೆ ವರ್ಗಾವಣೆ ಮಾಡಿದ ಆದೇಶದ ಮೇಲೆ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
09-10-2017	ಶ್ರೀ ಮಂಜುನಾಥ, ಪಿಡಿಓ ಶಿರೂರು ಗ್ರಾ ಪಂ. ಕುಂದಾಪುರ ತಾ, ಇವರು ಸರ್ಕಾರದಿಂದ ದಿ: 25-09-2016 ರ ವರ್ಗಾವಣೆ ಆದೇಶ ದಂತೆ ಈ ಕಛೇರಿಯ ಆದೇಶ ದಿ: 03-10-2016 ರಲ್ಲಿ ಕುಂದಾಪುರ ತಾಲೂಕಿನ ಕಾಳಾವರ ಗ್ರಾ. ಪಂ.ಗೆ ವರ್ಗಾವಣೆ ಮಾಡಿದ ಆದೇಶದ ಮೇಲೆ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.

ಕ್ರ. ಸಂ.	ಮೊಕದ್ದಮೆಗಳ ಸಂಖ್ಯೆ	ನ್ಯಾಯಲಯದ ಹೆಸರು	ವಿವಾದಿತ ಪಕ್ಷಗಳು	
			ವಾದಿ	ಪ್ರತಿವಾದಿ
1	2	3	4	5
8	10815/2016	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಮಂಜುನಾಥ, ಪಿಡಿಓ, ಶಿರೂರು ಗ್ರಾಮ ಪಂಚಾಯತ್, ಕುಂದಾಪುರ	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
9	10222/2016	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀಮತಿ ಕಮಲ, ಪಿಡಿಓ ಕೆಮ್ಮಣ್ಣು ಗ್ರಾ,ಪಂ, ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
10	6431/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಗಣಪ ಮೊಗವೀರ, ಪಿಡಿಓ, ಶಿರಿಯಾರ ಗ್ರಾ.ಪಂ, ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
11	5698/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಸಂತೋಷ್ ಕುಮಾರ್, ಪಿಡಿಓ, ಹೊಂಬಾಡಿ-ಮಂಡಾಡಿ ಗ್ರಾ.ಪಂ, ಕುಂದಾಪುರ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
12	4214 ಮತ್ತು 4215/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀಮತಿ ಮೀರಾ ಆರ್. ಗ್ರೇಡ್-2 ಕಾರ್ಯದರ್ಶಿ, ಕೋಟತಟ್ಟು ಗ್ರಾ,ಪಂ, ಶ್ರೀಮತಿ ವಸಂತಿ ಶೆಟ್ಟಿ, ಗ್ರೇಡ್-2 ಕಾರ್ಯದರ್ಶಿ, ಉಡುಪಿ ತಾಲೂಕು	ಸರ್ಕಾರ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
13	4703/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಅನಂತಪದ್ಮನಾಭ ನಾಯಕ್, ಪಿಡಿಓ ನಾಲ್ಕೂರು ಗ್ರಾ,ಪಂ, ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
14	4639/2017	ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ ಬೆಂಗಳೂರು	ಶ್ರೀ ಸುರೇಶ್, ಪಿಡಿಓ ಕಲ್ಯಾಣಪುರ ಗ್ರಾ,ಪಂ, ಉಡುಪಿ ತಾಲೂಕು	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ

ಪ್ರಕರಣ ದಾಖಲಾದ ದಿನಾಂಕ	ಪ್ರಕರಣದ ಸ್ವರೂಪ	ಸದರಿ ವರ್ಷದಲ್ಲಿ ಪ್ರಕರಣವು ವಿಲೇಗೊಂಡಿದ್ದ ತೀರ್ಪಿನ ಸ್ವರೂಪ	ವಿಲೇಗೊಂಡಿರದಿದ್ದಲ್ಲಿ ಪ್ರಕರಣದ ಪ್ರಸ್ತುತ ಹಂತ.
6	7	8	9
08-11-2016	ಶ್ರೀ ಮಂಜುನಾಥ, ಪಿಡಿಓ ಶಿರೂರು ಗ್ರಾಮ ಪಂಚಾಯತ್, ಕುಂದಾಪುರ ತಾಲೂಕು, ಇವರು ಸರ್ಕಾರದಿಂದ ದಿನಾಂಕ: 29-07-2016 ರ ವರ್ಗಾವಣೆ ಆದೇಶದಂತೆ ಈ ಕಛೇರಿಯ ಆದೇಶ ದಿನಾಂಕ: 03-10-2016 ರಲ್ಲಿ ಕುಂದಾಪುರ ತಾಲೂಕಿನ ಕಾಳಾವರ ಗ್ರಾ ಮ ಪಂಚಾಯಿತಿಗೆ ವರ್ಗಾವಣೆ ಮಾಡಿದ ಆದೇಶದ ಮೇಲೆ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
02-10-2016	ಶ್ರೀಮತಿ ಕಮಲ, ಪಿಡಿಓ ಕೆಮ್ಮಣ್ಣು ಗ್ರಾ. ಪಂ, ಉಡುಪಿ ತಾಲೂಕು ಇವರು ಸರ್ಕಾರದಿಂದ ದಿನಾಂಕ: 29-07-2016 ರಲ್ಲಿ ಕೆಮ್ಮಣ್ಣು ಗ್ರಾ.ಪಂ. ನಿಂದ ಗಂಗೊಳ್ಳಿ ಗ್ರಾ.ಪಂ. ಗೆ ವರ್ಗಾವಣೆ ಮಾಡಿದ ಆದೇಶದ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
12-10-2017	ಶ್ರೀ ಗಣಪ ಮೊಗವೀರ, ಪಿಡಿಓ (ಅಮಾನತ್ತು), ಶಿರಿಯಾರ ಗ್ರಾ.ಪಂ, ಉಡುಪಿ ತಾಲೂಕು, ಇವರನ್ನು ಕರ್ತವ್ಯ ಲೋಪದ ಆರೋಪ ಪೋಲಿಸ್ ಠಾಣೆಯಲ್ಲಿ ಸಾಬೀತಾಗಿ ದೋಷಾರೋಪಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಕೆಯಾದ ಹಿನ್ನಲೆಯಲ್ಲಿ ದಿನಾಂಕ: 12-10-2017 ರ ಈ ಕಛೇರಿಯ ಆದೇಶದಂತೆ ಅಮಾನತ್ತಿನಲ್ಲಿರಿಸಿ, ಆದೇಶ ನೀಡಲಾಗಿದ್ದು, ಸದ್ರಿ ಆದೇಶದ ಮೇಲೆ ಮನ್ಯ ನ್ಯಾಯಾಲಯಕ್ಕೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
18-09-2017	ಶ್ರೀ ಸಂತೋಷ್ ಕುಮಾರ್, ಪಿಡಿಓ, ಹೊಂಬಾಡಿ-ಮಂಡಾಡಿ ಗ್ರಾ.ಪಂ, ಕುಂದಾಪುರ ತಾಲೂಕು, ಇವರು ಕರ್ನಾಟಕ ಲೊಕಾಯುಕ್ತ ಸಂಸ್ಥೆ ಸಂಖ್ಯೆ: ಉಪಲೋ-2/ಡಿಇ/896/2017 ಅ.ನಿ.ವಿ-7 ದಿನಾಂಕ: 07-08-2017 ರ ಪತ್ರದಲ್ಲಿ ಸಲ್ಲಿಕರಯಾದ ದೋಷಾರೋಪಣೆ ಪಟ್ಟಿಯ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.

	ದಾಖಲಿಸಿರುತ್ತಾರೆ.		
28-07-2017	ಶ್ರೀಮತಿ ಮೀರಾ ಆರ್. ಗ್ರೇಡ್-2 ಕಾರ್ಯದರ್ಶಿ, ಕೋಟತಟ್ಟು ಗ್ರಾ.ಪಂ, ಉಡುಪಿ ತಾಲೂಕು ಮತ್ತು ಶ್ರೀಮತಿ ವಸಂತಿ ಶೆಟ್ಟಿ, ಗ್ರೇಡ್-2 ಕಾರ್ಯದರ್ಶಿ, ಉಡುಪಿ ತಾಲೂಕು ಇವರು ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ/313/ ಗ್ರಾ ಪಂಕಾ/ 2013 ಬೆಂಗಳೂರು ದಿನಾಂಕ: 17-09-2014 ರ ಅಧಿಸೂಚನೆಯಲ್ಲಿ ಗ್ರಾ.ಪಂ.ಕಾರ್ಯದರ್ಶಿಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದ ಬಲಕ್ಕಾನುಸಾರ 3:2 ಅನುಪಾತದಲ್ಲಿ ಭರ್ತಿ ಮಾಡಲು ತಿಳಿಸಿರುವ ಸರ್ಕಾರದ ಅಧಿಸೂಚನೆ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ ದಾಖಲಿಸಿರುತ್ತಾರೆ,	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
16-08-2017	ಶ್ರೀ ಅನಂತ ಪದ್ಮನಾಭ ನಾಯಕ್, ಪಿಡಿಓ, ನಾಲ್ಕೂರು ಗ್ರಾ.ಪಂ, ಉಡುಪಿ ತಾಲೂಕು ಇವರು ಸರ್ಕಾರದಿಂದ ದಿನಾಂಕ: 05-07-2017 ರ ಸರ್ಕಾರದ ವರ್ಗಾವಣೆ ಆದೇಶದ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.
19-07-2017	ಶ್ರೀ ಸುರೇಶ್, ಪಿಡಿಓ ಕಲ್ಯಾಣಪುರ ಗ್ರಾ.ಪಂ,. ಉಡುಪಿ ತಾಲೂಕು, ಇವರು ಸರ್ಕಾರದಿಂದ ದಿನಾಂಕ: 05-07-2017 ರ ಸರ್ಕಾರದ ವರ್ಗಾವಣೆ ಆದೇಶದ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ ದಾಖಲಿಸಿರುತ್ತಾರೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.	ಪ್ರಕರಣ ವಿಚಾರಣಾ ಹಂತದಲ್ಲಿದೆ.

ನಮೂನೆ –12
ಬಂಡವಾಳ ಹೂಡಿಕೆ
ಉಡುಪಿ ಜಿಲ್ಲಾ ಪಂಚಾಯತ್

ವರ್ಷ	ಬಂಡವಾಳ ಹೂಡಿಕೆಯ ಸ್ವರೂಪ	ಹೂಡಿಕೆ ಮಾಡಲಾದ ಮೊತ್ತ	ವಾಪಾಸ್ಸು ಪಡೆದದ್ದು	ಪ್ರಾರಂಭಿಕ ಮೊತ್ತ	ಮುಕ್ತಾಯದ ಮೊತ್ತ
1	2	3	4	5	6
2017–18	–	–	–	–	–
2016–17	–	–	–	–	–

ನಮೂನೆ –13
ಸಾಲಗಳು
ಉಡುಪಿ ಜಿಲ್ಲಾ ಪಂಚಾಯತಿ 2017–18

ವರ್ಷ	ಸಾಲದ ಅವಧಿ ಮತ್ತು ಉದ್ದೇಶ ಮತ್ತು ಪಡೆಯಲಾದ ವರ್ಷ	ಸಾಲ ಮಂಜೂರಾದ ಕೆಲಸದ ಒಟ್ಟು ವೆಚ್ಚ	ಸಹಾಯ ನುದಾನ ವೆಂದು ಪರಿಗಣಿಸಲಾದ ಭಾಗದ ಮೊತ್ತ	ಪೂರ್ಣ ಸಾಲದ ಮೊತ್ತ ಮತ್ತು ಬಡ್ಡಿಯ ದರ		ಸಾಲ ಮಂಜೂರಾದ ಸರ್ಕಾರದ ಆದೇಶ		ಪಾವತಿಸಲಾದ ಮೊತ್ತ						ಇನ್ನೂ ಬಾಕಿಯಿರುವವು	
								ವರದಿ ಮಾಡಲಾದ ವರ್ಷ		ಹಿಂದಿನ ವರ್ಷದವರೆಗೆ		ಒಟ್ಟು			
				ಮೊತ್ತ	ಬಡ್ಡಿಯ ದರ	ಸಂಖ್ಯೆ	ದಿನಾಂಕ	ಬಡ್ಡಿ	ಅಸಲು	ಬಡ್ಡಿ	ಅಸಲು	ಬಡ್ಡಿ	ಅಸಲು	ಬಡ್ಡಿ	ಅಸಲು
1	2	3	4	5	6	7	8	9	10	11	12	13	14	15	16
2017–18	–	–	–	–	––	–	–	–	–	–	–	–	–	–	–
2016–17	–	–	–	–	–	–	–	–	–	–	–	–	–	–	–

ನಮೂನೆ 14

ಜಿಲ್ಲಾ ಪಂಚಾಯತ್ ಉಡುಪಿ

2017–18ನೇ ವರ್ಷದ ವಾರ್ಷಿಕ ಸ್ವೀಕೃತಿ ಮತ್ತು ವೆಚ್ಚದ ವಿವರ

ಘೋಷ್ವಾರೆ

	ಸಾಮಾನ್ಯ (ಜಿಲ್ಲಾ ಪಂಚಾಯತ್ ಕಂದಾಯ)	ಸರ್ಕಾರದಿಂದ ಪಡೆಯಲಾದ ಅನುದಾನ	ಅಸಾಮಾನ್ಯ ಸಾಲ ಮತ್ತು ರದ್ದು ಮಾಡಿದ ಲೆಕ್ಕ ಶೀರ್ಷಿಕೆ	ಒಟ್ಟು
ಪ್ರಾರಂಭಿಕ ಶುಲ್ಕ 01/04/2017	–	896792648.00	–	896792648.00
2017–18ನೇ ವರ್ಷದಲ್ಲಿ ಸ್ವೀಕೃತವಾದದ್ದು	–	1687693441.00	–	1687693441.00
ಒಟ್ಟು	–	2584486089.00	–	2584486089.00
2017–18ನೇ ವರ್ಷದಲ್ಲಿ ವೆಚ್ಚವಾದದ್ದು	–	1547274714.00	–	1547274714.00
ಮುಕ್ತಾಯಗೊಳಿಸಲಾದ ಬಾಕಿ 31–03–2018	–	1037211375.00	–	1037211375.00

ಷರಾ: 2016-17**ನೇ ಸಾಲಿನ ಅಂತಿಮ ಶಿಲ್ಕು ರೂ.** 1032517493.00 **ಇದ್ದು** 2015-16 **ಮತ್ತು** 2016-17**ರಲ್ಲಿ ಸರ್ಕಾರ ಹೊಂದಾಣಿಕೆ ಮಾಡಿ** 2017-18**ರ ಪ್ರಕಾರ ಪರಿಷ್ಕೃತ ಪ್ರಾರಂಭ ಶಿಲ್ಕು ರೂ.** 896792648.00 **ಗೆ ಸರಿಪಡಿಸಿದೆ.**

ನಮೂನೆ 14

ಜಿಲ್ಲಾ ಪಂಚಾಯತ್ ಉಡುಪಿ

2016-17ನೇ ವರ್ಷದ ವಾರ್ಷಿಕ ಸ್ವೀಕೃತಿ ಮತ್ತು ವೆಚ್ಚದ ವಿವರ

ಘೋಷ್ವಾರೆ

ರೂ.ಗಳಲ್ಲಿ

	ಸಾಮಾನ್ಯ (ಜಿಲ್ಲಾ ಪಂಚಾಯತ್ ಕಂದಾಯ)	ಸರ್ಕಾರದಿಂದ ಪಡೆಯಲಾದ ಅನುದಾನ	ಅಸಾಮಾನ್ಯ ಸಾಲ ಮತ್ತು ರದ್ದು ಮಾಡಿದ ಲೆಕ್ಕ ಶೀರ್ಷಿಕೆ	ಒಟ್ಟು
ಪ್ರಾರಂಭಿಕ ಶುಲ್ಕ 01/04/2016	-	901384261.00	-	901384261.00
2016-17ನೇ ವರ್ಷದಲ್ಲಿ ಸ್ವೀಕೃತವಾದದ್ದು	-	1810827077.00	-	1810827077.00
ಒಟ್ಟು	-	2712211338.00	-	2712211338.00
2016-17ನೇ ವರ್ಷದಲ್ಲಿ ವೆಚ್ಚವಾದದ್ದು	-	1679693845.00	-	1679693845.00
ಮುಕ್ತಾಯಗೊಳಿಸಲಾದ ಬಾಕಿ 31-03-2017	-	1032517493.00	-	1032517493.00

ನಮೂನೆ–15
2017–18ನೇ ವರ್ಷದ ತಾಲೂಕು/ಗ್ರಾಮ ಪಂಚಾಯತಿಗಳ ವಿವರ
ಜಿಲ್ಲಾ ಪಂಚಾಯತ್, ಉಡುಪಿ

ಎ. ವೇತನ ವಿವರಗಳೊಂದಿಗೆ ಸಿಬ್ಬಂದಿಯ ಅನುಚ್ಛೇದ

ಮಾರ್ಚ–2018 ರಲ್ಲಿದ್ದಂತೆ, ಉಡುಪಿ ಜಿಲ್ಲೆಯ, ಉಡುಪಿ/ಕುಂದಾಪುರ/ಕಾರ್ಕಳ, ತಾಲೂಕು ಪಂಚಾಯತ್ ಕಛೇರಿಯ, ಅಧಿಕಾರಿ / ಸಿಬ್ಬಂದಿ ವರ್ಗದವರ ಮಂಜೂರಾದ / ಭರ್ತಿಯಾದ / ಖಾಲಿ ಇರುವ ಹುದ್ದೆಗಳ ವಿವರ

1	2	3	4	5	6	7	8	9	10	11	12	13	14	15
ಕ್ರ. ಸಂ	ಹುದ್ದೆಯ ಹೆಸರು	ಉಡುಪಿ ತಾಲೂಕು ಪಂಚಾಯತ್				ಕುಂದಾಪುರ ತಾಲೂಕು ಪಂಚಾಯತ್			ಕಾರ್ಕಳ ತಾಲೂಕು ಪಂಚಾಯತ್			ಒಟ್ಟು		
